ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



'ಒಂಟಿ ಸೇತುವೆ'ಯಾದ
ತೆಲಂಗಾಣ ಹೋರಾಟಗಾರ್ತಿ
ಕೊಂಡಪಲ್ಲಿ ಕೋಟೇಶ್ವರಮ್ಮ
ಇನ್ನಿಲ್ಲ

ಸಂಪುಟ 12 | ಸಂಚಿಕೆ 39 | ಸೆಪ್ಟೆಂಬರ್ 24-30, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com




ಕೇರಳ ಪುನರ್ ನಿರ್ಮಾಣದ ಸವಾಲುಗಳು



ಜೆಎನ್‌ಯು: ಲಾಲ್ ಹೈ... ಲಾಲ್ ರಹೇಗಾ...

ದಿವಾಳಿಕೋರ ರಾಜಕಾರಣದ ವಿರುದ್ಧ ದಂಗೆ



ತ್ರಿಪುರ ಚುನಾವಣಾ ಪ್ರಹಸನ





ಅಂಗನವಾಡಿ ಅಮ್ಮಂದಿರಿಗೆ ಪಿಂಚಣಿ

VJK 80 ಐದು ದಶಕದ ಹೋರಾಟಗಳ ಮೆಲುಕು



ಆಳುವ ಪಕ್ಷದ ಹಿತಸಾಧನೆಗಾಗಿ ತ್ರಿವಳಿ ತಲಾಖ್ ಸುಗ್ರೀವಾಜ್ಞೆ –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಕೇಂದ್ರ ಸರಕಾರ ತ್ರಿವಳಿ ತಲಾಖ್ ಕುರಿತಂತೆ ಸುಗ್ರೀವಾಜ್ಞೆ ಹೊರಡಿಸಿರುವುದರ ಹಿಂದಿರುವುದು ಮುಸ್ಲಿಂ ಮಹಿಳೆಯರ ಕಲ್ಯಾಣದ ಬದಲು ಬೇರೆಯೇ ಪರಿಗಣನೆ, ಇದರ ಅಗತ್ಯವಿರಲಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ತ್ರಿವಳಿ ತಲಾಖ್ ಮಸೂದೆ ರಾಜ್ಯಸಭೆಯಲ್ಲಿ ಚರ್ಚೆಯಲ್ಲಿದೆ. ಅದರ ಮೇಲೆ ಪೂರ್ಣ ಪ್ರಮಾಣದ ಚರ್ಚೆಯಾಗಬೇಕಿದೆ. ಒಂದು ಆಯ್ಕೆ ಸಮಿತಿಗೆ ಅದನ್ನು ಒಪ್ಪಿಸಬೇಕೇ ಎಂಬ ಚರ್ಚೆಯೂ ನಡೆಯುತ್ತಿದೆ. ಈಗ ಹೊರಡಿಸಿರುವ ಸುಗ್ರೀವಾಜ್ಞೆ ಸಂಸತ್ತನ್ನು ಬದಿಗೆ ತಳ್ಳುವ ಒಂದು ಪ್ರಜಾಪ್ರಭುತ್ವ–ವಿರೋಧಿ ಹೆಜ್ಜೆ ಎಂದು ಪೊಲಿಟ್‌ಬ್ಯುರೊ ಟೀಕಿಸಿದೆ.

ಈಗಾಗಲೇ ಸುಪ್ರಿಂ ಕೋರ್ಟ್ ತೀರ್ಪು ವಿವಾಹ ವಿಚ್ಛೇದನದ ತ್ರಿವಳಿ ತಲಾಖ್ ವಿಧಾನ ಕಾನೂನುಬಾಹಿರ ಎಂದು ಘೋಷಿಸಿದೆ. ಈ ಶಾಸನ ಒಂದು ಸಿವಿಲ್ ತಪ್ಪನ್ನು ಕ್ರಿಮಿನಲ್ ಅಪರಾಧವಾಗಿ ಮಾಡಿ ಗರಿಷ್ಟ ಮೂರು ವರ್ಷಗಳ ಶಿಕ್ಷೆ ಕೊಡಬೇಕೆಂದು ಹೇಳುತ್ತದೆ. ಇದು ತಪ್ಪಾಗಿ ಪರಿಕಲ್ಪಿಸಿರುವ ಒಂದು ಕ್ರಮವಾಗಿದ್ದು, ಸಂತ್ರಸ್ತ ಮಹಿಳೆಯರ ಹಿತಗಳಿಗೆ ನೆರವಾಗುವಂತಹದ್ದಲ್ಲ ಎಂದಿರುವ ಸಿಪಿಐ(ಎಂ), ಈ ಮಸೂದೆಯಲ್ಲಿ ಇನ್ನಿತರ ದೋಷಗಳೂ ಇವೆ ಎಂದಿದೆ.

ಇದು ಆಳುವ ಪಕ್ಷದ ರಾಜಕೀಯ ಹಿತ ಈಡೇರಿಸಲಿಕ್ಕಾಗಿ ರೂಪಿಸಿರುವಂತದ್ದು. ಇದನ್ನು ಒಪ್ಪಲು ಸಾಧ್ಯವಿಲ್ಲ ಎನ್ನುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಸಂಸತ್ತು ಈ ವಿಷಯದಲ್ಲಿ ಒಂದು ಪರಿಷ್ಕೃತ ಶಾಸನವನ್ನು ಅಂಗೀಕರಿಸಬೇಕು ಎಂದಿದೆ.

ಸೆಕ್ಷನ್ 498ಎ: ಮಾರ್ಪಡಿಸಿದ ಸುಪ್ರಿಂ ಕೋರ್ಟ್ ತೀರ್ಪಿಗೆ ಸ್ವಾಗತ

ಆದರೆ ಹಿಂದಿನ ತೀರ್ಪಿನ ತಪ್ಪು ಭಾವನೆಗಳನ್ನು ಪರಿಶೀಲಿಸಿಲ್ಲ– ಎಐಡಿಡಬ್ಲ್ಯುಎ

ಸುಪ್ರಿಂ ಕೋರ್ಟ್ ವರದಕ್ಷಿಣೆ ಕಿರುಕುಳಕ್ಕೆ ಸಂಬಂಧಪಟ್ಟ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 498ಎ ಕುರಿತ ತನ್ನ ಹಿಂದಿನ ತೀರ್ಪನ್ನು ಮಾರ್ಪಡಿಸಿದ ತೀರ್ಪನ್ನು ಸಪ್ಟಂಬರ್ 15 ರಂದು ನೀಡಿದೆ. ಇದರಲ್ಲಿ ಕುಟುಂಬ ಕಲ್ಯಾಣ ಸಮಿತಿಗಳನ್ನು ರಚಿಸಬೇಕೆಂಬ ಆದೇಶವನ್ನು ಕೈಬಿಡಲಾಗಿದೆ. ಇದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಸ್ವಾಗತಿಸಿದೆ

ಈ ಹಿಂದೆ ರಾಜೇಶ ಶರ್ಮ ಕೇಸಿನಲ್ಲಿ ಸುಪ್ರಿಂ ಕೋರ್ಟ್ ಸೆಕ್ಷನ್ 498ಎ 'ದುರುಪಯೋಗವಾಗುತ್ತಿದೆ' ಎಂಬ ದೂರನ್ನು ನಿವಾರಿಸಲು ಕುಟುಂಬ ಕಲ್ಯಾಣ ಸಮಿತಿಗಳನ್ನು ರಚಿಸಬೇಕು ಎಂದು ಆದೇಶ ನೀಡಿತ್ತು. ಈ ಸಮಿತಿಗಳು ಸೆಕ್ಷನ್ 498 ಎ ಅಡಿಯಲ್ಲಿ ಕೌಟುಂಬಿಕ ಹಿಂಸೆ ಮತ್ತು ವರದಕ್ಷಿಣೆ ಕಿರುಕುಳದ ಎಲ್ಲ ಪ್ರಕರಣಗಳನ್ನು ಪರಿಶೀಲಿಸಬೇಕು ಎಂದಿತ್ತು. ಈ ಬಗ್ಗೆ ಬಹಳಷ್ಟು ಆಕ್ಷೇಪಗಳು ಬಂದಿದ್ದವು.ಇದರ ಮರುವಿಮರ್ಶೆಯಾಗಬೇಕೆಂಬ ಅರ್ಜಿಯನ್ನು ಸುಪ್ರಿಂ ಕೋರ್ಟ್ ಪರಿಶೀಲಿಸಿ, ಇಂತಹ ಸಮಿತಿಗಳ ರಚನೆ ಮತ್ತು ಅವುಗಳಿಗೆ ಅಧಿಕಾರ ನೀಡಬೇಕೆನ್ನುವುದು ದೋಷಪೂರ್ಣ, ಮತ್ತು ಅದಕ್ಕೆ ಅವಕಾಶವಿಲ್ಲ, ಅದು ಕಾನೂನಿನ ಪ್ರಕಾರ ಇಲ್ಲ ಎಂದು ಈಗ ಹೇಳಿದೆ. ಇದನ್ನು ಎಐಡಡಬ್ಲ್ಯುಎ ಸ್ವಾಗತಿಸಿದೆ.

ಎಐಡಿಡಬ್ಲ್ಯುಎ ಈ ಕೇಸಿನಲ್ಲಿ ಮಧ್ಯಪ್ರವೇಶ ಅರ್ಜಿ ಹಾಕಿತ್ತು. ಇಂತಹ ಸಮಿತಿಗಳು ನ್ಯಾಯಾಂಗಕ್ಕೆ ಮೀರಿದ ಸಮಿತಿಗಳಾಗಿದ್ದು ಈ ವಿಷಯಗಳನ್ನು ಪರಿಶೀಲಿಸುವ ಅವುಗಳ ಯೋಗ್ಯತೆ ಸಂದೇಹಾಸ್ಪದವಾಗಿದೆ. ಇಂತಹ ಸಮಿತಿಗಳಿಗೆ ಅವಕಾಶ ಕೊಡುವುದೆಂದರೆ ಖಾಪ್ ಪಂಚಾಯತುಗಳಿಗೆ ಅಥವ ಅಂತಹ ಇತರ

ಪುಟ 7 ನೋಡಿ

ಜೆಎನ್‌ಯು ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಎಡಶಕ್ತಿಗಳಿಗೆ ಭಾರೀ ವಿಜಯ



ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘ(ಜೆಎನ್‌ಯುಎಸ್‌ಯು) ಚುನಾವಣೆಗಳಲ್ಲಿ ಈ ವರ್ಷ ಮತ್ತೆ ಎಡ ಶಕ್ತಿಗಳು ವಿಜಯ ಗಳಿಸಿದ್ದಾರೆ. ಈ ವರ್ಷದ ವಿಶೇಷವೆಂದರೆ ಸಂಘ ಪರಿವಾರದ ಎಬಿವಿಪಿಯ ಬಲವಾದ ವಿರೋಧದ ನಡುವೆಯೂ, ಆಧ್ಯಕ್ಷ, ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿ ಈ ನಾಲ್ಕೂ ಹುದ್ದೆಗಳಲ್ಲಿ 'ಎಡ ಐಕ್ಯತೆ'ಯ ಅಭ್ಯರ್ಥಿಗಳು ಭಾರೀ ಅಂತರದಿಂದ ಜಯ ಗಳಿಸಿದ್ದಾರೆ. ಅಲ್ಲದೆ 29 ರಲ್ಲಿ 26 ವಿದ್ಯಾರ್ಥಿ ಕೌನ್ಸಿಲ್ ಸ್ಥಾನಗಳನ್ನು ಗೆದ್ದುಕೊಂಡಿದ್ದಾರೆ.

ಎಐಎಸ್‌ಎ, ಎಸ್‌ಎಫ್‌ಐ, ಎಐಎಸ್‌ಎಫ್ ಮತ್ತು ಡಿಎಸ್‌ಎಫ್ 'ಲೆಫ್ಟ್ ಯುನಿಟಿ'(ಎಡ ಐಕ್ಯತೆ) ಎಂಬ ಸಂಯುಕ್ತ ರಂಗ ರಚಿಸಿಕೊಂಡು ಈ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು. ಎದುರಾಳಿಗಳಾಗಿ ಎಬಿವಿಪಿ ಮಾತ್ರವಲ್ಲ, ಬಿರ್ಸ ಅಂಬೇಡ್ಕರ್ ಫುಲೆ ವಿದ್ಯಾರ್ಥಿ ಸಂಘ(ಬಾಪ್ಸ), ಆರ್‌ಜೆಡಿಯ ವಿದ್ಯಾರ್ಥಿ ಸಂಘಟನೆ ಮತ್ತು ಇತರ ಹಲವು ಸ್ವತಂತ್ರ ವಿದ್ಯಾರ್ಥಿಗಳು ಸ್ಪರ್ಧಿಸಿದ್ದರು.









ಈ ಬಾರಿಯ ಚುನಾವಣೆಯಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ 67.8ಶೇ.ದಷ್ಟು ವಿದ್ಯಾರ್ಥಿಗಳು ಭಾಗವಹಿಸಿದ್ದರು. 5185 ವಿದ್ಯಾರ್ಥಿಗಳು ಮತದಾನ ಮಾಡಿದರು ಎಂದು ವರದಿಯಾಗಿದೆ.

ಅಧ್ಯಕ್ಷರಾಗಿ ಎನ್ ಸಾಯಿ ಬಾಲಾಜಿ 2151 ಮತಗಳನ್ನು ಪಡೆದು 1179 ಮತಗಳ ಅಂತದಲ್ಲಿ ಆಯ್ಕೆಯಾದರು. ಸಮೀಪದ ಎಬಿವಿಪಿ ಪ್ರತಿಸ್ಪರ್ಧಿಗೆ ದೊರೆತ ಮತಗಳು 972.

ಉಪಾಧ್ಯಕ್ಷರಾಗಿ ಸಾರಿಕಾ ಚೌಧರಿ 1579 ಮತಗಳ ಅಂತರದಿಂದ ಆಯ್ಕೆಯಾದರು. ಅವರಿಗೆ 2592 ಮತಗಳು ದೊರೆತರೆ ಸಮೀಪದ ಎಬಿವಿಪಿ ಪ್ರತಿಸ್ಪರ್ಧಿಗೆ ದೊರೆತ ಮತಗಳು 1013.

ಪ್ರಧಾನ ಕಾರ್ಯದರ್ಶಿಯಾಗಿ ಎಜಾಝ್ ಅಹ್ಮದ್ ರಾಥೆರ್ 1193 ಮತಗಳ ಅಂತರದಿಂದ ಗೆದ್ದರು. ಅವರಿಗೆ ದೊರೆ ಮತಗಳು 2426.

ಜಂಟಿ ಕಾರ್ಯದರ್ಶಿಯಾಗಿ ಅಮೃತಾ ಜಯದೀಪ್ 2047 ಮತಗಳನ್ನು ಪಡೆದು, 757 ಮತಗಳ ಅಂತರದಿಂದ ಗೆದ್ದರು.

ಜೆಎನ್‌ಯು ಮೇಲೆ ಮೂರು ವರ್ಷಗಳ ಸತತ ದಾಳಿ ಮತ್ತು ತಮ್ಮ ಪರವಾಗಿರುವ ಉಪಕುಲಪತಿಗಳು ವಿದ್ಯಾರ್ಥಿಗಳ, ಅಧ್ಯಾಪಕರ ವಿರೋಧದ ಹೊರತಾಗಿಯೂ ತಳವೂರಿರುವುದರಿಂದ ತಾವೇ ಈ ಬಾರಿಯ ವಿಜೇತರು ಎಂದು ಹೇಳಿಕೊಳ್ಳುತ್ತಿದ್ದ ಎಬಿವಿಪಿ ಮಂದಿಗೆ ವಿವಿಯ ವಿವಿಧ ವಿಭಾಗಗಳ ವಿದ್ಯಾರ್ಥಿ ಮಂಡಳಿ ಮತ ಎಣಿಕೆಯಲ್ಲಿ, ವಿಶೇಷವಾಗಿ ಅವರು ಬಲವಾಗಿ ನಂಬಿದ್ದ ವಿಜ್ಞಾನ ವಿಭಾಗಗಳಲ್ಲೂ ಎಡ ಅಭ್ಯರ್ಥಿಗಳ ಮುನ್ನಡೆ ಅನಿರೀಕ್ಷಿತವಾಗಿತ್ತು ಎನ್ನಲಾಗಿದೆ. ಮೋದಿ ಸರಕಾರದ ಧೋರಣೆಗಳಿಂದಾಗಿ ಸ್ಕಾಲರ್‌ಶಿಪ್‌ಗಳ ಕಡಿತ, ಎಂಫಿಲ್, ಪಿಹೆಚ್‌ಡಿ ಸೀಟುಗಳ ಕಡಿತ ಮತ್ತು ಅನುದಾನಗಳ ಕಡಿತ ಎಲ್ಲಕಿಂತ ಹೆಚ್ಚಾಗಿ ವಿಜ್ಞಾನ ವಿಭಾಗಗಳನ್ನು ಬಹಳವಾಗಿ ತಟ್ಟಿದೆ ಎಂಬುದನ್ನು ಬಹುಶಃ ಅರಿಯಲಾರದ ಅವರು ಕುಪಿತರಾಗಿ ನಾಲ್ಕು ಪದಾಧಿಕಾರಿಗಳ ಚುನಾವಣೆಗಳ ಮತ ಎಣಿಕೆ ಕೆಲಸಕ್ಕೆ ಅಡ್ಡಿಯುಂಟು ಮಾಡಲು ದಾಂಧಲೆ ನಡೆಸಿದರು. ಇದರಿಂದಾಗಿ ಮತ ಎಣಿಕೆ ಸ್ವಲ್ಪಕಾಲ ಸ್ಥಗಿತಗೊಂಡಿತು. ಈ ನಡುವೆ ವಿದ್ಯಾರ್ಥಿ ಸಂಘದ ಕಳೆದ ವರ್ಷದ ಪದಾಧಿಕಾರಿಗಳ ಮೇಲೆ ಹಲ್ಲೆಗಳನ್ನೂ ನಡೆಸಲಾಯಿತು.

ಚುನಾವಣಾ ಫಲಿತಾಂಶಗಳು ಪ್ರಕಟವಾದ ಮೇಲೂ ಎಬಿವಿಪಿ ಹಿಂಸಾಚಾರ ಮುಂದುವರೆದಿದೆ. ಹೊಸದಾಗಿ ಚುನಾಯಿತರಾದ ಅಧ್ಯಕ್ಷರ ಮೇಲೆ ಹಲ್ಲೆಯ ಪ್ರಯತ್ನ ನಡೆದಿದೆ. ಹತಾಶರಾಗಿರುವ ಎಬಿವಿಪಿ ಮಂದಿಯ ರಕ್ಷಣೆಗೆ ದೇಶದ ರಕ್ಷಣಾ ಮಂತ್ರಿಗಳು(ಇವರು ಜೆಎನ್‌ಯು ಹಳೆ ವಿದ್ಯಾರ್ಥಿ) ಧಾವಿಸಿದ್ದಾರೆ ಆದರೆ ಜೆಎನ್‌ಯು ಅಧ್ಯಾಕರ ಸಂಘ ಎಬಿವಿಪಿ ಹಿಂಸಾಚಾರವನ್ನು ಬಲವಾಗಿ ಖಂಡಿಸಿದೆ.

ಜೆಎನ್‌ಯು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಹೋರಾಟಗಳನ್ನು ಬೆಂಬಲಿಸಿ–ಪ್ರಕಾಶ ಕಾರಟ್

ಜೆಎನ್‌ಯು ನಲ್ಲಿ ಸಂಯುಕ್ತ ಎಡ ಮೈತ್ರಿಕೂಟದ ವಿಜಯ ಮತ್ತು ಎಬಿವಿಪಿಯ ದೊಡ್ಡ ಪರಾಭವ ಈ ವಿಶ್ವವಿದ್ಯಾಲಯವನ್ನು ವಿಶಿಷ್ಟಗೊಳಿಸಿರುವ ಪ್ರಶ್ನಿಸುವ ಮತ್ತು ಕಲಿಯುವ ವಾತಾವರಣವನ್ನು ನಾಶಮಾಡಲು ಪ್ರಯತ್ನಿಸುವವರಿಗೆ ತೀವ್ರವಾದ ಏಟು ಕೊಟ್ಟಿದೆ. ಆದ್ದರಿಂದ ಇಲ್ಲಿನ ವಾತಾವರಣವನ್ನು ಕೆಡಿಸಿ ವಿವಿಯ ಆಡಳಿತ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಮತ್ತು ಅಕೆಡೆಮಿಕ್ ಸ್ವಾತಂತ್ರ್ಯಗಳ ಇನ್ನಷ್ಟು ದಮನಕ್ಕೆ ಇಳಿಯಲು ನೆಪಗಳನ್ನು ಒದಗಿಸಲಿಕ್ಕಾಗಿಯೇ, ಎಡ ವಿದ್ಯಾರ್ಥಿ ಕಾರ್ಯಕರ್ತರ ಮೇಲೆ ಹಲ್ಲೆಗಳ ಘಟನೆಗಳು ಮತ್ತು ಎಬಿವಿಪಿ ವಿದ್ಯಾರ್ಥಿಗಳಿಂದ ಹಿಂಸಾಚಾರವನ್ನು ಪ್ರಚೋದಿಸುವ ಸತತ ಪ್ರಯತ್ನಗಳು ನಡೆಯುತ್ತಿವೆ.

ಇಂತಹ ತಂತ್ರಗಳು ಯಶಸ್ವಿಯಾಗಲು ಬಿಡಬಾರದು. ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳು ಜೆಎನ್‌ಯು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ಈ ಸಂಸ್ಥೆಯ ಪ್ರಜಾಪ್ರಭುತ್ವ ಸ್ವರೂಪವನ್ನು ಉಳಿಸಿಕೊಳ್ಳುವ ಅವರ ಹೋರಾಟದಲ್ಲಿ ಬೆಂಬಲ ನೀಡಬೇಕು ಎಂದು ಸಿಪಿಐ(ಎಂ)ನ ಹಿರಿಯ ಮುಖಂಡರು ಮತ್ತು ಈ ವಿಶ್ವವಿದ್ಯಾಲಯದ ಆರಂಭದ ವರ್ಷಗಳ ವಿದ್ಯಾರ್ಥಿ ಅಂದೋಲನದ ಒಬ್ಬ ಪ್ರಮುಖ ಮುಖಂಡರೂ ಆಗಿದ್ದ ಪ್ರಕಾಶ ಕಾರಟ್ ಕರೆ ನೀಡಿದ್ದಾರೆ.

ದೇಶದಲ್ಲಿ ಮೋದಿ ಆಳ್ವಿಕೆಯಲ್ಲಿ ಉನ್ನತ ಶಿಕ್ಷಣದ ಮೇಲೆ ದಾಳಿಯ ಹಿನ್ನೆಲೆಯಲ್ಲಿ ಈ ವರ್ಷದ ಜೆಎನ್‌ಯುಎಸ್‌ಯು ಚುನಾವಣೆಗಳು ವಿಶೇಷ ಮಹತ್ವ ಹೊಂದಿವೆ. ಬಲಪಂಥೀಯ ಹಿಂದುತ್ವ ಅಜೆಂಡಾವನ್ನು ಹೇರುವ ಹುನ್ನಾರ ಎಲ್ಲ ಕೇಂದ್ರೀಯ ವಿಶ್ವವಿದ್ಯಾಲಯಗಳನ್ನು ಅವರ ಆಕ್ರಮಣಗಳಿಗೆ ಗುರಿಮಾಡಿದೆ. ಅದಕ್ಕೆ ಅತೀ ಬಲಿಷ್ಟ ಪ್ರತಿರೋಧ ಎದುರಾಗುತ್ತಿರುವುದು ಜೆಎನ್‌ಯುನಲ್ಲಿ. ಏಕೆಂದರೆ ಇಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಇಂತಹ ಪ್ರತಿಗಾಮಿ ಅಜೆಂಡಾದ ಅಪಾಯಗಳ ಬಗ್ಗೆ ಪ್ರಜ್ಞಾಶೀಲರಾಗಿದ್ದಾರೆ ಮತ್ತು ಅವನ್ನು ಎದುರಿಸಲು ಸಂಘಟಿತರೂ ಆಗಿದ್ದಾರೆ. ಆದ್ದರಿಂದ ಆಳುವ ಮಂದಿ ಜೆಎನ್‌ಯು ಮೇಲೆ 2016ರ ಆರಂಭದಲ್ಲಿ ನೇಮಿಸಿದ ಉಪಕುಲಪತಿಗಳ ಮೂಲಕ ಸಾರಿರುವ ಯುದ್ಧವನ್ನು ಮುಂದುವರೆಸಲು ದೃಢ ನಿರ್ಧಾರ ಮಾಡಿದ್ದಾರೆ. ರಕ್ಷಣಾ ಮಂತ್ರಿ ನಿರ್ಮಲಾ ಸೀತಾರಾಮನ್ ಅವರ ಅಸಂಬದ್ಧ ಹೇಳಿಕೆ ಇದಕ್ಕೆ ಸಾಕ್ಷಿ. ಜೆಎನ್‌ಯು ಒಳಗೆ ಭಾರತದ ವಿರುದ್ಧ ಯುದ್ಧ ನಡೆಸುವ ಶಕ್ತಿಗಳಿವೆ, ಅವರು ವಿದ್ಯಾರ್ಥಿ ಸಂಘದ ಚುನಾಯಿತ ಪ್ರತಿನಿಧಿಗಳೊಂದಿಗೆ ಕಾಣಿಸಿಕೊಳ್ಳುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಜೆಎನ್‌ಯುನಲ್ಲಿನ ಹೋರಾಟ ಸಾರ್ವಜನಿಕ ಹಣದಿಂದ ನಡೆಯುವ ವಿಶ್ವವಿದ್ಯಾಲಯಗಳನ್ನು ನಾಶಪಡಿಸುವ ಮತ್ತು ಖಾಸಗೀಕರಣ–ಕೋಮುವಾದೀಕರಣದ ಯೋಜನೆಯನ್ನು ಜಾರಿಗೊಳಿಸುವ ಮೋದಿ ಸರಕಾರದ ಹುನ್ನಾರಗಳ ವಿರುದ್ಧ ಒಂದು ವ್ಯಾಪಕ ಹೋರಾಟದ ಪ್ರಮುಖ ಭಾಗವಾಗಿದೆ. ಆದ್ದರಿಂದ ಅಲ್ಲಿ ದಮನದ ಕುತಂತ್ರಗಳು ಯಶಸ್ವಿಯಾಗಲು ಬಿಡಬಾರದು ಎಂದು ಪ್ರಕಾಶ ಕಾರಟ್ ಹೇಳಿದ್ದಾರೆ.

ಈ ದಿವಾಳಿಕೋರ ರಾಜಕಾರಣದ ವಿರುದ್ಧ ಜನ ದಂಗೆ ಏಳಬೇಕಾಗಿದೆ


ಸಂಪಾದಕೀಯ

ಈ ವಾರ ಕಾಂಗ್ರೆಸ್–ಜೆಡಿ(ಎಸ್) ಸಮ್ಮಿಶ್ರ ಸರಕಾರ ಪುನಃ ಅಸ್ಥಿರತೆಯಲ್ಲಿ ನರಳುತ್ತಿದೆ. ಬೆಂಗಳೂರಲ್ಲಿ ಕಾಂಗ್ರೆಸ್ ಉಸ್ತುವಾರಿ ಸಭೆ, ಜಾರಕಿಹೊಳಿ ಬ್ರದರ್ಸ್ ಜತೆ ಸಿದ್ಧರಾಮಯ್ಯ, ಮುಖ್ಯಮಂತ್ರಿ ಸಭೆ, ಕಾಂಗ್ರೆಸ್ ವರಿಷ್ಠರ ಜತೆ ಫೋನ್ ಮಾತುಕತೆ, ದೆಹಲಿಯಲ್ಲಿ ವರಿಷ್ಠರ ಜತೆ ರಾಜ್ಯ ಕಾಂಗ್ರೆಸ್ ನಾಯಕರ ಸಭೆ, ಮಂತ್ರಿಮಂಡಲದ ಸಭೆ ನಂತರ ಕಾಂಗ್ರೆಸಿನೊಳಗಿನ ಬಿಕ್ಕಟ್ಟು ಶಮನವಾಗಿದೆ ಎಂದುಕೊಳ್ಳುತ್ತಿದ್ದಂತೆ ಗುರುವಾರ (ಸೆ. 2) ತಡ ರಾತ್ರಿ ಮತ್ತು ಶುಕ್ರವಾರ (ಸೆ.21) ಪುನಃ ರಾಜಕೀಯ ಬಿಕ್ಕಟ್ಟು ತೀವ್ರವಾದಂತೆ ಕಾಣಿಸಿತು. ರಮೇಶ್ ಜಾರಕಿಹೊಳಿ ಮಂತ್ರಿಮಂಡಲ ಸಭೆಗೆ ಹಾಜರಾಗಲಿಲ್ಲ. ವಿಧಾನ ಪರಿಷತ್ತಿಗೆ ಅಭ್ಯರ್ಥಿಗಳ ಆಯ್ಕೆ ಆಗಲಿಲ್ಲ. ಮಂತ್ರಿಮಂಡಲದ ವಿಸ್ತರಣೆಯಾಗಲಿ, ಮಂಡಳಿ ನಿಗಮಗಳ ಮುಖ್ಯಸ್ಥರ ನೇಮಕವಾಗಲಿ ಅಂತಿಮವಾಗಿಲ್ಲ. ಅದು ಆಗುವವರೆಗೆ ಅತೃಪ್ತರು 'ಬಿಜೆಪಿಗೆ ಹೋಗುವ' ಅಸ್ತ್ರ ಬಳಸುವ ಬೆದರಿಕೆ ಹಾಕುತ್ತಲೇ ಇರುತ್ತಾರೆ. ವಿಧಾನ ಪರಿಷತ್ತಿಗೆ ಚುನಾವಣೆ ನಂತರದವರೆಗೆ ಮಂತ್ರಿಮಂಡಲದ ವಿಸ್ತರಣೆಯನ್ನು ಮತ್ತೆ ಮುಂದಕ್ಕೆ ಹಾಕಲಾಗಿದೆ.

ಇದನ್ನು ಬಳಸಿಕೊಂಡು ಬಿಜೆಪಿ 'ಆಪರೇಶನ್ ಕಮಲ' ಪುನಃ ಆರಂಭಿಸಿತು ಎಂದು ವರದಿಯಾಯಿತು. ಅವರ ಹಲವು ನಾಯಕರೇ ಈ ಬಗ್ಗೆ ಲೀಕ್ ಗಳನ್ನು ಮಾಡಹತ್ತಿದರು. 20 ಕಾಂಗ್ರೆಸ್–ಜೆಡಿ(ಎಸ್) ಶಾಸಕರು ರೆಡಿಯಾಗುತ್ತಿದ್ದಂತೆ ಅವರನ್ನು ಬಿಜೆಪಿ ಮುಂಬಯಿಗೆ ಒಯ್ಯುತ್ತದೆ. ಮುಂದಿನ ಅಧಿವೇಶನದಲ್ಲಿ ಹಾಜರಾಗಿ ಅವರು ರಾಜಿನಾಮೆ ಕೊಟ್ಟು ಸರಕಾರದ ಬಹುಮತ ಹೋಗುತ್ತದೆ. ಆಗ ಬಿಜೆಪಿ ಸರಕಾರ ರಚಿಸಲು ಮುಂದಾಗುತ್ತದೆ. ಇದು ರಾಜ್ಯ ಬಿಜೆಪಿಯ ಕನಿಷ್ಟ ಯೆಡಿಯೂರಪ್ಪನವರ ಯೋಜನೆ ಎಂದು ಹೇಳಲಾಯಿತು. ಇದಕ್ಕೆ ಪುಷ್ಟಿ ಕೊಡುವಂತೆ ಹಲವು ಕಾಂಗ್ರೆಸ್–ಜೆಡಿ(ಎಸ್) ಶಾಸಕರು 'ನನ್ನನ್ನು ಸಂಪರ್ಕಿಸಿ ಕೋಟಿಗಟ್ಟಲೆ ಆಫರ್ ಮಾಡಲಾಯಿತು. ನಾನು ನಿರಾಕರಿಸಿದೆ ಎಂದೆಲ್ಲಾ ಹೇಳಿಕೆ ನೀಡಿದರು. 'ಆಪರೇಶನ್ ಕಮಲ'ಕ್ಕೆ ಅಣಿಯಾದ ಶಾಸಕರ ಹೆಸರುಗಳೂ ಓಡಾಡಲಾರಂಭಿಸಿದವು. ಇದಕ್ಕೆ ಪ್ರತಿಯಾಗಿ 'ಆಪರೇಶನ್ ಕಾಂಗ್ರೆಸ್' ಮಾಡುವುದಾಗಿ ಹಲವು ಹಿರಿಯ ನಾಯಕರು ಬೆದರಿಕೆ ಹಾಕಿದರು. ಯೆಡಿಯೂರಪ್ಪನವರು ಬಿಜೆಪಿ ಶಾಸಕರ ಸಭೆಯನ್ನು ಕರೆದು ಅದರಲ್ಲಿ ಸದ್ಯಕ್ಕೆ ಸರಕಾರ ಬೀಳುವುದು ಎಂದು ಉದ್ಗರಿಸಿದರು. ಇನ್ನೇನೂ ಈ 'ಆಪರೇಶನ್' ಭಾಗವಾಗಿ ಡಿಕೆಶಿ ಅವರ ಬಂಧನವೂ ಆಗಲಿದೆ ಎಂದು ಸುದ್ದಿ ಹರಡಿತು.

ಈ ಹಿನ್ನೆಲೆಯಲ್ಲಿ ಬಿಜೆಪಿ 'ಆಪರೇಶನ್ ಕಮಲ' ಮಾಡಿ ಸರಕಾರ ಉರುಳಿಸಲು ಸಾಧ್ಯವಿಲ್ಲ ಏಕೆಂದರೆ ದೈವೇಚ್ಛೆಯಿಂದ ಈ ಸರಕಾರ ಅಧಿಕಾರಕ್ಕೆ ಬಂದಿದೆಯೆಂದು ಒಬ್ಬ ಸ್ವಾಮಿಜೀ ಹೇಳಿ ದೇವರನ್ನೂ ಈ ಹಗರಣಕ್ಕೆ ಎಳೆಯುವ ಪ್ರಯತ್ನ ನಡೆಯಿತು. ಈ ನಡುವೆ ಬಿಜೆಪಿ ಸರಕಾರ ಉರುಳಿಸಲು ಪ್ರಯತ್ನಿಸಿದರೆ ಆ ಪಕ್ಷದ ವಿರುದ್ಧ ಜನ ದಂಗೆಯೇಳಬೇಕು ಎಂದು ಹೇಳಿದರು ಎಂದು ವರದಿಯಾಯಿತು. ಒಬ್ಬ ಮುಖ್ಯಮಂತ್ರಿ ಜನರನ್ನು ದಂಗೆಯೇಳಲು ಕರೆ ಕೊಡುವುದು ಕ್ರಿಮಿನಲ್ ಅಪರಾಧ. ಅವರು ರಾಜೀನಾಮೆ ಕೊಡಬೇಕು. ಇಲ್ಲದಿದ್ದರೆ ಸರಕಾರವನ್ನು ವಜಾ ಮಾಡಬೇಕು ಎಂದು ಬಿಜೆಪಿ ಘಟಕಗಳು ಶುಕ್ರವಾರ (ಸೆ.21) ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸಿದವು. ಮುಖ್ಯಮಂತ್ರಿ ಈ ಅನೈತಿಕ ರಾಜಕೀಯದ ವಿರುದ್ಧ ಜನ ಪ್ರತಿಭಟಿಸಬೇಕು ಎಂದು ನಾನು ಹೇಳಿದ್ದರ ಅರ್ಥ, ಎಂದು ಸ್ಪಷ್ಟೀಕರಣ ಕೊಟ್ಟ ಮೇಲೂ 'ದಂಗೆ ಪ್ರತಿಭಟನೆ'ಗಳು ಮುಂದುವರೆದವು. ಸಂಜೆಯ ಹೊತ್ತಿಗೆ ರಾಜ್ಯಪಾಲರಿಗೆ ದೂರು ಸಲ್ಲಿಸಿ ಮುಖ್ಯಮಂತ್ರಿಗಳ ರಾಜಿನಾಮೆ ಕೇಳಬೇಕು. ಇಲ್ಲವೆ ಸರಕಾರ ವಜಾ ಮಾಡಬೇಕು ಎಂದು ಪತ್ರ ಸಲ್ಲಿಸಲಾಗಿದೆ. ಕಾಂಗ್ರೆಸ್ ಮತ್ತು ಜೆಡಿ–ಎಸ್ ಸಹ ಹಣ ಬಳಸಿ ಶಾಸಕರ ಖರೀದಿಗೆ ಬಿಜೆಪಿ ಪ್ರಯತ್ನ ನಡೆಸಿದೆ. ಅದರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸ್ಪೀಕರ್ ಮತ್ತು ರಾಜ್ಯಪಾಲರಿಗೆ ಪತ್ರ ಕೊಟ್ಟಿದೆ.

ಈ ಸಂಚಿಕೆ (ಸೆ. 21 ತಡರಾತ್ರಿ) ಪ್ರಿಂಟಿಗೆ ಹೋಗುವವರೆಗೆ ರಾಜ್ಯಪಾಲರು ಯಾವುದೇ ಕ್ರಮ ಕೈಗೊಂಡಿಲ್ಲ. 20 ಶಾಸಕರು ಮುಂಬಯಿಗೂ ಹೋಗಿಲ್ಲ. ಆದರೆ ರಾಜ್ಯದ ಮೂರೂ ಪಕ್ಷಗಳ ದಿವಾಳಿಕೋರ ರಾಜಕಾರಣವಂತೂ ಬೆತ್ತಲಾಗಿ ಜನರ ಮುಂದೆ ಇದೆ. ರಾಜ್ಯ ಮತ್ತು ಕೇಂದ್ರ ಬಿಜೆಪಿಯೊಳಗೆ ಈ ತರಾತುರಿಯ ಬಗ್ಗೆ ಒಮ್ಮತವಿಲ್ಲ. ಇಂತಹ ಪ್ರಯತ್ನ ರಾಜ್ಯದಲ್ಲೂ ಚುನಾವಣೆ ನಡೆಯಲಿರುವ ಇತರ ರಾಜ್ಯಗಳಲ್ಲೂ ದುಷ್ಪರಿಣಾಮ ಬೀರಬಹುದು ಎಂಬ ಆತಂಕವಿದೆ. ಇದು ಬರಿಯ ಯೆಡಿಯೂರಪ್ಪನವರ ಹತಾಶೆ ನಡೆ ಎಂದೂ ಹೇಳಲಾಗುತ್ತಿದೆ. ಅದು ಏನೇ ಇರಲಿ, ಈ ಮುಕ್ತ ಹಣಬಲದ ಅನೈತಿಕ ರಾಜಕಾರಣದ ವಿರುದ್ಧ ಜನ ದಂಗೆ ಏಳಬೇಕು. ಅದನ್ನು ಖಂಡಿತ ಪ್ರತಿಭಟಿಸಬೇಕು. ಆದರೆ ಜನಾದೇಶ ಪಡೆದ ಕಾಂಗ್ರೆಸ್–ಜೆಡಿ(ಎಸ್) ಶಾಸಕರ ಸ್ವಾರ್ಥಪರತೆ, ಅವಕಾಶವಾದಿತನ ಸಹ ಎಲ್ಲಾ ಮೇರೆಗಳನ್ನು ಮೀರಿದೆ. ಆಳುವ ಪಕ್ಷದಲ್ಲಿರುವ ಶಾಸಕರ ವರ್ತನೆ ಸಹ ಅನೈತಿಕ ಖಂಡನೀಯವೇ. ಅವರು ಪ್ರಾಮಾಣಿಕವಾಗಿದ್ದರೆ ಬಿಜೆಪಿಗೆ 'ಆಪರೇಶನ್' ನಡೆಸಲು ಹೇಗೆ ಸಾಧ್ಯ. ಆದ್ದರಿಂದ ಕಾಂಗ್ರೆಸ್–ಜೆಡಿ(ಎಸ್) ನ ದಿವಾಳಿಕೋರ ರಾಜಕಾರಣದ ವಿರುದ್ಧವೂ ಜನತೆ ಪ್ರತಿಭಟಿಸಬೇಕಾದ ದಂಗೆಯೇಳಬೇಕಾದ ಪರಿಸ್ಥಿತಿಯಿದೆ. ಈ ಮೂರೂ ಪಕ್ಷಗಳು ಆಳುವ ವರ್ಗದ ಪಕ್ಷಗಳಾಗಿದ್ದು, ಆಳುವ ವರ್ಗಗಳ ದಿವಾಳಿ ರಾಜಕಾರಣದ ವಿರುದ್ಧ ದಂಗೆಯೇಳಬೇಕಾಗಿದೆ. ಪರ್ಯಾಯ ರಾಜಕಾರಣ ಹುಡುಕಬೇಕಾಗಿದೆ.



ಕೃಪೆ: ಪಿ. ಮಹಮ್ಮದ್, ವಿ.ಕ

ಗೌರವಾನ್ವಿತ ಡಾ. ಮಲ್ಲಿಕಾ ಘಂಟಿ ಯವರಿಗೊಂದು ಪತ್ರ.

ನಾಡಿನ ಖ್ಯಾತ ಶೈಕ್ಷಣಿಕ ಸಂಸ್ಥೆಯಾಗಿರುವ ಆಳ್ವಾಸ್ ಸಂಸ್ಥೆಯ ಈ ಬಾರಿಯ ನುಡಿಸಿರಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದೀರ ನೀವು. ನಿಮ್ಮಂತೆ ಅನೇಕ ಸೋ ಕಾಲ್ಡ್ ಪ್ರೋಗ್ರೆಸ್ ಥಿಂಕರ್ ಗಳು ಈ ವೇದಿಕೆಯಲ್ಲಿ ಉಂಡು, ಕೊಂಡಾಡಿಸಿಕೊಂಡು ಹೋಗಿದ್ದಾರೆ. ಅವರ ಸಾಲಿಗೆ ನೀವು ಸೇರುವ ಕ್ಷಣಗಣನೆ ಆರಂಭವಾಗಿದೆ.

ನುಡಿಸಿರಿ ನಾಡಿನ ಭಾಷೆ, ಸಂಸ್ಕೃತಿ ಯ ಪ್ರತಿಬಿಂಬದ ವಿರಾಟ ವೇದಿಕೆ ಎನ್ನಲಾಗುತ್ತಿದೆ. ಇಂತಹ ವೈಭವದ ವೇದಿಕೆಯಲ್ಲಿ ವಿರಾಜಮಾನರಾಗಲು ತಾವು ಉತ್ಸಾಹದಿಂದ ಅಣಿಯಾಗಿದ್ದೀರ. ಇಂತಹ ತೀರ್ಮಾನ ನಿಮ್ಮ ಸ್ವಾತಂತ್ರ್ಯವೂ ಹೌದು. ನುಡಿಸಿರಿಯಲ್ಲಿ ಭಾಗವಹಿಸುವ ನಿಮ್ಮ ನಿರ್ಧಾರವನ್ನು ವ್ಯಕ್ತಿಗತ ನೆಲೆಯಲ್ಲಿ ವಿರೋಧಿಸಲಾರೆ. ಆದರೆ ಸಾಮಾಜಿಕವಾಗಿ, ಸೈದ್ಧಾಂತಿಕ ನೆಲೆಯಲ್ಲಿ ನಿಮ್ಮ 'ಒಪ್ಪಿತ' ನಿರ್ಧಾರವನ್ನು ನಾನು ಒಪ್ಪಲಾರೆ.!

ವೈಚಾರಿಕ ಕಣದಲ್ಲಿ ನೀವು ಇದುವರೆಗೂ ಬಿಂಬಿಸಿಕೊಂಡು ಬಂದ ಒಲವು– ನಿಲುವುಗಳಿಗೆ ಆಳ್ವಾಸ್ ಸಂಸ್ಥೆ ತದ್ವಿರುದ್ಧ ಹಾದಿಯಲ್ಲಿದೆ. ಶಿಕ್ಷಣದ ವಾಣಿಜ್ಯೀಕರಣದ ಮಾರ್ಗಗಳನ್ನು ಎಲ್ಲಾ ಆಯಾಮಗಳಲ್ಲೂ ಕಂಡುಕೊಂಡ ಯಶಸ್ವಿ ಸಂಸ್ಥೆ ಆಳ್ವಾಸ್ ಸಂಸ್ಥೆ. ಭಾಷೆ, ಪ್ರಾದೇಶಿಕ ಸಂಸ್ಕೃತಿ ಯನ್ನು ಕವಚವಾಗಿಸಿಕೊಂಡು ಶೈಕ್ಷಣಿಕ ವ್ಯಾಪಾರವನ್ನು ಸರಾಗವಾಗಿ ಹರಿಸಿಕೊಂಡು ಬರುತ್ತಿರುವ ಮುಖವಾಡ ತೊಟ್ಟ ಸಂಸ್ಥೆ ಇದು. ಹಿಂದೂ ಮೂಲಭೂತವಾದ ಪ್ರತಿಪಾದಕ ಸಂಸ್ಥೆಗಳ ಪೋಷಕರಾಗಿ ಆಳ್ವಾಸ್ ಮುಖ್ಯಸ್ಥರು ಬಹುತ್ವದ ವಿಚಾರಧಾರೆಯಿಂದ ದೂರ ಉಳಿದವರು. ಬಹುತ್ವದ ಬಗ್ಗೆ ತಾವು ಅನೇಕ ಬಾರಿ ತಾವು ತಮ್ಮನ್ನು ಬಿಂಬಿಸಿಕೊಂಡಿರುವುದರಿಂದ ಆಳ್ವಾಸ್ ಸಂಸ್ಥೆ ವೈಚಾರಿಕವಾಗಿ ನಿಮ್ಮ ನಿಲುವುಗಳಿಗೆ, ಸೈದ್ಧಾಂತಿಕ ಪ್ರತಿಪಾದನೆಗಳಿಗೆ ಒಪ್ಪತಕ್ಕಂತಹ ಸಂಸ್ಥೆಯಾಗಿರಲಾರದು. ನಿಮ್ಮನ್ನು ನುಡಿಸಿರಿಗೆ ಆಹ್ವಾನಿಸಿರುವುದರ ಹಿಂದೆ

'ಕುಲಪತಿ' ಕುರ್ಚಿ ಅಧಿಕಾರವಿದೆ ಹೊರತು. ಸಾಮಾನ್ಯ ' ಮಲ್ಲಿಕಾ ಘಂಟಿ' ಇಲ್ಲ.

ಶಿಸ್ತು – ಪ್ರತಿಭಾ ಬೆಳವಣಿಗೆ ನೆಪದಲ್ಲಿ ಮಕ್ಕಳನ್ನು ಕಬ್ಬಿನ ಜಲ್ಲೆಯಂತೆ ಜಗಿದು ಸಾಮರ್ಥ್ಯ ಕ್ಕೆ ಮೀರಿದ ಒತ್ತಡಕ್ಕೆ ದೂಡಿ, ಅದೆಷ್ಟೋ ಮಕ್ಕಳ ಪಾಲಿಗೆ ಶಿಕ್ಷಣವನ್ನು ಶಿಕ್ಷೆಯನ್ನಾಗಿಸಿರುವ ಈ ಸಂಸ್ಥೆಯ ಛಾವಣಿಯ ತೊಲೆಗಳಲ್ಲಿ ಅದೆಷ್ಟೋ ಮಕ್ಕಳ ಉಸಿರು ಜೋತು ಬಿದ್ದು ತೂಗುತ್ತಿವೆ.

ನೀವು ಅಲ್ಲಿಗೆ ಹೋದಾಗ ಆ ಮಕ್ಕಳ ಉಸಿರು ನಿಮ್ಮನ್ನು ತಟ್ಟಬಹುದು.

ಶಿಕ್ಷಣದ ಕಲಿಕೆಯ ಪಾರಮ್ಯ ಮಕ್ಕಳು ಪೋಷಕರನ್ನು ಅನಾಥರನ್ನಾಗಿಸಿದೆ.

ಈ ಎಲ್ಲಾ ಕಾರಣಗಳಿಂದ ಆಳ್ವಾಸ್ ವೇದಿಕೆ ಕಾಣಿಸಿಕೊಳ್ಳುವ ನಿಮ್ಮ ಬಗ್ಗೆ ಅನುಮಾನಗಳನ್ನು ಹುಟ್ಟುಹಾಕದೆ ಇರದು. ಮಣಭಾರದ ಸುಗಂಧಪೂಷಿತ ಹಾರ, ರೇಷ್ಮೆ ಜರ್ತಾರಿ ಲೇಪಿತಶಾಲು, ಸಾರೋಟು ಮೆರವಣಿಗೆ, ಸಾಲು ಕುಂಭ–ಕಲಶಗಳ ಭವ್ಯ ಸ್ವಾಗತ, ಭೂರಿಭೋಜನ, ಕೊಡುಗೆಗಳ ಆತಿಥ್ಯ, ಗಡಚಿಕ್ಕುವ ಕರತಾಡನಗಳಿಗೆ ಕೊಡಮಾಡುವ ಸ್ತುತಿ ಝೇಂಕಾರಗಳು ನಿಮ್ಮೊಳಗಿನ ವಿಚಾರಧಾರೆ(?) ಗಳನ್ನು ವ್ರತಭ್ರಷ್ಟವನ್ನಾಗಿಸುವಷ್ಟು ಪ್ರಬಲ ಮತ್ತು ವೇಗವಾಗಿರುತ್ತವೆ. 'ನೀವು' ಕಳೆದುಹೋಗಬಹುದು. ಹಾಗಂತ ನೀವು ನುಡಿಸಿರಿಗೆ ಹೋಗಬಾರದು ಎಂದು ನಾನು ಫರ್ಮಾನು ಹೊರಡಿಸಲಾರೆ.

ಆದರೆ ನೀವು ಹೋಗಿದ್ದೆ ಆದರೆ ಒಂದು ಚರಿತ್ರಾರ್ಹ ಸಂವಾದವನ್ನು ನೆಲೆಗೊಳಿಸಿ ಬರುತ್ತೀರ ಎಂಬುದು ನನ್ನ ನಂಬಿಕೆ.

ಶೈಕ್ಷಣಿಕ ವಾಣೀಜ್ಯಿಕರಣದ ಮರಾಮೋಸಗಳನ್ನು ಎಳೆ ಎಳೆಯಾಗಿ ಬಿಡಿಸಿ. ಆಳ್ವಾಸ್ ನ ಕೋಣೆಗಳಲ್ಲಿ ಹಾಲುಗಲ್ಲದ ಮಕ್ಕಳು ಅಸುನೀಗುತ್ತಿರುವ ಕಾರಣಗಳನ್ನು, ಕಾರಣಕರ್ತರನ್ನು ಬೊಟ್ಟು ಮಾಡಿ,

ನಾಡಿನ ನುಡಿ, ಸಂಸ್ಕೃತಿಯ ನ್ನು ಬಂಡವಾಳವಾಗಿಸಿಕೊಳ್ಳುತ್ತಿರುವ ಬಂಡವಾಳಶಾಹಿ ಹುನ್ನಾರವನ್ನು ಬಯಲು ಮಾಡಿ.

ಮನುವಾದದ ಪೋಷಕ ಪಾತ್ರಗಳನ್ನು ಖಂಡಿಸಿ ಬಯಲುಗೊಳಿಸಿ.

ಹೊಗಳಿಕೆಯ ಹೊನ್ನಶೂಲದಲ್ಲಿ ಋಣಸಂದಾಯದ ಜೀತಕ್ಕೆ ಬೀಳದೆ ಅಖಾಡದಲ್ಲಿ ವಿಚಾರವನ್ನು ವಿಚಾರದಿಂದಲೆ ಚಿತ್ ಮಾಡಿ ನೀವು ನೀವಾಗಿ ಉಳಿದು ಬನ್ನಿ.

ನಂಬಿಕೆ ಹುಸಿಯಾದೊಡೆ ನಿಮ್ಮಾಣೆ.. ..ಜಂಗಮನೊಡೆಯ ಜಗುಲಿಗೆ ನಿಮ್ಮ ತಲೆದಂಡ.

ವಂದನೆಗಳೊಂದಿಗೆ,

– ಎನ್. ರವಿಕುಮಾರ್, ಶಿವಮೊಗ್ಗ

ದಲಿತ ವಿರೋಧಿ ಧೋರಣೆ ಕೈಬಿಡಿ –ಜಿ.ಸಿ. ಬಯ್ಯಾರೆಡ್ಡಿ ಆಗ್ರಹ

ಸರ್ಕಾರಗಳ ಧೋರಣೆಗಳು ಬಡವರ ದಲಿತರನ್ನು ಒಕ್ಕಲೆಬ್ಬಿಸುವ ಪ್ರಯತ್ನಗಳ ಮೂಲಕ ದಲಿತ ವಿರೋಧಿ ಕ್ರಮಗಳನ್ನು ಮಾಡುತ್ತಿದ್ದು ಇಂತಹ ದಲಿತ ವಿರೋಧಿ ಧೋರಣೆ ಕೈ ಬಿಡುವಂತೆ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಅಧ್ಯಕ್ಷ ರಾದ ಜಿ.ಸಿ.ಬಯ್ಯಾರೆಡ್ಡಿ ಆಗ್ರಹಿಸಿದರು. ಇವರು ಕುದುರುಗುಂಡಿ ಕಾಲೋನಿಯಲ್ಲಿ ನಡೆದ ಭೂ ಆಕ್ರಮಣದ ವಿರುದ್ಧ ಪ್ರತಿರೋಧ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಿದ್ದರು. 31 ಕುಟುಂಬಗಳಿಗೆ ಹಲವಾರು ದಶಕಗಳ ಹಿಂದೆಯೇ ಭೂಮಿ ಮಂಜೂರಾಗಿದ್ದರೂ ಕಾನೂನು ಬಾಹಿರವಾಗಿ ಭೂಮಿ ಪಡೆಯುವ ಪ್ರಯತ್ನವನ್ನು ಈ ಕೂಡಲೇ ನಿಲ್ಲಿಸಬೇಕು. ಇಲ್ಲವಾದರೆ ರಾಜ್ಯದಾದ್ಯಂತ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.



ಸ್ವಾತಂತ್ರ್ಯ ಬಂದು 70 ವರ್ಷ ಆದರೂ ರೈತನ ಬವಣೆ ನಿಂತಿಲ್ಲ. ಸರ್ಕಾರಗಳ ತಪ್ಪು ನೀತಿಯಿಂದ ಗ್ರಾಮೀಣ ಪ್ರದೇಶದಲ್ಲಿ ಭೂಹೀನರ ಸಂಖ್ಯೆ ಶೇ 40 ರಷ್ಟು ಇದೆ. ವಾಸ ಮಾಡಲು, ಸತ್ತಾಗ ಸಂಸ್ಕಾರ ಮಾಡಲು ಭೂಮಿ ಇಲ್ಲ. ಉಳುವವನಿಗೆ ಭೂಮಿ ಬದಲು ದುಡ್ಡಿದ್ದವನಿಗೆ ಭೂಮಿ ಎಂಬ ನೀತಿಯಿಂದಾಗಿ ಆಹಾರ ಅಭದ್ರತೆ ಉಂಟಾಗಲಿದೆ .ಕೃಷಿಕರಿಗೆ ಭೂಮಿ ನೀಡುವ ಭೂ ಸುಧಾರಣೆ ಮಾಡಬೇಕು ಎಂದು ಒತ್ತಾಯಿಸಿದರು. ಹಿರಿಯ ರೈತ ನಾಯಕಿ ಶ್ರೀಮತಿ ಸುನಂದಾ ಜಯರಾಂ ರವರು ತಳ ಸಮುದಾಯದ ಹಿತ ಕಾಯಬೇಕಾದ ಜಿಲ್ಲಾ ಆಡಳಿತ ವಿರುದ್ಧ ವಾಗಿ ವರ್ತಿಸಿರುವುದು ಖಂಡನೀಯ. ದುರ್ಬಲರನ್ನು ಬೆದರಿಸಿ ಭೂಮಿ ಕಿತ್ತುಕೊಳ್ಳುವ ಪ್ರಕ್ರಿಯೆ ಜನ ವಿರೋಧಿ ರಾಜಕೀಯ. ಈ ಹೋರಾಟವನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ ಎಂದು ಘೋಷಿಸಿದರು. ದಲಿತ ಶೋಷಿತ ಸಮಾಜ ಸಂಘರ್ಷ ಸಮಿತಿ ರಾಜ್ಯ ಅಧ್ಯಕ್ಷರಾದ ವೆಂಕಟಗಿರಿಯಯ್ಯ ರವರು ಮಂಜೂರಾತಿ ಪಡೆದು ವ್ಯವಸಾಯ ಮಾಡುತ್ತಿರುವ ದಲಿತ ಕುಟುಂಬಗಳನ್ನು ಒಕ್ಕಲೆಬ್ಬಿಸುವುದು ಅನ್ಯಾಯದ ಪರಮಾವಧಿ, ಇಂತಹ ಕೃತ್ಯಗಳಲ್ಲಿ ನಿರತರಾಗಿರುವ ಅಧಿಕಾರಗಳ ಮೇಲೆ ದಲಿತರ ಮೇಲಿನ ದೌರ್ಜನ್ಯ ಕಾಯಿದೆಯಡಿಯಲ್ಲಿ ಶಿಕ್ಷಿಸಿ ಎಂದು ಆಗ್ರಹಿಸಿದರು.

ಈ ಕೂಡಲೇ ಜಿಲ್ಲಾಡಳಿತ ಕಂದಾಯ ಇಲಾಖೆ ಅಧಿಕಾರಿಗಳ ಲೋಪ ದಿಂದ ಉಂಟಾಗಿರುವ ಗೊಂದಲವನ್ನು ನಿವಾರಿಸಲು ಸಭೆ ಕರೆಯುವಂತೆ ಜಿಲ್ಲಾಧಿಕಾರಿ ಯವರನ್ನು ಆಗ್ರಹಿಸಿದರು. ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಸಂಚಾಲಕ ಟಿ.ಎಲ್. ಕೃಷ್ಣೇಗೌಡ, ಕೃಷಿ ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಎಂ.ಪುಟ್ಟಮಾದು, ಸಿ.ಕುಮಾರಿ, ಶೋಭ, ಟಿ.ಯಶವಂತ; ಶಿವಣ್ಣ ಭರತ್ ರಾಜ್, ಮರಳಿಗ ಶಿವರಾಜ್, ಶ್ರೀ ನಿವಾಸ್ ಆನಂದ್, ಕರಡಕೆರೆ ಯೋಗೇಶ್, ಮೂರ್ತಿ, ಬೋರಯ್ಯ, ಹನುಮೇಶ್, ಭಾನುಪ್ರಕಾಶ್ ಮುಂತಾದವರು ಮಾತನಾಡಿದರು. ಸಭೆ ಅಧ್ಯಕ್ಷತೆಯನ್ನು ಕೆ.ಪಿ.ಆರ್.ಎಸ್ ಗ್ರಾಮ ಸಮಿತಿ ಸಂಚಾಲಕ ವಹಿಸಿದ್ದರು, ಶಿವಲಿಂಗಯ್ಯ ಸಿದ್ದಯ್ಯ ಮುಂತಾದವರು ವೇದಿಕೆಯಲ್ಲಿ ಇದ್ದರು.

ಮರಳಿನ ಸಮಸ್ಯೆ ಬಗೆಹರಿಸದಿದ್ದರೆ ಉಡುಪಿ ಜಿಲ್ಲೆ ಬಂದ್: ಬಾಲಕೃಷ್ಣ ಶೆಟ್ಟಿ ಎಚ್ಚರಿಕೆ



ಉಡುಪಿ ಜಿಲ್ಲೆಯಲ್ಲಿ ಮರಳಿನ ಸಮಸ್ಯೆ ತೀವ್ರಗೊಂಡಿದ್ದು, ಇದಕ್ಕೆ ಪರಿಹಾರ ಕಂಡುಕೊಳ್ಳದಿದ್ದರೆ ಉಡುಪಿ ಜಿಲ್ಲೆ ಬಂದ್ ಮಾಡುವ ಮೂಲಕ ತೀವ್ರ ಹೋರಾಟ ನಡೆಸಲಾಗುವುದು ಎಂದು ಉಡುಪಿ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘ (ಸಿಐಟಿಯು) ದ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಎಚ್ಚರಿಕೆ ನೀಡಿದ್ದಾರೆ.

ಉಡುಪಿ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಮರಳು ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ಗುರುವಾರ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಹಮ್ಮಿಕೊಳ್ಳಲಾಗಿರುವ ಧರಣಿಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಮರಳು ದಿಬ್ಬಗಳಿಂದ ಮರಳು ತೆಗೆಯಲು ಜಿಲ್ಲಾಡಳಿತ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಕಾನೂನು ಆಲೋಚನೆ ಮಾಡಿಕೊಂಡರೆ ಕಾರ್ಮಿಕರ ಹೊಟ್ಟೆ ತುಂಬುವುದಿಲ್ಲ. ಮರಳು ಇಲ್ಲದಿದ್ದರೆ ಕಟ್ಟಡ ಕಾರ್ಮಿಕರ ಬದುಕು ನಡೆಯುವುದಿಲ್ಲ. ಕಾರ್ಮಿಕರು ಕೇಳುತ್ತಿರುವುದು ಐಷರಾಮಿ ಬದುಕಲ್ಲ, ಹೊಟ್ಟೆಗೆ ಊಟ, ಮಕ್ಕಳಿಗೆ ಶಿಕ್ಷಣ, ಕುಟುಂಬದವರಿಗೆ ಆರೋಗ್ಯ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಬೇಡಿಕೆಗಳು:

ಯೂನಿಟ್‌ಗೆ 2,000 ರೂ. ದರದಲ್ಲಿ ಮರಳು ಸಿಗುವಂತೆ ಜಿಲ್ಲಾಡಳಿತ ಕ್ರಮ ವಹಿಸಬೇಕು. ನಾಡದೋಣಿಯವರಿಗೂ ಮರಳು ತೆಗೆಯಲು ಅವಕಾಶ ನೀಡಬೇಕು. ಕಾರ್ಮಿಕ ಇಲಾಖೆಯಲ್ಲಿ ತೆರವಾದ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿ, ಸವಲತ್ತುಗಳ ತುರ್ತು ವಿಲೇವಾರಿ ಆಗಬೇಕು. ಪಿಂಚಣಿ 3,000 ರೂ. ಗೆ ಹೆಚ್ಚಿಸಬೇಕು. ನಿವೇಶನ ರಹಿತ ಕಟ್ಟಡ ಕಾರ್ಮಿಕರಿಗೆ ನಿವೇಶನ, ಮನೆ ಕಟ್ಟುವವರಿಗೆ ಮನೆ ಸಾಲ ಹಾಗೂ ಸಬ್ಸಿಡಿ ನೀಡಬೇಕು. 2017 ರಾಜ್ಯ ಬಜೆಟ್‌ನಲ್ಲಿ ಘೋಷಿಸಿದಂತೆ ಪಿಎಫ್ ಜಾರಿ ಮಾಡಬೇಕು. ಎಲ್ಲ ಕಟ್ಟಡ ಕಾರ್ಮಿಕರಿಗೆ ಇಎಸ್‌ಐ ಸೌಲಭ್ಯ ನೀಡಬೇಕೆಂದು ಧರಣಿ ನಿರತರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸ್ಥಳಕ್ಕೆ ಆಗಮಿಸಿದ ಅಪರ ಜಿಲ್ಲಾಧಿಕಾರಿ ವಿದ್ಯಾಕುಮಾರಿ ಅವರಿಗೆ ಮನವಿ ಸಲ್ಲಿಸಲಾಯಿತು. ಧರಣಿಯಲ್ಲಿ ಸಂಘದ ಅಧ್ಯಕ್ಷ ಶೇಖರ ಬಂಗೇರ, ಗೌರವಾಧ್ಯಕ್ಷ ದಯಾನಂದ ಕೋಟ್ಯಾನ್, ಮುಖಂಡರಾದ ಸುರೇಶ್ ಕಲ್ಲಾಗರ್, ಕವಿರಾಜ್, ಕೆ. ಶಂಕರ್, ಗಣೇಶ್ ನಾಯ್ಕಾ, ರಾಮ ಕರ್ಕಡ ಮೊದಲಾದವರು ಉಪಸ್ಥಿತರಿದ್ದರು.

ಜೀತ ಪದ್ಧತಿಯಿಂದ ನೊಂದ ಮಹಿಳೆಗೆ ಜೀತಮುಕ್ತಿ ಪತ್ರ ಕೊಡಿಸಿದ ಜನವಾದಿ



ಮದ್ದೂರು ತಾಲ್ಲೂಕಿನ ಬಸವನಪುರ(ಗೆಜ್ಜಲಗೆ) ದ ವಾಸಿಯಾಗಿದ್ದ ಜಾನಕಮ್ಮಳು ಜೀತ ಪದ್ಧತಿಗೆ ಒಳಗಾದ ಮಹಿಳೆ. ನಾಗೇಶ್ ರವರ ಹೊಲ, ಕಟ್ಟಡಗಳ ಕೆಲಸ ಮಾಡುತ್ತಿದ್ದವಳು. ಗಂಡ ಅದೇ ವ್ಯಕ್ತಿಯ ಬಳಿ ಜೀತ ಮಾಡುತ್ತ ಹಂದಿ ಸಾಕಾಣಿಕೆಯ ಸ್ವಚ್ಛತಾ ಕೆಲಸ ಮಾಡುತ್ತ ಸತ್ತಿದ್ದಾನೆ.

ಗಂಡ ಸತ್ತ ನಂತರ ಜೀತ ಮಾಡಲಾಗುವುದಿಲ್ಲ ಎಂದು ಹೊರಬಂದು ಬೆಕ್ಕಳಲೆಯಲ್ಲಿ ಬಾಡಿಗೆ ಮನೆಯೊಂದರಲ್ಲಿ ಬದುಕುತ್ತ ಕಟ್ಟಡ ಕೂಲಿ ಕೆಲಸ ಮಾಡುತ್ತಿದ್ದುದನ್ನು ಪತ್ತೆ ಹಚ್ಚಿ ನಿನ್ನೆ ಬೆಳಿಗಿನ ಜಾವ ಬಂದು ಬಲಾತ್ಕಾರವಾಗಿ ಹೊತ್ತೊಯ್ಯಲಾಗಿದೆ. ಬಿಡಿಸಲು ಬಂದ ಗಂಡಸರಿಗೆ ನೀನೇನು ತಾಳಿ ಕಟ್ಟಿದ್ದೀಯಾ ಎಂದೆಲ್ಲ ಬೆದರಿಸಿ ಅವಳನ್ನು ಹೊತ್ತೊಯ್ಯಲಾಗಿದೆ.

ದೌರ್ಜನ್ಯ ಸಾಮಾಜಿಕ ತಾಣದಲ್ಲಿ ವರದಿಯಾದ ನಂತರ ಪೊಲೀಸರು ಕ್ರಮ ವಹಿಸಿದ್ದಾರೆ. ಮಾಧ್ಯಮ ಗಳಲ್ಲಿ ವರದಿಯಾದ ನಂತರ ಜನವಾದಿ ಮಹಿಳಾ ಸಂಘಟನೆ ನಿಯೋಗ ಊರಿಗೆ ಭೇಟಿ ನೀಡಿ ಘಟನಾ ಸ್ಥಳವನ್ನು ವೀಕ್ಷಣೆ ಮಾಡಿದೆ.ಈ ನೊಂದ ಮಹಿಳೆ ಜೀತ ವಿಮುಕ್ತಿ ಸಂಘಟನೆಯ ಸಂಪರ್ಕಕ್ಕೆ ಬಂದಿದ್ದು ತನ್ನ ನೋವನ್ನು ತೊಡಿಕೊಂಡು ಕಾನೂನು ಸಹಾಯ ಪಡೆಯುತ್ತಿದ್ದರು

ಈಗ ಅವಳಿಗೆ ಜೀವಿಕಾ ಸಂಸ್ಥೆಯಿಂದ ಜೀತಮುಕ್ತಿ ಪತ್ರ ಕೊಡಿಸಿದ್ದಾರೆ. ಜನವಾದಿಯಿಂದ ಆಕೆಗೆ ಕೊಡಬೇಕಾದ ಪರಿಹಾರ ಮತ್ತು ಪರ್ಯಾಯ ಬದುಕಿನ ವ್ಯವಸ್ಥೆ ಗೆ ಮತ್ತು ಪರಿಹಾರ ಧನ ನೀಡಲು ಒತ್ತಾಯಿಸಲಾಗಿದೆ. ಇದುವರೆಗೆ ಒಬ್ಬರನ್ನು ಮಾತ್ರ ಬಂಧಿಸಿದ್ದು ಇನ್ನಿಬ್ಬರನ್ನು ಬಂಧಿಸಲು ಒತ್ತಾಯಿಸಲಾಗಿದೆ.

ಕಟ್ಟಡ ಕಾರ್ಮಿಕರ ಸಮಾವೇಶ



ದ.ಕನ್ನಡ ಜಿಲ್ಲೆಯ ಗಡಿ ಪ್ರದೇಶದ ಸಂಪಾಜೆ ವಲಯದಲ್ಲಿ CWFI_CITU ನೇತೃತ್ವದಲ್ಲಿ ಕಟ್ಟಡ ಕಾರ್ಮಿಕರ ಸಮಾವೇಶ ನಡೆಯಿತು. ಆರಂಭದಲ್ಲಿ ನೂರಾರು ಕಟ್ಟಡ ಕಾರ್ಮಿಕರ ಮೆರವಣಿಗೆ. ಕೇರಳದ ಮಹಿಳಾ ಹಾಗೂ ಮಕ್ಕಳ ಕಲಾತಂಡದಿಂದ ಆಕರ್ಷಕ ಸಿಂಗಾರಿ ಮೇಳ ಪ್ರದರ್ಶನ ಜನರು ಮನ ಸೆಳೆಯಿತು. ನಂತರ ಪಂಚಾಯತ್ ಸಭಾಂಗಣದಲ್ಲಿ ಜರುಗಿದ ಸಭೆಯಲ್ಲಿ ಇತ್ತೀಚಿಗೆ ಕೇರಳ ಹಾಗೂ ಕೊಡಗು ನೆರೆಹಾವಳಿಯಲ್ಲಿ ಸಾವನ್ನಪ್ಪಿದ ನಾಗರೀಕರಿಗೆ ಸಂತಾಪ ಸಲ್ಲಿಸಲಾಯಿತು.

ಹಿರಿಯ ಕಾರ್ಮಿಕರಿಗೆ ಸನ್ಮಾನ ಕಾರ್ಯಕ್ರಮ ನಡೆಸಲಾಯಿತು. ಸಭೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ, ದ.ಕನ್ನಡ ಜಿಲ್ಲಾ ಅಧ್ಯಕ್ಷ ಸುನೀಲ್ ಕುಮಾರ್, ಸುಳ್ಯ ತಾಲೂಕ ಅಧ್ಯಕ್ಷ ಜಾನಿ ಕೆ.ಪಿ ಹಾಗೂ ಸಂಪಾಜಿ ಕೃಷಿ ಸಹಕಾರ ಪತ್ತಿನ ಸಂಘದ ಅಧ್ಯಕ್ಷ ರಾದ ಸೋಮಶೇಖರ್ ಕೊಂಗ್ಯೆಜೆ ಗ್ರಾ.ಪಂ ಅಧ್ಯಕ್ಷರಾದ ಶ್ರೀಮತಿ ಸುಂದರಿ ಮುಂಡಡ್ಕ ಸೇರಿದಂತೆ ಹಲವಾರು ನಾಯಕರು ಮಾತನಾಡಿದರು.

ರಸ್ತೆ ಕಾಮಗಾರಿಗಾಗಿ ಪಕ್ಕಲಡ್ಕದಲ್ಲಿ ಡಿವೈಎಫ್‌ಐ ಪ್ರತಿಭಟನೆ:

ಮಂಗಳೂರು ಬಜಾಲು ಪ್ರದೇಶದ ಜೆ.ಎಂ. ರೋಡ್‌ನಿಂದ ಪಕ್ಕಲಡ್ಕದ ವರೆಗಿನ ಮುಖ್ಯರಸ್ತೆಯ ಕಾಮಗಾರಿ ನಿಧಾನವಾಗಿ ನಡೆಯುತ್ತಿರುವುದನ್ನು ಖಂಡಿಸಿ ಹಾಗೂ ಶೀಘ್ರ ಕಾಮಗಾರಿ ಮುಗಿಸುವಂತೆ ಆಗ್ರಹಿಸಿ ಪಕ್ಕಲಡ್ಕ ಡಿವೈಎಫ್‌ಐ ಘಟಕದ ನೇತೃತ್ವದಲ್ಲಿ ಸಪ್ಟೆಂಬರ್ 17ರಂದು ಪ್ರತಿಭಟನೆ ನಡೆಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಸಂತೋಷ್ ಬಜಾಲ್, ಪಕ್ಕಲಡ್ಕ ಘಟಕದ ಅಧ್ಯಕ್ಷರಾದ ರಿತೇಶ್, ಕಾರ್ಯದರ್ಶಿ ಪ್ರಕಾಶ್ ಶೆಟ್ಟಿ ಭಾಗವಹಿಸಿದ್ದರು. ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಮಂಗಳೂರು ನಗರ ಪಾಲಿಕೆ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ನಿವೃತ್ತ ಅಂಗನವಾಡಿ ನೌಕರರ ಸಮಾವೇಶ

ಮಾಸಿಕ ನಿವೃತ್ತಿ ವೇತನಕ್ಕಾಗಿ ಒತ್ತಾಯ



ಸೆಪ್ಟೆಂಬರ್ 19 ರಂದು ಬೆಂಗಳೂರಿನ ಸೂರಿಭವನದಲ್ಲಿ ನಿವೃತ್ತ ಅಂಗನವಾಡಿ ನೌಕರರ ರಾಜ್ಯ ಸಮಾವೇಶ ನಡೆಯಿತು. 43 ವರ್ಷಗಳಿಂದ ICDS ಯೋಜನೆಯಲ್ಲಿ ದುಡಿಯುತ್ತಿರುವ ಅಂಗನವಾಡಿ ನೌಕರರಿಗೆ ಮಾಸಿಕ ನಿವೃತ್ತಿ ವೇತನಕ್ಕಾಗಿ ಒತ್ತಾಯಿಸಿ ಸಮಾವೇಶ ನಿರ್ಣಯ ಕೈಗೊಂಡಿದೆ. ನಿರ್ಣಯದ ಕೆಲವು ಮುಖ್ಯಾಂಶಗಳು ಹೀಗಿವೆ:

ಹಿನ್ನೆಲೆ

1982 ರಲ್ಲಿ ಸರ್ವೋಚ್ಚ ನ್ಯಾಯಾಲಯವು ಪಿಂಚಣಿ ಅಥವಾ ನಿವೃತ್ತಿ ವೇತನದ ಬಗ್ಗೆ ಒಂದು ಮಹತ್ವದ ತೀರ್ಪನ್ನು ಕೊಟ್ಟಿತ್ತು. ದೇಶದ ಸಂವಿಧಾನದ ಪ್ರಕಾರ ಭಾರತ ಸರ್ಕಾರವು ಪಿಂಚಣಿದಾರರಿಗೆ ಸಾಮಾಜಿಕ – ಆರ್ಥಿಕ ಭದ್ರತೆ ನೀಡಬೇಕು, ಸರ್ಕಾರಿ ನೌಕರರಿಗೂ ಪಿಂಚಣಿಯ ಹಕ್ಕು ಮೂಲಭೂತ ಹಕ್ಕಾಗಿರುತ್ತದೆ. ಪಿಂಚಣಿ ಎಂಬುದು ಕೊಡುಗೆಯಲ್ಲ ಅಥವಾ ಮಾಲೀಕನ ಇಚ್ಛೆಗೆ ಬಿಟ್ಟ ದಯೆಯೂ ಅಲ್ಲ. ಇದು ಗೌರವಾಧಾರದಲ್ಲಿ ನೀಡುವುದು ಅಲ್ಲ. ಬದಲಿಗೆ ಕಾರ್ಮಿಕನು ಸಲ್ಲಿಸಿರುವ ಸೇವೆಯ ಆಧಾರದಲ್ಲಿ ನೀಡುವುದಾಗಿರುತ್ತದೆ. ಇದೊಂದು ಸಾಮಾಜಿಕ ಕಲ್ಯಾಣ ಕ್ರಮ. ಸಮಾಜಕ್ಕಾಗಿ ದುಡಿದ ಜನರಿಗೆ ತಮ್ಮ ಇಳಿ ವಯಸ್ಸಿನಲ್ಲಿ ನೀಡುವ ಸಾಮಾಜಿಕ ಆರ್ಥಿಕ ನ್ಯಾಯವಾಗಿದೆ. ಅವರು ಇಳಿವಯಸ್ಸಿನಲ್ಲಿ ತತ್ತರಗೊಳಗೊಳ್ಳಲು ಬಿಡಲಾಗದು ಎಂದು ಆ ತೀರ್ಪಿನಲ್ಲಿ ಹೇಳಲಾಗಿತ್ತು. ನಂತರದಲ್ಲಿ ಬಂದ ಸುಧಾರಣೆಗಳ ಭಾಗವಾಗಿ 2001 ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ಪಿಂಚಣಿ ವ್ಯವಸ್ಥೆಯನ್ನು ಪಿಂಚಣಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು (PFRDA) ಸ್ಥಾಪಿಸಿ, ಪಾರ್ಲಿಮೆಂಟ್‌ನಲ್ಲಿ ಅನುಮೋದನೆಯನ್ನು ಪಡೆಯಿತು. ಅಂದಿನಿಂದ ಪಿಂಚಣಿಯ ಭದ್ರತೆ ಮತ್ತು ಪಿಂಚಣಿಯ ಕಣ್ಣೋಟ ಬದಲಾಗಿ NPS ಬಂತು. ಈ NPS ನ್ನು NPS Light ಎಂಬ ಯೋಜನೆಯಾಗಿಸಿ ಅಂಗನವಾಡಿ ನೌಕರರನ್ನು ಬಲಿಪಶು ಮಾಡಿತು.

ಪಿಂಚಣಿಗಾಗಿ ಸಂಘದ ಹೋರಾಟ

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ CITU ನೇತೃತ್ವದಲ್ಲಿ ಹಲವು ವರ್ಷಗಳಿಂದ ಪಿಂಚಣಿಗಾಗಿ ಹೋರಾಟ ನಡೆಸುತ್ತಾ ಬಂದಿದೆ. 2010 ನವಂಬರ್ 15 ರಂದು ರಾಜ್ಯದ್ಯಂತ ಅಂಗನವಾಡಿ ಕೇಂದ್ರಗಳನ್ನು 4 ದಿನಗಳ ಕಾಲ ಬಂದ್ ಮಾಡಿ, ಬೆಂಗಳೂರಿನಲ್ಲಿ 4 ದಿನಗಳ ಕಾಲ ಮಳೆಯಲ್ಲಿಯೇ ಪ್ರತಿಭಟನೆ ನಡೆಸಲಾಯಿತು. ಡಿಸೆಂಬರ್ 2 ರಂದು ಮುಖ್ಯ ಮಂತ್ರಿಗಳು ಮಾತುಕತೆಗೆ ಕರೆಯಬೇಕೆಂದೂ ಜಿಲ್ಲಾ ಪಂಚಾಯ್ತಿ ಮುಂದೆ, ಫೆಬ್ರವರಿ 23 ರಂದು ಕೇಂದ್ರ ಕಾರ್ಮಿಕ ಸಂಘಟನೆಗಳೊಟ್ಟಿಗೆ, ಫೆಬ್ರವರಿ 24 ರಂದು ನವದೆಹಲಿಯಲ್ಲಿ ಸರಣಿ ಪ್ರತಿಭಟನೆಗಳನ್ನು ಮಾಡಲಾಯಿತು. 2010 ನವೆಂಬರ್ 15 ರಿಂದ 19ರ ತನಕ ನಡೆದ ನಿವೃತ್ತಿ ಸೌಲಭ್ಯ ಮತ್ತು ವೇತನ ಹೆಚ್ಚಳ ಹೋರಾಟದ ಒತ್ತಾಯದ ಫಲವಾಗಿ 19–1–2011ರಂದು ನಡೆದ ಅಂದಿನ ಮುಖ್ಯ ಮಂತ್ರಿಗಳ ಜೊತೆಯಲ್ಲಿ LIC ಪಿಂಚಣಿ ಕೊಡಬೇಕೆಂದೂ ಒತ್ತಾಯಿಸಲಾಯಿತು. ಆ ಸಭೆಯಲ್ಲಿ ಮುಖ್ಯಮಂತ್ರಿಗಳು ಒಪ್ಪಿ ಮಾರನೇ ದಿವಸ NPS Light ವಂತಿಕೆಯಾಧಾರಿತ ಪಿಂಚಣಿ ಜಾರಿ ಮಾಡಿದರು. ಇದನ್ನು ಖಂಡಿಸಿ 2011 ಮಾರ್ಚಿ 30ರಂದು ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ರಾಜ್ಯ ಸಮಾವೇಶ ನಡೆಸಿ ಖಂಡಿಸಲಾಯಿತು. ಹಾಗೆಯೇ ಮರುದಿನವೇ ಮುಖ್ಯ ಮಂತ್ರಿ ಮನೆಯ ಮುತ್ತಿಗೆಯನ್ನು ನಡೆಸಲಾಯಿತು. ಕೊನೆಗೆ ಬೇರೆ ಸಂಘಟನೆಗಳು ಈ ಪೆನ್ಷನ್ ಒಪ್ಪಿದ್ದರಿಂದ NPS ಜಾರಿಯಾಗಿ ಇಂದು ಹಲವಾರು ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಮಾಸಿಕ ನಿವೃತ್ತಿ ವೇತನ ವಿಲ್ಲದೇ ಬರಿಗೈಯಲ್ಲಿ ಮನೆಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ.

NPS ನಿಂದಾದ ಸಮಸ್ಯೆಗಳೇನು ?

* 2–12–2010 ರಂದು ಮುಖ್ಯ ಮಂತ್ರಿಗಳ ಸಭೆಯಲ್ಲಿ ಒಪ್ಪಿದ್ದು LIC ಆಧಾರಿತ ಪಿಂಚಣಿ ಆದರೆ ಜಾರಿ ಮಾಡಿದ್ದು NPS Light. ಆ ಸಭೆಯಲ್ಲಿ ಕೊಟ್ಟ ಭರವಸೆ ತಿಂಗಳ ಮಾಸಿಕ ವೇತನ ಕೊಡುವ ಭರವಸೆಯೊಟ್ಟಿಗೆನೆ ಒಪ್ಪಿಸಲಾಗಿತ್ತು. ಆದರೆ ಆ ಭರವಸೆ ಸುಳ್ಳಾಯಿತು.
* 1–4–1955 ರನಂತರ ಜನಿಸಿದ ಅಂಗವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ಒಳಪಡುತ್ತಾರೆ. ಯೋಜನೆಯ ಜಾರಿ PFRDA ಉಸ್ತುವಾರಿಯಲ್ಲಿ ನೂತನ ಪಿಂಚಣಿ NPS Light ನ್ನು ಪ್ರಾರಂಭಿಸಿದೆ. ಕಾರ್ಯಕರ್ತೆಯಿಂದ 150, ಸಹಾಯಕಿಗೆ 75 ರೂಗಳು ಕಡಿತ ಅದೇ ಮೊತ್ತವನ್ನು ರಾಜ್ಯ ಸರ್ಕಾರ ಭರಿಸುತ್ತದೆ. ಇದಕ್ಕಾಗಿ 10 ಕೋಟಿ ಅನುದಾನವನ್ನು ಮೀಸಲಿಟ್ಟಿದೆ.
* ಹಾಗೆಯೇ NPS ಅಡಿಯಲ್ಲಿ ಬರದಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ 50 ಸಾವಿರ ಸಹಾಯಕಿಯರಿಗೆ 30 ಸಾವಿರ ಸಾಮಾಜಿಕ ಭದ್ರತೆಯ ಭಾಗವಾಗಿ ಇಡುಗಂಟನ್ನು ಕೊಟ್ಟು ನಿವೃತ್ತಿ ಗೊಳಿಸಿದೆ.
* ಆದರೆ ಇಡಗಂಟು ಇಲ್ಲದೆ NPS Light ಮುಖಾಂತರ ಹಣ ತಗೆದು ಕೊಂಡಿರುವ ಹಲವಾರು ಪ್ರಕರಣಗಳಲ್ಲಿ 50 ಸಾವಿರ ಮತ್ತು 30 ಸಾವಿರಕ್ಕಿಂತ ಕಡಿಮೆ ಹಣಬಂದಿದೆ. ಯೋಜನೆಯಲ್ಲಿದ್ದು ನಿವೃತ್ತಿಯಾದವರಿಗೆ ಇಡಿಗಂಟಿನ ಹಣ ಬಂದಲ್ಲಿ, ಇನ್ನೂ ಕೆಲವರಿಗೆ NPS Light ನ ಹಣ ಕಡಿತವನ್ನೇ ಮಾಡಿಲ್ಲ. ಇನ್ನೂ ಕೆಲವಡೆ ಪಾನ್ ಕಾರ್ಡ್‌ಗಳು ಬಂದಿಲ್ಲ. ಇತ್ತೀಚೆಗೆ ಆಯ್ಕೆಯಾಗುತ್ತಿರುವ ಅಂಗನವಾಡಿ ನೌಕರರಿಗೆ ಯಾವುದೇ ರೀತಿಯ ಪೆನ್ಷನ್ ಯೋಜನೆಯನ್ನು ಅನ್ವಯಗೊಳಿಸಿಲ್ಲ.
* ಹೀಗೆ ಒಂದೇ ಇಲಾಖೆಯಲ್ಲಿ 3 ತರಹದ ಭಿನ್ನ ರೂಪದಲ್ಲಿ ನೌಕರರನ್ನು ನಡೆಸಿಕೊಳ್ಳತ್ತಿದೆ.

ಸಮಾವೇಶದ ಹಕ್ಕೊತ್ತಾಯಗಳು

* ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸರ್ಕಾರದಿಂದಲೇ ಮಾಸಿಕ ನಿವೃತ್ತಿ ಸೌಲಭ್ಯ ಸಿಗುವ ಯೋಜನೆಯನ್ನು ಪ್ರಾರಂಭಿಸಬೇಕು.
* ಈಗಾಗಲೇ ನಿವೃತ್ತಿಯಾದ ಅಂಗನವಾಡಿ ನೌಕರರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಬರುವ ಸರ್ವೆ ಮುಂತಾದ ಕೆಲಸಗಳನ್ನು ನೀಡುವುದು ಮತ್ತು ಇಲಾಖೆಯ ಇತರೆ ಕೆಲಸಗಳನ್ನು ಇವರಿಗೆ ನೀಡುವುದು ಮತ್ತು ಮಾಸಿಕ ಪೆನ್ಷನ್‌ಗೆ ವಿಶೇಷ ವ್ಯವಸ್ಥೆ ಮಾಡಬೇಕು.
* 1975–80 ನಡುವೆ ನಿವೃತ್ತಿಯಾಗುವ ಎಲ್ಲಾ ಅಂಗನವಾಡಿ ನೌಕರರಿಗೂ ಇರುವ NPS ನಲ್ಲಿ ಮಾಸಿಕ ನಿವೃತ್ತಿ ವೇತನ ಕೊಡಲು ಯೋಜನೆ ರೂಪಿಸುವುದು.

NPS ಯೋಜನೆಯಲ್ಲಿ DA ಮತ್ತು ಬೇಸಿಕ್ ನಲ್ಲಿ 10 % ಹಣ ಕಡಿತ ಮಾಡಿ, ಸರ್ಕಾರ ಮಾಲೀಕರ 10% ತಮ್ಮ ಭಾಗವನ್ನು ವಂತಿಕೆ ನೀಡುತ್ತಾರೆ. ಈ ಹಣವನ್ನು ಷೇರು ಮಾರುಕಟ್ಟೆಗೆ ಹೊಡಲಾಗುತ್ತದೆ. ಒಟ್ಟು ಸಂಗ್ರಹವಾದ ಹಣದಲ್ಲಿ 60% ಆ ನೌಕರರಿಗೆ ಕೊಟ್ಟು ಉಳಿದ 40% ಹಣವನ್ನು ವಿಮಾ ಕಂಪನಿಯಲ್ಲಿ ಜಮಾ ಮಾಡಲಾಗುತ್ತಿದೆ. ಇದರಿಂದ ಆವರಿಗೆ ಮಾಸಿಕ ನಿವೃತ್ತಿ ವೇತನ ಸಿಗುತ್ತದೆ. ಆದರೆ ಅಂಗನವಾಡಿ ನೌಕರರಿಗೂ ಕನಿಷ್ಠ ಈ ಮಾನದಂಡವನ್ನಾದರೂ ಉಪಯೋಗಿಸಿದ್ದರೆ ಅವರಿಗಿಂದು ಮಾಸಿಕ ನಿವೃತ್ತಿ ವೇತನ ಮತ್ತು ಇಡಗಂಟು ಹೆಚ್ಚು ಸಿಗಲು ಅವಕಾಶವಿತ್ತು.

ಹಾಗಾಗಿ ಹಣದ ಮೌಲ್ಯ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಮತ್ತು ಅಗತ್ಯ ವಸ್ತುಗಳ ಹೆಚ್ಚಳದ ಆಧಾರದಲ್ಲಿ ಈಗ ಸಿಗುತ್ತಿರುವ ಕೊಡುತ್ತಿರುವ ಎರಡು ಇಡಗಂಟು ಸಾಮಾಜಿಕ ನ್ಯಾಯದ ವಿರುದ್ಧವಾಗಿದೆ ಎಂದು ಈ ರಾಜ್ಯ ಸಮಾವೇಶ ಅಭಿಪ್ರಾಯ ಪಡುತ್ತಿದೆ.

ಆದ್ದರಿಂದ ಮೇಲ್ಕಂಡ ಸೂಚನೆಗಳ ಪ್ರಕಾರ ರಾಜ್ಯ ಸರ್ಕಾರ ಕೂಡಲೇ ಕ್ರಮ ವಹಿಸಬೇಕೆಂದೂ ಒತ್ತಾಯಿಸಿ, ಮುಂದಿನ ಹೋರಾಟಗಳಿಗೆ ಅಣಿಯಾಗಬೇಕೆಂದೂ ಅಂಗನವಾಡಿ ನೌಕರರಿಗೆ ಸಮಾವೇಶ ಕರೆ ಕೊಟ್ಟಿದೆ. ●



ದುಡಿಯುವ ಮಹಿಳೆಯರಿಗೆ ಮಾರ್ಕ್ಸವಾದಿ ಶಾಲೆ

ಕರ್ನಾಟಕದಲ್ಲಿ ಹತ್ತಾರು ಹೋರಾಟಗಳನ್ನು ನಿರಂತರವಾಗಿ ಮಾಡುತ್ತಿರುವ ದುಡಿಯುವ ಮಹಿಳೆಯರ ಆಯ್ದ ನಾಯಕತ್ವಕ್ಕೆ ರಾಜ್ಯಮಟ್ಟದಲ್ಲಿ ಅಧ್ಯಯನ ಶಿಬಿರವನ್ನು ಬೆಂಗಳೂರಿನಲ್ಲಿ ಸೆ. 20 ರಿಂದ 22 ರ ವರೆಗೆ ಹಮ್ಮಿಕೊಳ್ಳಲಾಗಿದೆ. ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರೂ ಕೇರಳ ರಾಜ್ಯ ಸರ್ಕಾರದ ಶಿಕ್ಷಣ ಮತ್ತು ಯುವಜನ ಮಾಜಿ ಮಂತ್ರಿಗಳೂ ಆದ ಎಂ.ಎ. ಬೇಬಿಯವರು ಇದನ್ನು ಉದ್ಘಾಟಿಸಿದರು.

“ಕರ್ನಾಟಕದ ದುಡಿಯುವ ಜನರರಲ್ಲಿ ದುಡಿಯುವ ಮಹಿಳೆಯರು ಒಂದು ಸಮರಶೀಲ ವಿಭಾಗ ಎಂಬುದನ್ನು ಇದೂವರೆಗಿನ ಹತ್ತಾರು ಪ್ರಸಿದ್ಧವಾದ ಹೋರಾಟಗಳ ಮೂಲಕ ಗಮನ ಸೆಳೆದು, ದೇಶಕ್ಕೆ ಸ್ಪೂರ್ತಿಯಾಗಿದ್ದುದು ಸಂತೋಷ ಮತ್ತು ಹೆಮ್ಮೆ. ನೈಸರ್ಗಿಕ ಕರೆಗಳನ್ನೂ ಲೆಕ್ಕಿಸದೇ, ಸಹನೆ ಮತ್ತು ಧೈರ್ಯದಿಂದ ಮಹಾನಗರದ ಆಯಕಟ್ಟಿನ ಸ್ಥಳವಾದ ವಿಧಾನ ಸೌಧಕ್ಕೆ ತೆರಳುವ ಮಧ್ಯರಸ್ತೆಯಲ್ಲೇ ಹಗಲು ರಾತ್ರಿ ಕುಳಿತು ಸರ್ಕಾರದ ಮತ್ತು ದೇಶದ ಗಮನಸೆಳೆದು ಹಲವಾರು ಬೇಡಿಕೆ ಈಡೇರಿಸಿಕೊಂಡಿದ್ದೀರಿ. ಇಂಥ ಹೋರಾಟ ನಡೆಸುವವರಿಗೆ ಮತ್ತು ಭಾಗವಹಿಸುವವರಿಗೆ ಸರಿಯಾದ ತಳಹದಿ ಬೇಕು, ಸಮಸ್ಯೆಗಳ ಮತ್ತು ಆಳುವವರ ಕುರಿತು ಸ್ಪಷ್ಟವಾದ ಅರಿವು ಮತ್ತು ಅಧ್ಯಯನದ ಅಗತ್ಯವಿದೆ. ಹೋರಾಟದ ಸ್ಪಷ್ಟದಾರಿಯ ಅರಿಯಲು ಮತ್ತು ಉತ್ಸಾಹ ಉಳಿಸಲು ಸೈದ್ಧಾಂತಿಕ ತಿಳಿವಳಿಕೆ ಬೇಕು. ಸಿದ್ಧಾಂತವನ್ನಷ್ಟೇ ಅರಿತರೆ ಸಾಲದು ನಾವು ಸಂಘಟಿದ ಎಲ್ಲಾ ಹೋರಾಟ ಚಟುವಟಿಕೆಗಳ ಕುರಿತು ಸಮಾಜದ ಕುರಿತು ಸ್ವ–ಅಧ್ಯಯನ ನಡೆಸಿದರೆ ಮುಂದಿನ ಹೆಜ್ಜೆ ಇನ್ನಷ್ಟು ಭದ್ರವಾಗಿ ಇಡಲು ಸಾಧ್ಯವಾಗುತ್ತದೆ. ಭಾರತದಲ್ಲಿ ಒಂದು ಅಪಾಯಕಾರಿ ಸರ್ಕಾರ ಅಧಿಕಾರಕ್ಕೆ ಬಂದಿದೆ. ನಿರಂಕುಶ ಪ್ರಭುತ್ವದ ವಿರುದ್ಧ, ಜನಸಾಮಾನ್ಯರ



ಪುಟ 6 ಕ್ಕೆ

ಅತಿಥಿ ಅಂಕಣ



ಡಾ. ವಿನಯಾ ಒಕ್ಕುಂದ



ನನಗೆ ಅವಳೊಂದಿಗೆ ಮಾತನಾಡಲಿಕ್ಕಿತ್ತು

ಸಾರಾ ಅಬೂಬಕ್ಕರ್ ಬರೆದ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಎಂಬ ಅನುಭವ ಕಥನಕ್ಕೆ ಪೂರ್ಣವಿರಾಮ ಬಂದಿಲ್ಲ. ಅದು ವಿಭಿನ್ನ ಕವಲುಗಳಲ್ಲಿ ಮುಂಚಲಿಸುತ್ತಲೇ ಇದೆ. ಹಾಗಿರುವಾಗ ಗೊಂಬೆಯಂತಹ ಹುಡುಗಿಯನ್ನು ಇಲ್ಲಿಯವರೆಗೂ ಕರೆದುತಂದಿದ್ದ ಆ ತಾಯಿಯ ತುಡಿತ ಅಚ್ಚರಿಯೆನಿಸುತ್ತಿತ್ತು.
ಸೋತು ಬಂದವಳ ದಣಿವು ಓಡಿ ಬಂದ ದಣಿವಿಗಿಂತ ಭಾರವಾಗಿತ್ತು. ಅವಳು ತಾಯಿಯನ್ನು ತಬ್ಬಿಕೊಂಡು ಗೋಳೋ ಎಂದು ಅತ್ತಳು. ತಾಯಿ–ಮಗಳ ನಡುವಿನ ಕನಸಿನ ಕುದುರೆ ಅದೆಷ್ಟು ನೆಗೆದಿತ್ತೋ? ಇದೊಂದು ಗೆಲುವು ಅವಳ ಮತ್ತು ಅವರ ಬಾಳಿನ ಯಾವ ಬಿಡುಗಡೆಯ ಕಥನವಾಗುವುದಿತ್ತೋ? ಆದರೇನು, ಸಾಧನೆಗೆ ಕಣ್ಣೀರು ಹಾಯಿದೋಣಿಯಲ್ಲವಲ್ಲ.

ದಿನಂಪ್ರತಿಯ ಸಹಜ ಬದುಕಿನಲ್ಲಿ ನಡೆಯುವ ಸಂಗತಿಗಳು ಯಾವುದೋ ಅನೂಹ್ಯ ದರ್ಶನದೆಡೆಗೆ ನಮ್ಮನ್ನು ನೂಕುವ ಮೀಟುಗೋಲಾಗುತ್ತಿದೆಯೇ ಎಂಬ ಬೆರಗು. ನಮ್ಮ ಮಹಾವಿದ್ಯಾಲಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಪುರುಷ ಮತ್ತು ಮಹಿಳೆಯರ ಏಕವಲಯ ಗುಡ್ಡಗಾಡು ಓಟದ ಸ್ಪರ್ಧೆಯನ್ನು ಪ್ರಾಯೋಜಿಸಲಾಗಿತ್ತು. ಹೆಚ್ಚಿನ ಸೌಲಭ್ಯಗಳಿಲ್ಲದ ಸರಕಾರಿ ಕಾಲೇಜೊಂದು ಇಂತಹ ಜವಾಬ್ದಾರಿಯನ್ನು ನಿಭಾಯಿಸುವ ಕಷ್ಟ ಪರಂಪರೆಯದೊಂದು ಕಾವ್ಯ ಸಂಪುಟವೇ. ಆದರೆ ಇಂತಹ ಜವಾಬ್ದಾರಿಗಳನ್ನು ಹೊತ್ತುಕೊಂಡಾಗ ಏನೆಲ್ಲ ಸಣ್ಣಪುಟ್ಟ ಭಿನ್ನಮತಗಳಲ್ಲಿಯೂ ಒಂದು ಸಂಸ್ಥೆ 'ಒಂದುತನ'ವನ್ನು ಸಾಕ್ಷೀಕರಿಸುತ್ತದೆ. ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಂದ ಬರುವ ಹಳ್ಳಿಗಾಡಿನ ಮಕ್ಕಳು, ಪುಟ್ಟ ಮಕ್ಕಳ ಹಾಗೆ ದುಡಿವ ಚೆಂದವನ್ನು ನೋಡುವಾಗ 'ಈ ಪ್ರಪಂಚ ಬದುಕಲುಯೋಗ್ಯವಾಗಿದೆ' ಎಂಬ ಧನ್ಯತೆ ಸ್ಫುರಿಸುತ್ತದೆ.

ವಿಶ್ವವಿದ್ಯಾಲಯವೇನೋ 'ಪುರುಷರ ಮತ್ತು ಮಹಿಳೆಯರ ಏಕವಲಯ' ಎಂಬ ಸಮಾನ ಶಿರೋನಾಮೆಯನ್ನೂ ಸಮಾನ ಓಟದ ನಿಯಮಗಳನ್ನೂ ನೀಡಿದೆ. ಹುಡುಗರಾಗಿರಲಿ, ಹುಡುಗಿಯರಾಗಿರಲಿ 10 ಕಿ.ಮೀ. ಓಟವನ್ನು ಪೂರೈಸಬೇಕು. ನಿಯಮಗಳಲ್ಲಿ ಹುಡುಗಿಯರಿಗೆ ರಿಯಾಯತಿಯೇನೂ ಇಲ್ಲ. ಆದರೆ ವಿಶ್ವವಿದ್ಯಾಲಯಮಟ್ಟದ ಸ್ಪರ್ಧಾಳುಗಳಲ್ಲಿ ಹುಡುಗರ ಮತ್ತು ಹುಡುಗಿಯರ ಅನುಪಾತ 3:1ರಷ್ಟಿತ್ತು. ಈ ಸ್ಥಿತಿ ಸಾಮಾನ್ಯವಾಗಿ ಎಲ್ಲ ಕ್ರೀಡೆಗಳದ್ದೂ ಆಗಿರುತ್ತದೆ. ಭಾಗವಹಿಸಿದ ಹುಡುಗಿಯರಲ್ಲಿ ಬೆರಳೆಣಿಕೆಯಷ್ಟು ಮಾತ್ರ ನಿತ್ಯದ ತರಬೇತಿಯನ್ನು ನಡೆಸಿಕೊಂಡವರಿದ್ದರು. ಬಹುತೇಕ ಮಹಿಳಾ ಕ್ರೀಡಾಪಟುಗಳು ರಾತ್ರಿ ಬೆಳಗಾಗುವುದರಲ್ಲಿ ಉದ್ಭವವಾದ ಉದ್ಭವಮೂರ್ತಿಗಳೇ. ಎಷ್ಟೋ ವಿದ್ಯಾರ್ಥಿನಿಯರಿಗೆ ಟ್ರ್ಯಾಕ್ ಸೂಟ್ ಇರಲಿಲ್ಲ. ಬೂಟುಗಳಿರಲಿಲ್ಲ. ಆಟದ ನಿಯಮವೂ ಗೊತ್ತಿರಲಿಲ್ಲ. ಬಾಲ್ಯದಲ್ಲಿ ಎಂದೋ ಓಡಿ ಬಹುಮಾನ ಪಡೆದ ನೆನಪಿಗೆ ನೀರೆರೆವ ಪ್ರೀತಿ ಅವರನ್ನು ಇಲ್ಲಿ ತಂದು ನಿಲ್ಲಿಸಿತ್ತು. ಅವರಲ್ಲಿ ಎಷ್ಟೋ ವಿದ್ಯಾರ್ಥಿನಿಯರಿಗೆ, ಮನೆಯಲ್ಲಿ ಒಪ್ಪಿಗೆಯನ್ನು ಪಡೆದು ಮತ್ತೊಂದು ಊರಿಗೆ ಬಂದು ಹಿಂದಿನ ದಿನವೇ ಉಳಿದು, ನಸುಕಿನಲ್ಲಿ ಓಟದ ಟ್ರ್ಯಾಕ್‌ಗೆ ಬರುವ ಹೊಂದಾಣಿಕೆಯ ಭಾರವೇ ಬೆಟ್ಟವಾಗಿತ್ತು. ಹೆಣ್ಣೆಂಬ ಹರಲಿಯನ್ನು ಹೊತ್ತುಕೊಂಡು ಒಂದೊಂದು ಹೆಜ್ಜೆ ಕದಲಿಸುವುದೂ ಬಳಲಿಕೆಯದು. ಅವರ ಎಳಸು ಪಾದಗಳಲ್ಲಿ ಹಿಮಾದಾಸ್‌ಳ ಪಾದಗಳ ತ್ರಾಣವಿದ್ದೀತು. ಅವರ ತೋಳುಗಳ ಬೀಸಿನಲ್ಲಿ ಸಾನಿಯಾ ಮಿರ್ಜಾ , ಸೈನಾ ನೆಹ್ವಾಲ್‌ರ ಛಾತಿಯಿದ್ದೀತು. ಹುಡುಕಿಕೊಳ್ಳುವ ಹೊತ್ತಿನಲ್ಲಿ ಬದುಕಿನ ಸೂರ್ಯಕಂತು ಮುಸ್ಸಂಜೆಯೇ ಆವರಿಸಿರುತ್ತದೆ. ಹೆಣ್ಣುಮಗಳಲ್ಲೂ ದೈಹಿಕವಾಗಿ ಮಾನಸಿಕವಾಗಿ ಸಶಕ್ತತೆಯಿರುತ್ತದೆ ಎಂಬುದನ್ನು ಕುಟುಂಬದ ಯಾಜಮಾನ್ಯವು ಮನವರಿಕೆ ಮಾಡಿಕೊಂಡು ಪ್ರೋತ್ಸಾಹಿಸುವ 'ದಂಗಲ್' ನಡೆಯುವುದು ತೀರಾ ಅಪರೂಪಕ್ಕೆ.

ಇಂದಿನ ನಸುಬೆಳಗು ಓಟದ ಸ್ಪರ್ಧೆಗಳಾಗಿ ಬಂದಿದ್ದ ಹುಡುಗಿಯರ ನಡುವೆ ತುಂಬ ವಿರಳವಾದ ದೃಶ್ಯವೊಂದನ್ನುಕಂಡೆ. ಅವಳು ಮುಸ್ಲಿಂ ಸಮುದಾಯದ ಹುಡುಗಿ. ಮುದ್ದಾಗಿದ್ದಳು. ಸಮೀಪದ ನಗರದಿಂದ ಬಂದವಳು. ಅವಳೊಂದಿಗೆ ಅವಳ ತಾಯಿಯೂ ಬಂದಿದ್ದಳು. ಸಾಮಾನ್ಯವಾಗಿ ಮುಸ್ಲಿಮ್ ಕುಟುಂಬ ಹುಡುಗಿಯರ ಆಟೋಟವನ್ನಾಗಲೀ, ಯಾವುದೇ ಸಾಂಸ್ಕೃತಿಕ ಅಸ್ಮಿತೆಯ ಹುಡುಕಾಟವನ್ನಾಗಲೀ ಪ್ರೋತ್ಸಾಹಿಸುವುದಿಲ್ಲ. ಇತ್ತೀಚಿನ ಕೋಮುವಾದದ ದಿನಗಳಲ್ಲಂತೂ ತಲೆಮೇಲಿನ ಹಿಜಾಬ್ ಸರಿಸದಂತೆ, ನೇರ ಹೋಗಿ ನೇರ ಬರುವ ಒತ್ತಡದ ತೂಗುಕತ್ತಿ ಸದಾ ಅವರ ನೆತ್ತಿಯ ಮೇಲಿರುತ್ತದೆ. ಸಾರಾ ಅಬೂಬಕ್ಕರ್ ಬರೆದ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಎಂಬ ಅನುಭವ ಕಥನಕ್ಕೆ ಪೂರ್ಣವಿರಾಮ ಬಂದಿಲ್ಲ. ಅದು ವಿಭಿನ್ನ ಕವಲುಗಳಲ್ಲಿ ಮುಂಚಲಿಸುತ್ತಲೇ ಇದೆ. ಹಾಗಿರುವಾಗ ಗೊಂಬೆಯಂತಹ ಹುಡುಗಿಯನ್ನು ಇಲ್ಲಿಯವರೆಗೂ ಕರೆದುತಂದಿದ್ದ ಆ ತಾಯಿಯ ತುಡಿತ ಅಚ್ಚರಿಯೆನಿಸುತ್ತಿತ್ತು.

ಸಂಘಟನಾ ಕಾಲೇಜಿನ ಭಾಗವಾಗಿ ಏನೇನೋ ಕೆಲಸಗಳನ್ನು ನಿಭಾಯಿಸುವ ಒತ್ತಡದಲ್ಲಿದ್ದ ನನಗೆ, ಆ ಮಹಿಳೆಯನ್ನು ಮಾತನಾಡಿಸುವುದು ಸಾಧ್ಯವಾಗಲಿಲ್ಲ. ಆದರೆ ಆಗಾಗ ಕಿರುಗಣ್ಣಿನಿಂದ ಅವಳನ್ನು ನೋಡುತ್ತಿದ್ದೆ. ಅವಳು ಆಧುನಿಕ ಪೋಷಾಕಿನಲ್ಲಿದ್ದಳು. ಬಹುಶಃ ವಿದ್ಯಾವಂತಳು. ಆದರೆ ಬದುಕಿನ ಆಯ್ಕೆಯ ಅನಿವಾರ್ಯತೆಯಲ್ಲಿ ಅವಳಿಗೆ ಮನಸ್ಸು ತೃಪ್ತವಾಗುವಷ್ಟು ಕಲಿಯುವುದು ಸಾಧ್ಯವಾದಂತಿಲ್ಲ. ಅವಳು ತಾನು ಕಳೆದುಕೊಂಡಿದ್ದ ಯಾವುದೋ ಅವಕಾಶದ ಅರಕೆಯನ್ನು ತುಂಬಿಕೊಡಲು ತನ್ನ ಕರುಳ ಕುಡಿಯನ್ನು ಮುಂದೊಡ್ಡಿಕೊಂಡು ನಿಂತಂತಿದ್ದಳು. ಆ ನಸುಗತ್ತಲ ಮಂಜುಗವಿದ ಕಾವಳದಲ್ಲಿ ಅವಳು ಅಕ್ಷರಶಃ ಕಂಪಿಸುತ್ತಿದ್ದಳು. ಹುಡುಗರ ಓಟದ ಟ್ರ್ಯಾಕ್‌ಗೆ ಸೂಚನೆಯನ್ನು ರೆಫರಿಗಳು ಕೊಡುತ್ತಿದ್ದರು. ಅರ್ಧಗಂಟೆ ಬಿಟ್ಟು ಹುಡುಗಿಯರ ಓಟ ಸಿದ್ಧವಾಗಬೇಕಿತ್ತು. ಅವಳು ಆ ಮೂಲೆಯಲ್ಲಿ ನಿಂತು ಮನಸ್ಸಿನಲ್ಲಿಯೇ ಪ್ರಾರ್ಥಿಸಿಕೊಳ್ಳುತ್ತಿದ್ದಳು. ಹುಡುಗಿ, ತನ್ನ ತಾಯಿಯ ಸ್ಥಿತಿ ನೋಡಲಾರದವಳಂತೆ ಒಂದು ಕಪ್ಪು ಚಹವನ್ನು ತೆಗೆದುಕೊಂಡು ಹೋಗಿ ಕೊಟ್ಟಳು. ಒಂದು ಬಗೆಯ ಬಿಗುವಿನ ವೇಳೆಯದು. ಸಹಜವಾಗಿ ಮಾತುಕತೆ ಎನ್ನುವುದು ಸಾಧ್ಯವಿರಲಿಲ್ಲ.

ಓಟ ಮುಗಿಯಿತು. ಮೊದಲ ಆರು ರ್‍ಯಾಂಕಿಗ್‌ನಲ್ಲಿ 'ಅವಳ ಮಗಳು' ಇರಲಿಲ್ಲ. ಅವಳು 15–20 ರ ಒಳಗೆಲ್ಲೋ ಸ್ಥಾನ ಪಡೆದಳು. ಆದರೆ ಇಷ್ಟು ಮಾತ್ರ ಸತ್ಯ– ಆ ಹುಡುಗಿ 10 ಕಿ.ಮೀ. ಗುಡ್ಡಗಾಡುಓಟದ ಗುರಿಯನ್ನು ರೀಚ್ ಮಾಡಿದ್ದಳು. ಇನ್ನೂ ಸ್ವಲ್ಪ ಪ್ರಯತ್ನಿಸಿದ್ದ'ರೆ' ಗುರಿ ತಲುಪುವುದು, ಮೊದಲ ಆರು ಸ್ಥಾನಗಳಲ್ಲಿ ಒಂದನ್ನು ಪಡೆಯುವುದು, ಯುನಿವರ್ಸಿಟಿ ಬ್ಲ್ಯೂ ಆಗುವುದು ಕಷ್ಟವಿರಲಿಲ್ಲ. ಆದರೆ... ಯಾಕೆ ಯಾವುದೂ ಸುಲಭವಾಗಿ ನಡೆಯುವುದಿಲ್ಲ? ಅವಳಿಗೆ ದಿನದಿನದ ತರಬೇತಿಯನ್ನು ನಡೆಸುವ ಅವಕಾಶ ಸಿಗಲಿಲ್ಲವೇ? ತಾಯಿಯೇ ಬೆನ್ನಿಗೆ ನಿಂತುಜೀವ ಹಿಡಿ ಮಾಡಿಕೊಂಡು ಮಗಳಿಗಾಗಿ ಮಿಡಿಯುವುದನ್ನು ನೋಡಿದರೆ, ಅದು ಅಷ್ಟೊಂದು ದುರ್ಲಭ್ಯವಾಗಿರಲಾರದು. ಅಲ್ಲವೇ?

ಹಾಗಿದ್ದರೆ, "ನಾಲ್ಕು ವರ್ಷದ ಮಗುವಾಗಿದ್ದಾಗಿನಿಂದ ದಿನದ ಏಳು ಗಂಟೆ ಸತತವಾಗಿ ಅಭ್ಯಾಸ ಮಾಡಿದ್ದೇನೆ. ಏಳು ವರ್ಷಗಳಿಂದ ಸಿನಿಮಾ ನೋಡಿಲ್ಲ. ರುಚಿಯಾದ ಊಟ ಮಾಡಿಲ್ಲ. ಶಾಪಿಂಗ್ ಮಾಡಿಲ್ಲ. ಆ ಓಲಂಪಿಕ್ ಪದಕದ ಮೇಲೆ ನನ್ನ ಹೆಸರು ಎಂದೋ ಕೆತ್ತಲ್ಪಟ್ಟಿತ್ತು"– ಎಂದು ಅಭಿಮಾನದಿಂದ ಹೇಳಿಕೊಂಡ ಸೈನಾ ನೆಹ್ವಾಲ್‌ಳ ಮಾತನ್ನು ಅವಳು ಕೇಳಿಸಿಕೊಂಡಿಲ್ಲವೇ? ಯಾರೂ, ಹೇಳಬೇಕಾದವರು ಅವಳಿಗದನ್ನು ಹೇಳಲಿಲ್ಲವೇ? ಅಥವಾ ಎಲ್ಲವನ್ನೂ ಹೇಳಿ–ಕೇಳಿದ ಮೇಲೂ ಹೇಳಿದ್ದನ್ನು ಕೇಳಿದ್ದನ್ನು ಸಾಧಿಸುವ ಛಲದ ಕೊರತೆಯ ಕಾಯಿಲೆಯ ಸಾಂಕ್ರಾಮಿಕತೆಗೆ ಅವಳೂ ಈಡಾಗಿದ್ದರಿಬಹುದು. ಉಡುವ, ತೊಡುವ, ಸುಂದರವಾಗಿ ಕಾಣಿಸಿಕೊಳ್ಳುವ ಹುಕಿ ಹೊಕ್ಕಮೇಲೆ ನಮ್ಮ ಮಕ್ಕಳು ತಮ್ಮ ಅಂತಃಶಕ್ತಿಯನ್ನು ಇಡಿಯಾಗಿ ದರ್ಶಿಸಿಕೊಳ್ಳಲಾರರೇನೋ. ಸೋತು ಬಂದವಳ ದಣಿವು ಓಡಿ ಬಂದ ದಣಿವಿಗಿಂತ ಭಾರವಾಗಿತ್ತು. ಅವಳು ತಾಯಿಯನ್ನು ತಬ್ಬಿಕೊಂಡು ಗೋಳೋ ಎಂದು ಅತ್ತಳು. ತಾಯಿ–ಮಗಳ ನಡುವಿನ ಕನಸಿನ ಕುದುರೆ ಅದೆಷ್ಟು ನೆಗೆದಿತ್ತೋ? ಇದೊಂದು ಗೆಲುವು ಅವಳ ಮತ್ತು ಅವರ ಬಾಳಿನ ಯಾವ ಬಿಡುಗಡೆಯ ಕಥನವಾಗುವುದಿತ್ತೋ? ಆದರೇನು, ಸಾಧನೆಗೆ ಕಣ್ಣೀರು ಹಾಯಿದೋಣಿಯಲ್ಲವಲ್ಲ.

ಇತ್ತಿತ್ತಲಾಗಿ ನಮ್ಮ ಹುಡುಗಿಯರಿಗೆ ವಿಚಿತ್ರ ಆಲಸ್ಯ ಬಡಿದಿದೆ. ಏನೆಲ್ಲವನ್ನೂ ಎಷ್ಟೆಲ್ಲವನ್ನೂ ಕೇಳುತ್ತಾರೆ, ನೋಡುತ್ತಾರೆ. ಆ ಕ್ಷಣ ಸಂತಸ ಪಡುತ್ತಾರೆ. ಆದರೆ ಅದನ್ನು ಧಾರಕ ಶಕ್ತಿಯಾಗಿ ಪರಿವರ್ತಿಸಿಕೊಳ್ಳುವ ನೆನಪೂ ಇಲ್ಲದೆ ನಿಸೂರವಾಗುತ್ತಾರೆ. ಯಾವುದೇ ಚಿಂತನೆಯ ಆಳಕ್ಕಿಳಿಯಲಾಗದೆ, ಸ್ವಾತಂತ್ರ್ಯ–ಸಮಾನತೆ ಎನ್ನುವುದನ್ನು ತಪ್ಪಾಗಿ ಅರ್ಥೈಸಿಕೊಂಡು ಬದುಕನ್ನು ಅಧ್ವಾನ ಮಾಡಿಕೊಳ್ಳುತ್ತಾರೆ. ಅರೆಬರೆ ತಿಳಿವಿನ ಅಪಾಯಕಾರಿ ಸ್ಥಿತಿಯಲ್ಲಿ ಕೋಮುವಾದಕ್ಕೆ ಬಲಿಯಾಗುತ್ತಾರೆ. ರಾಜಕೀಯ ಹಿತಾಸಕ್ತಿ ಕಲಿಸಿಕೊಟ್ಟ ಮಾತನ್ನು ಸ್ವವಿವೇಚನೆ ಮತ್ತು ಅರಿವಿಲ್ಲದೆ ಅಬ್ಬರಿಸಿ ಬೊಬ್ಬಿರಿಯುತ್ತಾರೆ. ಧರ್ಮ ಮತು ರಾಜಕಾರಣದ ಅಮಾನವೀಯ ಉರಿಯನ್ನು ಸದಾ ಆರದಂತೆ ನೋಡಿಕೊಳ್ಳುವ ಉರುವಲಾಗುತ್ತಿದ್ದಾರೆ.

ನನಗೆ ಆ ಹೆಂಗಸಿನೊಂದಿಗೆ ಮಾತನಾಡಲಿಕ್ಕಿತ್ತು. ನನಗೆ ನನ್ನೊಂದಿಗೂ ಮಾತನಾಡಲಿಕ್ಕಿತ್ತು. •

ದುಡಿಯುವ ಮಹಿಳೆಯರಿಗೆ ಮಾರ್ಕ್ಸವಾದಿ ಶಾಲೆ...... ಪುಟ 5 ರಿಂದ

ಹಸಿವು ಮತ್ತು ಹತಾಶೆಯನ್ನು ಅಭಿವ್ಯಕ್ತಿಸಿ ಮುಂದಿನ ಆಂದೋಲನಕ್ಕೆ ಸಜ್ಜಾಗಬೇಕಿದೆ. ದೇಶದ ಭವಿಷ್ಯ ಭಾಷೆ, ಜಾತಿ, ಪ್ರದೇಶ, ಲಿಂಗ ಅಸಮಾನತೆ ಭಿನ್ನಬೇಧ ತಾರತಮ್ಯವಿಲ್ಲದ ರಾಜಕೀಯ ಪರ್ಯಾಯವನ್ನು ಬಯಸುತ್ತಿದೆ. ಹಾಗಾಗಿ ಸಮಾಜ ಅಧ್ಯಯನದ ದಿಕ್ಸೂಚಿ ಈ ಮಾರ್ಕ್ಸವಾದಿ ಶಾಲೆಯಾಗಿದೆ, ಸಮರಶೀಲ ಹೋರಾಟ ಮಾಡಿದ ಕರ್ನಾಟಕದ ಗಟ್ಟಿಗಿತ್ತಿಯರಿಗೆ ಈ ಅಧ್ಯಯನ ಮತ್ತಷ್ಟು ಪ್ರೇರಣೆ ನೀಡಲಿ ಎಂದರು. ವಿಮಾ ನೌಕರರ ಸಂಘಟನೆಯ ರಾಜ್ಯ ನಾಯಕಿ ಗೀತಾ ಕೆ.ಎಸ್ ಭಾಷಾಂತರ ಮಾಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಎಸ್. ವರಲಕ್ಷ್ಮಿ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗಬೇಕಿದ್ದ ಆಹಾರ ಆರೋಗ್ಯ ಶಿಕ್ಷಣದಂಥ ಸೌಲಭ್ಯಗಳು ಮತ್ತು ಸೇವೆಗಳು ಇಂದಿನ ನವ ಆರ್ಥಿಕ ನೀತಿಗಳ ಪರಿಣಾಮದಿಂದಾಗಿ ಕೇವಲ ನಾಮಕಾವಾಸ್ತೆಗೆ ಬಂದು ತಲುಪುತ್ತಿವೆ. ಸರ್ಕಾರಗಳು ಒಂದು ವಿಭಾಗದ ಕಾರ್ಮಿಕರ ವಿರುದ್ಧ ಇನ್ನೊಂದು ವಿಭಾಗವನ್ನು ಎತ್ತಿಕಟ್ಟುವ ಕ್ಷುಲ್ಲಕ ರಾಜಕಾರಣದಲ್ಲಿ ತಲ್ಲೀನರಾಗಿ ಚಳುವಳಿಗೆ ಅಪಾಯವನ್ನು ತಂದೊಡ್ಡಿವೆ. ಅಪೌಷ್ಠಿಕತೆಯ ಸವಾಲು ಎದುರಿಸಲು ಮತ್ತು ನಿಜವಾದ ಲಿಂಗಾನುಪಾತದ ಅಸಮಾನತೆಯನ್ನು ಹೋಗಲಾಡಿಸಲು ಈಗಿನ ರಾಜಕೀಯ ಬದಲಾಗದೇ ಸಾಧ್ಯವಿಲ್ಲ. ಅಲ್ಲದೇ ಸರ್ಕಾರದ ನೀತಿ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಅರ್ಥೈಸಿಕೊಳ್ಳುವಲ್ಲಿ ದುಡಿಯುವ ಮಹಿಳೆಯಾಗಿ ಹಲವು ರೀತಿಯ ಬಲಹೀನತೆಗಳಿವೆ. ಹಾಗಾದರೆ ದುಡಿಯುವ ಜನತೆಗೆ ಬೇಕಿರುವ ಪರ್ಯಾಯ ರಾಜಕಾರಣವನ್ನು ನಿರಂತರವಾಗಿ ಅರಿಯಲು ಈ ಅಧ್ಯಯನ ಶಿಬಿರಗಳನ್ನು ನಡೆಸಲಾಗುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಎಚ್.ಎಸ್. ಸುನಂದಾ ಸ್ವಾಗತಿಸಿ ನಿರ್ವಹಿಸಿದರು. ಯಮುನಾ ಗಾಂವ್ಕರ್ ಮತ್ತು ಮಾಲಿನಿ ಮೇಸ್ತ ಹಾಜರಿದ್ದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿವಿ ಶ್ರೀರಾಮರೆಡ್ಡಿ, ಮೀನಾಕ್ಷಿ ಸುಂದರಂ, ಯು. ಬಸವರಾಜು, ಎಂ.ಆರ್.ಶೆಣೈ, ಎಸ್. ವರಲಕ್ಷ್ಮಿ, ಯಮುನಾ ಗಾಂವ್ಕರ್ ಪಾಠ ಮಾಡಿದರು. ಮಾರ್ಕ್ಸವಾದದ ಬೆಳವಣಿಗೆ ಮತ್ತು ತತ್ವಗಳು, ಕಮ್ಯುನಿಷ್ಟ ಪಕ್ಷದ ಇತಿಹಾಸ, ರಾಜಕೀಯ ಅರ್ಥಶಾಸ್ತ್ರ, ಜಗತ್ತಿನಲ್ಲಿ ಕಮ್ಯುನಿಷ್ಟ ಆಂದೋಲನದ ಪ್ರಸ್ತುತತೆ ಮತ್ತು ರಾಜಕೀಯ ಬದಲಾವಣೆ ಇತ್ಯಾದಿ ವಿಷಯಗಳ ಕುರಿತು ಪಾಠ ಮತ್ತು ಸಂವಾದ ನಡೆಯಿತು. ಶಾಂತಾ ಘಂಟೆ, ನಾಗರತ್ನ ಬಳ್ಳಾರಿ, ಸಿದ್ಧಮ್ಮ ಬಾಗಲಕೋಟೆ, ಜಿ ಕಮಲಾ ತುಮಕೂರು ವಿವಿಧ ವಿಷಯಗಳ ಮಂಡನೆಯ ಅಧ್ಯಕ್ಷತೆ ವಹಿಸಿದ್ದರು.

ವರದಿ: ಯಮುನಾ ಗಾಂವ್ಕರ್

ತ್ರಿಪುರಾದಲ್ಲಿ ಚುನಾವಣೆಯೆಂಬ ಪ್ರಹಸನ

ಸೆಪ್ಟಂಬರ್ 30 ರಂದು ನಡೆಯಬೇಕಿರುವ ತ್ರಿಪುರಾದಲ್ಲಿನ ಪಂಚಾಯತು ಉಪಚುನಾವಣೆಗಳಲ್ಲಿ ಬಿಜೆಪಿ 96% ಸೀಟುಗಳನ್ನು ಸ್ಪರ್ಧೆಯಿಲ್ಲದೆ ಗೆದ್ದಿದೆ. ಈ ಅಸಂಬದ್ಧ ಫಲಿತಾಂಶ ಮೂರು ಹಂತಗಳ ಪಂಚಾಯತು ಉಪಚುನಾವಣೆಗಳನ್ನು ಹೇಗೆ ಬುಡಮೇಲು ಮಾಡಲಾಗಿದೆ ಎಂಬುದರ ಉದಾಹರಣೆಯಾಗಿದೆ. ಇದು ಪ್ರತಿಪಕ್ಷಗಳ ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಲೂ ಬಿಡದ ಒಂದು ಚುನಾವಣೆ.

ಒಟ್ಟು, ಗ್ರಾಮ ಪಂಚಾಯತು ಮಟ್ಟದಲ್ಲಿ 3207, ಪಂಚಾಯತು ಸಮಿತಿ ಮಟ್ಟದಲ್ಲಿ 161 ಮತ್ತು ಜಿಲ್ಲಾ ಪರಿಷದ್‌ನ 18 ಸ್ಥಾನಗಳನ್ನು ತುಂಬಲು ಈ ಚುನಾವಣೆಗಳನ್ನು ನಡೆಸಬೇಕಾಗಿತ್ತು. ಗ್ರಾಮ ಪಂಚಾಯತು ಮಟ್ಟದಲ್ಲಿ ಇದ್ದ ಖಾಲಿ ಸ್ಥಳಗಳು ಒಟ್ಟು ಗ್ರಾಮಪಂಚಾಯತು ಸೀಟುಗಳ 52.5%. ಸುಮಾರಾಗಿ ಈ ಎಲ್ಲ ಸೀಟುಗಳು ಸಿಪಿಐ(ಎಂ) ಮತ್ತು ಎಡರಂಗದ ಸದಸ್ಯರಿಗೆ ದೈಹಿಕ ಬೆದರಿಕೆಯೊಡ್ಡಿ ಬಲವಂತದಿಂದ ರಾಜೀನಾಮೆ ಕೊಡಿಸಿದ್ದರಿಂದ ಖಾಲಿಯಾದ ಸೀಟುಗಳು.

ತ್ರಿಪುರಾದಲ್ಲಿ ಬಿಜೆಪಿ ಪಶ್ಚಿಮ ಬಂಗಾಲದ ತೃಣಮೂಲ ಕಾಂಗ್ರೆಸನ್ನು ನಕಲು ಮಾಡಿದ ಹಾಗೆ ಕಾಣುತ್ತದೆ. ಅಲ್ಲಿ ಈ ವರ್ಷ ಜೂನ್‌ನಲ್ಲಿ ನಡೆದ ಪಂಚಾಯತ್ ಚುನಾವಣೆಗಳಲ್ಲಿ 34% ಸೀಟುಗಳಲ್ಲಿ ಸ್ಪರ್ಧೆಯೇ ಇರಲಿಲ್ಲ. ಅಲ್ಲಿ ನಾಮಪತ್ರ ಸಲ್ಲಿಸಲು ಹೋದ ಎಡರಂಗ ಮತ್ತು ಇತರ ಪ್ರತಿಪಕ್ಷಗಳ ಅಭ್ಯರ್ಥಿಗಳ ಮೇಲೆ ಸತತ ಹಲ್ಲೆಗಳನ್ನು ನಡೆಸಲಾಯಿತು. ಈ ವಿಷಯದಲ್ಲಿ ತ್ರಿಪುರಾದಲ್ಲಿ ಬಿಜೆಪಿ ಟಿಎಂಸಿಯನ್ನೂ ಮೀರಿಸಿದೆ.

ಸ್ಥಳೀಯ ಸಂಸ್ಥೆಗಳನ್ನು ಇಂತಹ ದಾರಿಯಲ್ಲಿ ಬಲವಂತವಾಗಿ ವಶಪಡಿಸಿಕೊಂಡಿರುವುದು ಚುನಾವಣಾ ಪ್ರಕ್ರಿಯೆಯ ಅಪಹಾಸ್ಯ, ಮತ್ತು ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಕೆಲಸ. ತ್ರಿಪುರಾದಲ್ಲಿ ಇದನ್ನು ಫೆಬ್ರುವರಿ 2018ರ ವಿಧಾನಸಭೆ ಚುನಾವಣೆಗಳು ನಡೆದಂದಿನಿಂದ ಇದು ನಡೆಯುತ್ತಿದೆ. ಸಿಪಿಐ(ಎಂ) ಮತ್ತು ಎಡರಂಗದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಯದ ದಿನವೇ ಇಲ್ಲ. ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ನೂರಾರು ಕಚೇರಿಗಳು ಧ್ವಂಸಗೊಂಡಿವೆ ಅಥವ ಕಿತ್ತುಕೊಳ್ಳಲಾಗಿದೆ; ಸಿಪಿಐ(ಎಂ) ಮತ್ತು ಯುವಜನ ಸಂಘಟನೆಯ ಆರು ಕಾರ್ಯಕರ್ತರ ಕೊಲೆಯಾಗಿದೆ; ಸಿಪಿಐ(ಎಂ) ಬೆಂಬಲಿಗರಿಂದ ಹಣವನ್ನು ದೊಡ್ಡಪ್ರಮಾಣದಲ್ಲಿ ಕೀಳಲಾಗಿದೆ. ಕೇರಳದಲ್ಲಿ ಪರಿಹಾರ ಕೆಲಸಕ್ಕೆ ಮಾಡಿರುವ ಸಂಗ್ರಹಗಳು ವಿವಿಧೆಡೆಗಳಲ್ಲಿ ಹಲ್ಲೆಗಳಿಗೆ ಗುರಿಯಾಗಿವೆ.

ತ್ರಿಪುರಾದಲ್ಲಿ ಬಿಜೆಪಿ ಪಶ್ಚಿಮ ಬಂಗಾಲದ ತೃಣಮೂಲ ಕಾಂಗ್ರೆಸನ್ನು ನಕಲು ಮಾಡುತ್ತಿರುವ ಹಾಗೆ ಕಾಣುತ್ತದೆ. ತ್ರಿಪುರಾದ ಜನತೆ ಫೆಬ್ರುವರಿ ಚುನಾವಣೆಗಳಲ್ಲಿ ಬಿಜೆಪಿ–ಐಪಿಎಫ್‌ಟಿ ಮೈತ್ರಿಕೂಟಕ್ಕೆ ಆಡಳಿತ ನಡೆಸುವ ಜನಾದೇಶ ನೀಡಿದೆಯೇ ಹೊರತು ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನ ಮಾಡಲು, ಭಯೋತ್ಪಾದನೆ ಹರಿಯ ಬಿಡಲಿಕ್ಕೇನೂ ಅಲ್ಲ. ಇಂತಹ ಪರಿಸ್ಥಿತಿ ಬಹಳ ದಿನ ಜನಗಳ ಆಕ್ರೋಶಕ್ಕೆ ಒಳಗಾಗದೆ ಮುಂದುವರೆಯಲಾರದು ಎಂಬುದನ್ನು ಬಿಜೆಪಿ ತಿಳಿಯಬೇಕು.



ಪ್ರಕಾಶ ಕಾರಟ್



ಈ ಭಯೋತ್ಪಾದಕ ಆಳ್ವಿಕೆ ಮತ್ತು ರಾಜ್ಯ ಸರಕಾರ ಅದಕ್ಕೆ ಒದಗಿಸಿರುವ ಕೃಪಾಪೋಷಣೆ ಬಿಜೆಪಿ ಗೂಂಡಾಗಳಿಗೆ ನಾಮಪತ್ರ ಸಲ್ಲಿಸುವ ಪ್ರಯತ್ನ ಮಾಡುವ ಯಾರ ಮೇಲಾದರೂ ಯಾವುದೇ ಶಿಕ್ಷೆಯ ಭಯವಿಲ್ಲದೆ ವರ್ತಿಸಲು ಅನುಕೂಲ ಮಾಡಿ ಕೊಟ್ಟಿದೆ. ಸಿಪಿಐ(ಎಂ) ಮತ್ತು ಎಡರಂಗದ ಪ್ರತಿನಿಧಿಗಳ ಮೇಲೆ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರುಗಳು ಉಪಚುನಾವಣೆಗಳಿಗೆ ಸಂಬಂಧಪಟ್ಟಂತೆ ಸಭೆಗಳನ್ನು ಕರೆದ ಸಂದರ್ಭದಲ್ಲಿ ಅವರ ಕಚೇರಿಯೊಳಗೇ ದೈಹಿಕ ಹಲ್ಲೆಗಳು ನಡೆದಿವೆ.

ಹೀಗಿದ್ದಾಗ್ಯೂ ಸಿಪಿಐ(ಎಂ) ಮತ್ತು ಎಡರಂಗ ಜನಗಳ ಪ್ರಶ್ನೆಗಳನ್ನೆತ್ತಿ ಕಾರ್ಯಕ್ರಮಗಳನ್ನು ಸಂಘಟಿಸುತ್ತಿವೆ. ಸಪ್ಟಂಬರ್ 10 ರಂದು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯೇರಿಕೆಗಳ ವಿರುದ್ಧ ಎಡರಂಗ ಕೊಟ್ಟ ಮುಷ್ಕರದ ಕರೆಗೆ ಸ್ವಯಂಸ್ಫೂರ್ತಿಯ ಸ್ಪಂದನ ಸಿಕ್ಕಿರುವುದು ಸಂತೋಷಕರ.

ತ್ರಿಪುರಾದ ಜನತೆ ಫೆಬ್ರುವರಿ ಚುನಾವಣೆಗಳಲ್ಲಿ ಬಿಜೆಪಿ–ಐಪಿಎಫ್‌ಟಿ ಮೈತ್ರಿಕೂಟಕ್ಕೆ ಆಡಳಿತ ನಡೆಸುವ ಜನಾದೇಶ ನೀಡಿದೆಯೇ ಹೊರತು ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನ ಮಾಡಲು, ಭಯೋತ್ಪಾದನೆ ಹರಿಯ ಬಿಡಲಿಕ್ಕೇನೂ ಅಲ್ಲ. ಇಂತಹ ಪರಿಸ್ಥಿತಿ ಬಹಳ ದಿನ ಜನಗಳ ಆಕ್ರೋಶಕ್ಕೆ ಒಳಗಾಗದೆ ಮುಂದುವರೆಯಲಾರದು ಎಂಬುದನ್ನು ಬಿಜೆಪಿ ತಿಳಿಯಬೇಕು.

ಸೆಕ್ಷನ್ 498ಎ: ಮಾರ್ಪಡಿಸಿದ ಸುಪ್ರಿಂ ಕೋರ್ಟ್ ತೀರ್ಪಿಗೆ ಸ್ವಾಗತ

ಆದರೆ ಹಿಂದಿನ ತೀರ್ಪಿನ ತಪ್ಪು ಭಾವನೆಗಳನ್ನು ಪರಿಶೀಲಿಸಿಲ್ಲ– ಎಐಡಿಡಬ್ಲ್ಯುಎ

ಪುಟ 2 ರಿಂದ

'ಕಾವಲುಕೋರ' ನ್ಯಾಯವಿಧಾನಗಳಿಗೆ ಅವಕಾಶ ಕೊಟ್ಟಂತಾಗುತ್ತದೆ ಎಂದು ಎಐಡಿಡಬ್ಲ್ಯುಎ ತನ್ನ ಮಧ್ಯಪ್ರವೇಶ ಅರ್ಜಿಯಲ್ಲಿ ಹೇಳಿತ್ತು. ಎರಡುಪಕ್ಷಗಳ ನಡುವೆ ಈ ಕುರಿತು ಇತ್ಯರ್ಥವೇನಾದರೂ ಆದಲ್ಲಿ ಅದನ್ನು ಹೈಕೋರ್ಟ್ ಮಾತ್ರವೇ ವಿಚಾರಿಸಬಹುದು ಎಂದು ಹೇಳಿರುವುದು ಸರಿಯಾಗಿಯೇ ಇದೆ ಎಂದು ಎಐಡಡಬ್ಲ್ಯುಎ ಹೇಳಿದೆ.

ಆದರೆ ಮಹಿಳೆಯರು ಸೆಕ್ಷನ್ 498ಎನ್ನು ರಕ್ಷಣಾ ಕವಚವಾಗಿ ಬಳಸುವ ಬದಲು ಅಸ್ತ್ರವಾಗಿ ಬಳಸುತ್ತಾರೆ ಎಂದು ಅರ್ಮೇಶ್ ಕುಮಾರ್ ತೀರ್ಪಿನಲ್ಲಿ ಟಿಪ್ಪಣಿ ಮಾಡಿರುವುದು ತೀರಾ ಬೀಸಾದ ಹೇಳಿಕೆಯಾಗಿತ್ತು. ಅದನ್ನು ಈ ತೀರ್ಪುಕೂಡ ಒಪ್ಪುವಂತೆ ಕಾಣುತ್ತದೆ. ಈ ತೀರ್ಪು ಕೂಡ ಆರೋಪಿಗಳ ಹಕ್ಕುಗಳ ಮೇಲೆ ಗಮನ ಕೇಂದ್ರೀಕರಿಸಿದೆ. ರಾಜೇಶ ಶರ್ಮ ಕೇಸ್ ಹೆಚ್ಚಿನ ಮಹಿಖೆಯರು ಸುಳ್ಳುಗಾರರು, ಆದ್ದರಿಂದ ಪ್ರತಿವರ್ಷ ದಾಖಲಾಗುವ ಒಂದು ಲಕ್ಷಕ್ಕೂ ಕೇಸುಗಳಲ್ಲಿ ಹೆಚ್ಚಿನವುಗಳಲ್ಲಿ ಆರೋಪಿಗಳು ಖುಲಾಸೆಯಾಗುತ್ತಾರೆ ಎಂಬ ಆಧಾರದಲ್ಲಿ ಆ ತೀರ್ಪಿಗೆ ಬಂದಿತ್ತು.

ಆದರೆ ಎಐಡಿಡಬ್ಲ್ಯುಎ ಮತ್ತು ಇತರ ಮಹಿಳಾ ಸಂಘಟನೆಗಳು ಆ ತೀರ್ಪನ್ನು ಮರುವಿಮರ್ಶಿಸಬೇಕು ಎಂದು ಕೋರಿದ್ದ ಅರ್ಜಿಯಲ್ಲಿ ಹೆಚ್ಚಿನ ಪ್ರಕರಣಗಳಲ್ಲಿ ಆರೋಪಿಗಳ ಖುಲಾಸೆಗೆ ಕಾರಣ ಆರೋಪಗಳು ಸುಳ್ಳು ಎನ್ನುವುದಕ್ಕಿಂತ ಹೆಚ್ಚಾಗಿ ಇವುಗಳ ಸರಿಯಾದ ತನಿಖೆ ಆಗುತ್ತಿಲ್ಲ ಎಂಬ ಕಾರಣಕ್ಕಾಗಿ ಎಂಬ ಸಂಗತಿಯತ್ತ ಗಮನ ಸೆಳೆಯಲಾಗಿತ್ತು. ಸಾಕ್ಷ್ಯಗಳನ್ನು ಸರಿಯಾಗಿ ಸಂಗ್ರಹಿಸದಿರುವುದು, ಕೋರ್ಟುಗಳಲ್ಲಿ ವಿಳಂಬ, ಮಹಿಳೆಯರ ಮೇಲೆ ಕೇಸು ವಾಪಾಸು ಪಡೆಯಲು ಒತ್ತಡ ಇತ್ಯಾದಿಗಳತ್ತ ಗಮನ ಸೆಳೆಯಲಾಗಿತ್ತು.

ಅಂಕಿ–ಸಂಖ್ಯೆಗಳೂ ನಮ್ಮ ದೇಶದಲ್ಲಿ ಮಹಿಳೆಯರು ಪ್ರತಿದಿನ ಇಂತಹ ಕೌಟುಂಬಿಕ ಹಿಂಸಾಚಾರ ಮತ್ತು ಕಿರುಕುಳಗಳನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಸ್ವಲ್ಪಮಟ್ಟಿಗೆ ತೋರಿಸುತ್ತವೆ. 90% ಪ್ರಕರಣಗಳಲ್ಲಿ ಆರೋಪ ಪಟ್ಟಿ ಹಾಕಲಾಗುತ್ತದೆ ಎಂಬುದು ಇದನ್ನೇ ತೋರಿಸುತ್ತದೆ ಎಂದು ಎಐಡಿಡಬ್ಲ್ಯುಎ ಹೇಳಿತ್ತು.

ಅಲ್ಲದೆ ಪೋಲೀಸರು ಕಣ್ಣಿಗೆ ಕಾಣುವ ಗಾಯಗಳು ಮತ್ತು ಸಾವಿನ ಸಂದರ್ಭಗಳಲ್ಲಿ ಮಾತ್ರ ಕ್ರಿಯೆಗಿಳಿಯಬೇಕು ಎಂದು ಹೇಳಿರುವುದು ತಪ್ಪು, ಏಕೆಂದರೆ 498ಎ ದೈಹಿಕ ಮತ್ತು ಮಾನಸಿಕ ಎರಡೂ ಹಿಂಸಾಚಾರಗಳಿಗೆ ಅನ್ವಯವಾಗುತ್ತದೆ. ನಿಜ ಸಂಗತಿಯೆಂದರೆ ಹೆಚ್ಚಿನ ಮಹಿಳೆಯರು ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ಲಿಂಗ ತಾರತಮ್ಯ, ಭ್ರಷ್ಟಾಚರ ಮತ್ತು ಅದಕ್ಷತೆಯನ್ನು ಎದುರಿಸಬೇಕಾಗಿದೆ ಎಂಬುದನ್ನು ನ್ಯಾಯಾಲಯಗಳು ಗುರುತಿಸಬೇಕು ಎಂದೂ ಎಐಡಿಡಬ್ಲ್ಯುಎ ಹೇಳಿತ್ತು. ಆದರೆ ರಾಜೇಶ್ ಶರ್ಮ ಕೇಸಿನ ಈ ಎಲ್ಲ ತಪ್ಪು ಭಾವನೆಗಳನ್ನು ಈ ತೀರ್ಪು ಕೂಡ ಪರಿಶೀಲಿಸಿಲ್ಲ ಎಂದು ಜನವಾದಿ ಮಹಿಳಾ ಸಂಘಟನೆ ಹೇಳಿದೆ.

ಕೇರಳದ ಪುನರ್–ನಿರ್ಮಾಣದ ಸವಾಲುಗಳು

– ಟಿ. ಜಯರಾಮನ್ –
(ಅನುವಾದ : ಎಂ.ಜಿ.ವೆಂಕಟೇಶ)

ಹೆಚ್ಚಿನ ಗುಣಮಟ್ಟದ ಮಾನದಂಡಗಳಿಗೆ ಅನುಗುಣವಾಗಿ ಪುನರ್ ನಿರ್ಮಾಣ ಮಾಡುವುದರ ಬಗ್ಗೆ ಕೇರಳದ ಸಮಾಜದಲ್ಲಿ ಬಹಳಷ್ಟು ಆಸಕ್ತಿಯಿದೆ. ಆದರೆ ಪ್ರಶ್ನೆಯಿರುವುದು ಆ ಗುರಿ ತಲುಪುವುದು ಹೇಗೆ ಎಂಬುದರ ಬಗ್ಗೆ. ಆ ನಿಟ್ಟಿನಲ್ಲಿ ಪ್ರಜಾಸತ್ತಾತ್ಮಕ ಚರ್ಚೆ ಮುಖಾಂತರ ಕೆಲವೊಂದು ಮುಖ್ಯ ವಿಷಯಗಳು ಹೊರಹೊಮ್ಮಬೇಕು. ಜನ, ಉತ್ಪಾದನಾ ಚಟುವಟಿಕೆ, ಉದ್ಯೋಗ, ಜೀವನಾಧಾರದ ಪ್ರಶ್ನೆಗಳೇ ಪರಿಹಾರದ ತಿರುಳಾಗಬೇಕು. ಸ್ಥಳಾಂತರ ಮೊದಲ ಪರಿಹಾರವಾಗಬಾರದು. ಉಳಿದ ಸಾಧ್ಯಾ–ಸಾಧ್ಯತೆಗಳನ್ನು ಗಮನಿಸಿ ಬೇರೆ ಯಾವುದೇ ಪರಿಹಾರ ಇಲ್ಲವಾದಾಗ ಕೊನೆಯ ಪರಿಹಾರವಾಗಬೇಕು. ವಿಕೋಪದಿಂದ ಉಂಟಾದ ವೈಪರಿತ್ಯಗಳನ್ನು ನಿರ್ವಹಿಸುವುದು ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಮಸ್ಯೆ, ತಂತ್ರಜ್ಞಾನ–ಕಾನೂನು, ಆಡಳಿತದ ಸಮಸ್ಯೆಯ ವಿಷಯವೆಂದು ಪರಿಗಣಿಸಬೇಕು. ಈ ಸಂಕೀರ್ಣತೆಗಳನ್ನು ನಿರ್ವಹಿಸುವುದರಿಂದ ತಪ್ಪಿಸಿಕೊಳ್ಳುವುದಕ್ಕೆ ಸ್ಥಳಾಂತರ ಅಥವಾ ಅಭಿವೃದ್ಧಿಯನ್ನು ಹೊರತುಪಡಿಸುವುದು ಆಯ್ಕೆಯಾಗಬಾರದು.



ಇತ್ತೀಚಿನ ಪ್ರವಾಹ, ಭೂಕುಸಿತ ಹಿಂದೆದೂ ಕಾಣದ ಪ್ರಮಾಣ ಮತ್ತು ತೀವ್ರತೆಗೆ ಗುರಿಯಾಗಿ, ಕೇರಳ ಪರಿಸ್ಥಿತಿಗೆ ಹೊಂದಿಕೊಳ್ಳಲು ಗಂಭೀರ ಸವಾಲನ್ನು ಎದುರಿಸುತ್ತಿದೆ. ಈ ಹೊಂದಾಣಿಕೆಯನ್ನು ಎರಡು ರೀತಿಯ ಪ್ರಶ್ನೆಯಾಗಿ ಅರ್ಥಮಾಡಿಕೊಳ್ಳಬೇಕಿದೆ. ಒಂದು ಕಡೆ ಅಭಿವೃದ್ಧಿ ದಾರಿ ಹೊಸ ಭರವಸೆಗಳನ್ನು, ಹೊಸ ಬೇಡಿಕೆಯನ್ನು ಮತ್ತು ಹೊಸ ಒತ್ತಡವನ್ನು ಸೃಷ್ಟಿಸುತ್ತದೆ. ಇದಕ್ಕಾಗಿ ದೊಡ್ಡ ರೀತಿಯ ಬದಲಾವಣೆಗಳನ್ನು ಪಾರಂಪರಿಕವಾಗಿ ಸಮಾಜ ಪ್ರಾಕೃತಿಕ ವಿಕೋಪಗಳನ್ನು ಎದುರಿಸುತ್ತಿದ್ದ ರೀತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸುತ್ತಿದ್ದ ರೀತಿಯನ್ನು ಅವಲೋಕಿಸಬೇಕಿದೆ. ಎರಡನೇಯದಾಗಿ ಅನಿವಾರ್ಯವಾದ ಭೂ ತಾಪಮಾನ ಏರಿಕೆಯಿಂದ ಉಂಟಾಗುತ್ತಿರುವ ಮತ್ತು ಉಂಟಾಗಲಿರುವ ವಿಕೋಪಗಳಿಗೆ ಹೊಂದಿಕೊಳ್ಳಬೇಕಾಗಿದೆ.

ಈ ಎರಡೂ ವಿದ್ಯಮಾನಗಳಿಗೂ ಪರಸ್ಪರ ಸಂಬಂಧವಿದೆ. ಮೊದಲನೆಯದು ಪ್ರಾಥಮಿಕವಾದುದು. ಬಹಳ ಮುಖ್ಯವಾಗಿ ತಿಳಿಯಬೇಕಿರುವುದು. ಭೂ ತಾಪಮಾನ ಏರಿಕೆಯಿಲ್ಲದಿದ್ದರೂ ಹೊಂದಾಣಿಕೆ ಮಾಡಿಕೊಳ್ಳ ಬೇಕಾಗಿದೆ. ಅಭಿವೃದ್ಧಿಯಿಂದ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರದಲ್ಲಿ ಹೊಸ ಆಸ್ತಿಗಳ ಸೃಷ್ಟಿ, ಹೊಸ ಮೂಲಭೂತ ಸೌಕರ್ಯಗಳು ಮತ್ತು ಹೊಸ ರೀತಿಯ ಉತ್ಪಾದನಾ ಚಟುವಟಿಕೆಗಳು ಉಂಟಾಗುತ್ತವೆ.

ಮುಂಜಾಗರೂಕತಾ ಕ್ರಮ ಕೈಗೊಳ್ಳದಿದ್ದರೆ ಈ ಮಟ್ಟದ ಪ್ರಾಕೃತಿಕ ವಿಕೋಪ ಹಿಂದೆ ನಡೆದಿದ್ದಕ್ಕಿಂತ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿ ಫಲಗಳ ನಷ್ಟವುಂಟಾಗುತ್ತವೆ. ಕೇರಳದಲ್ಲಿ ಹಿಂದೆ 1924 ರ ಪ್ರವಾಹಕ್ಕಿಂತ ಇಂದು ಹೆಚ್ಚಿನ ನಷ್ಟಕ್ಕೆ ಕಾರಣ, ಆ ನಂತರ ಆಗಿರುವ ಪ್ರಗತಿ. ಕೇವಲ ಗೊಡ್ಡು ಮೂಲಭೂತವಾದಿಗಳು ಮಾತ್ರವೇ ಈ ರೀತಿಯ ಪ್ರಗತಿ ಅವಶ್ಯವಿರಲಿಲ್ಲವೆಂದು ವಾದಿಸಬಹುದು.

ಈ ಹೊಂದಾಣಿಕೆಗಾಗಿ ಪ್ರಶ್ನೆಗಳನ್ನು ಹೊಸದಾಗಿ ಚಿಂತಿಸಬೇಕಾಗಿರುವುದು ಸಕಾರಾತ್ಮಕ ಬೆಳವಣಿಗೆ. ಹಿಂದೆ ಹೊಂದಾಣಿಕೆ ನಡೆಯುತ್ತಿದ್ದುದು ಬಡತನ ಮತ್ತು ದಾರಿದ್ರ್ಯ ವ್ಯಾಪಕವಾಗಿದ್ದ ಉತ್ಪಾದನಾ ಶಕ್ತಿಗಳು ದುರ್ಬಲವಾಗಿದ್ದ ವಸಾಹತುಶಾಹಿ ಆಳ್ವಿಕೆಯ ಸಂದರ್ಭದಲ್ಲಿ. ಇಂದು ವಿಶೇಷವಾಗಿ ಕೇರಳದಲ್ಲಿ ಹೊಸ ಪ್ರಶ್ನೆಗಳನ್ನು ಹೊಸ ಸಂಪನ್ಮೂಲಗಳಿಂದ ಮತ್ತು ಹೊಸ ಕಲ್ಪನೆಗಳಿಂದ ಪುನರ್ ಪರೀಕ್ಷಿಸಬಹುದು.

ಭೂ ತಾಪಮಾನ ಏರಿಕೆ ಮುಂದೆ ಬದಲಾಗುವ ಪರಿಸ್ಥಿತಿಯನ್ನು ಚಿಂತಿಸಲು ಒತ್ತಾಯಿಸುತ್ತದೆ. ನಾವು ಇಂದು ಗಳಿಸಿರುವುದನ್ನು ಹೆಚ್ಚಿಸಿಕೊಳ್ಳಲು ಮತ್ತು ಕಾಪಾಡಿಕೊಳ್ಳಬೇಕು. ಮಾತ್ರವಲ್ಲ, ಅದಕ್ಕೆ ಕಾರಣವಾದ ಜನಸಮೂಹದ ಕಠಿಣಶ್ರಮ ಅಡಗಿರುವುದರಿಂದ ಇಂದು ನಿರ್ಮಿಸಿರುವುದು ಮುಂದೆಯೂ ಸುಲಭವಾಗಿ ನಷ್ಟ ಮತ್ತು ಹಾನಿಗೊಳಗಾಗದಂತೆ ನೋಡಿಕೊಳ್ಳಬೇಕಿದೆ. ಮುಂದಿನ ಶತಮಾನದ ವರೆಗಿನ ಯೋಜನೆ ಅಸಾಧ್ಯ. ಮೂಲಭೂತ ಸೌಕರ್ಯ, ಉತ್ಪಾದನಾ ಚಟುವಟಿಕೆಯಲ್ಲಿನ ವಿನ್ಯಾಸ ಮುಖಾಂತರ ಮಧ್ಯಮ ಅವಧಿಯ ಯೋಜನೆಯನ್ನಾದರೂ ಕನಿಷ್ಠ ಮಾಡಬೇಕಿದೆ. ಈ ರೀತಿಯ ಹೊಂದಾಣಿಕೆಯ ಪ್ರಾಮುಖ್ಯತೆಯನ್ನು ಅಭಿವೃದ್ಧಿ ಹೊಂದುತ್ತಿರುವ ಸಮಾಜ ಕಡೆಗಾಣಿಸುವಂತಿಲ್ಲ.

ಮರುಹೊಂದಾಣಿಕೆಗೆ ನಮ್ಮ ಮುಂದೆ ಎರಡು ನಿಚ್ಚಳವಾದ ದಾರಿಯಿರುತ್ತದೆ. ಮೊದಲನೆಯದಾಗಿ ಜನರನ್ನು ಸುಭದ್ರ ಜಾಗಗಳಿಗೆ ಸ್ಥಳಾಂತರಗೊಳಿಸುವುದು ಸರ್ಕಾರ ಮತ್ತು ಸಮಾಜದ ಜವಾಬ್ದಾರಿಯೆಂದು ವಾದಿಸುವುದು. ಇದರಿಂದ ಜನರನ್ನು ಪುನರ್ವಸತಿಗೊಳಿಸುವುದು ಮತ್ತು ಹೊಸ ಉದ್ಯೋಗ ಮತ್ತು ಜೀವನೋಪಾಯ ಹುಡುಕಿಕೊಳಲು ಸಹಕರಿಸುವುದು. ಮೂಲತಃ ಜನರು ತೊಂದರೆ ಸಿಗಬಾರದೆಂಬ ಆಲೋಚನೆಯಿಂದ ಉಂಟಾಗಿದ್ದು, ಇದು ಉದಾರ ಚಿಂತನೆಯೆಂದೆನಿಸಿದರೂ, ಜನ ಈ ಜಾಗಗಳಲ್ಲಿ ವಾಸಿಸಲೇಬಾರದಿತ್ತು ಎಂದು ಇದರ ಹಿಂದಿನ ಯೋಚನೆ. ಆದ್ದರಿಂದ ಸುಲಭವಾದ ಉಪಾಯವೆಂದರೆ ಜನರನ್ನು ಸ್ಥಳಾಂತರಗೊಳಿಸುವುದಾಗಿದೆ.

ಇಂತಹ ಧೋರಣೆ ಒಂದು ಕಡೆ ಅಧಿಕಾರಶಾಹಿ ತಾಂತ್ರಿಕ ಮನೋವೃತ್ತಿಯಿಂದ ಬರುವುದಾದರೆ, ಇನ್ನೊಂದು ಕಡೆ ಪರಿಸರ ಕಾರ್ಯಕರ್ತರೂ ಇಂತಹ ಧೋರಣೆ ಪ್ರದರ್ಶಿಸುತ್ತಾರೆ. ಇಂತಹ ಪರಿಹಾರಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಮೂಲಕ ಅತ್ಯುತ್ಯಮವಾದದನ್ನು ಹುಡುಕಿ ಈ ಸಮಸ್ಯೆ ಪರಿಹಾರಕ್ಕೆ ಅಳವಡಿಸಲು ತಾಳ್ಮೆಯ ಅಭಾವ ಕಂಡುಬರುತ್ತದೆ. ತಮ್ಮ ಪರಿಹಾರವೇ ಅತ್ಯುತ್ತಮವಾದುದು ಎಂಬ ಧೋರಣೆ ಸಹ ಇದೆ.

ಜನರ ಇಚ್ಛೆ ಮತ್ತು ಸೃಜನಾತ್ಮಕ ಸಲಹೆಗಳನ್ನು ನಿರ್ಲಕ್ಷಿಸುವುದು ಸಹ ಈ ದೋರಣೆಯ ಇನ್ನೊಂದು ಅಂಶ ಆಗಿರುತ್ತದೆ. ಪರಿಸರ ಕಾರ್ಯಕರ್ತರ ದೃಷ್ಠಿಕೋನ ಇಂತಹ ದಾರಿಯಲ್ಲೇ ಇರುತ್ತದೆ. ಇದಕ್ಕೆ ಕಾರಣ ಮನುಷ್ಯ ಮತ್ತು ಸಮಾಜವನ್ನು ಸಮಸ್ಯೆಯೆಂದು ಪರಿಗಣಿಸುವುದು ಮತ್ತು ಪ್ರಕೃತಿಗೆ ಮೊದಲ ಆದ್ಯತೆ ನೀಡುವುದು. ಆದ್ದರಿಂದ ನೀಡುವ ಮೊದಲ ಪ್ರತಿಕ್ರಿಯೆ "ನಾನು ಹೇಳಿದಂತೆ ಈಗ ಆಗಿದೆ." ಅದರ ಪ್ರಕಾರ ಮಾನವ ಚಟುವಟಿಕೆಗಳ ತಡೆ, ನಿಷೇದ ಇತ್ಯಾದಿ. ಅಂತ್ಯದಲ್ಲಿ ಜನರನ್ನು ಪ್ರಕೃತಿಯಿಂದ ಪ್ರತ್ಯೇಕಿಸುವುದು.

ಪರಿಸರ ಮತ್ತು ಸಮುದಾಯಗಳ ಪರಸ್ಪರ ಜೋಡಣೆ

ದುರದೃಷ್ಟವಶಾತ್ ಎರಡೂ ಮನೋಭೂಮಿಕೆಗಳು, ಜನಗಳ ಅನುಭವ ಮತ್ತು ಅವರ ದುಡಿಮೆಯಿಲ್ಲದಿದ್ದರೆ ಪರಿಸರ ಇರುವುದಿಲ್ಲವೆಂಬ ವಿಷಯವನ್ನು ಮರೆಯುತ್ತವೆ. ಕಡಲತೀರದಲ್ಲಿ ಸಮುದಾಯಗಳು ಸರ್ಕಾರಗಳು ಕಡಲ ನಿಯಂತ್ರಣ ಕಾನೂನಿನ ಬಗ್ಗೆ ಚಿಂತಿಸುವ ಮೊದಲೇ ವಾಸವಾಗಿದ್ದವು. ಅರಣ್ಯಗಳ ವಿಷಯಗಳಲ್ಲಿ ಅರಣ್ಯ ಹಕ್ಕು ಕಾಯ್ದೆ ಸರಿಯಾದ ದೃಷ್ಠಿಯ ಕಡೆ ವಾಲಿದ್ದರೆ ಅಂತಹ ದೃಷ್ಟಿಕೋನ ಕಡಲತೀರದಲ್ಲಿರುವವರಿಗೆ ಅನ್ವಯಿಸಿರುವುದಿಲ್ಲ. ಕೇರಳದ ವಿಷಯದಲ್ಲಿ ಇದು ಇನ್ನೂ ವಿಶಿಷ್ಟವಾಗಿದೆ. ಕೇರಳದ ಕಡಲ ಪ್ರದೇಶಗಳು ಅಭಿವೃದ್ಧಿ ಹೊಂದಿದ್ದು ವಿಶಿಷ್ಟ ಉತ್ಪಾದನಾ ಚಟುವಟಿಕೆಗಳಿದ್ದು ಅದರಿಂದಾಗಿ ಜೀವನಾಧರ ಅದೂ ಕಳೆದ 2–3 ಶತಮಾನಗಳಲ್ಲಿ ರೂಪುಗೊಂಡಿದೆ.

ಕುಟ್ಟನಾಡ್ ನಂತಹ ಪ್ರದೇಶವನ್ನು ಕೃಷಿಯ ಪಾರಂಪರಿಕ ಜಾಗವೆಂದು ಘೋಷಿಸಲಾಗಿದ್ದು ಮನ್ರೋ ದ್ವೀಪದಲ್ಲಿ ಸ್ಥಳೀಯವಾಗಿ ಜೈವಿಕ–ಭೌಗೋಳಿಕ ಬದಲಾವಣೆಗಳು ಹಿಂದಿನ ಅಭಿವೃದ್ಧಿಯ ಸಾಧನೆಗಳಿಗೆ ಕುತ್ತು ಬಂದಿದೆ. ಕಡಲ ತೀರದ ಜನರು ಎದುರಿಸಲಿರುವ ಸಮಸ್ಯೆಯ ಸ್ಯಾಂಪಲಿನಂತಿದೆ ಇದು. ಜನರ ಜೀವ ಮತ್ತು ಜೀವನಾಧಾರದ ರಕ್ಷಣೆ ಅಂತಹ ಪ್ರದೇಶಗಳಲ್ಲಿ ಆಲೋಚನೆ ಮತ್ತು ಶ್ರಮದ ಅವಶ್ಯಕತೆಯಿರುತ್ತದೆ. ಪ್ರಾಕೃತಿಕ ವಿಕೋಪದ ನೆಪದಲ್ಲಿ ಏಕಾಏಕಿ ಇವುಗಳ ಬಗ್ಗೆ ಕಠಿಣ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ.

ಇದೇ ರೀತಿಯ ಮತ್ತೊಂದು ಕ್ಲಿಷ್ಟ ಸಮಸ್ಯೆಯೆಂದರೆ ಪಶ್ಚಿಮಘಟ್ಟದಲ್ಲಿರುವ ಸಮುದಾಯಗಳದ್ದು. ಇಡೀ ಭೂಪ್ರದೇಶವನ್ನು ಪ್ಲಾಂಟೇಶನ್ ಚಟುವಟಿಕೆ ಮತ್ತು ವ್ಯವಸಾಯದ ಪರಿಸರಕ್ಕೆ ಒಗ್ಗಿಸಲಾಗಿದೆ. ಇದನ್ನು ಪಾರಂಪರಿಕ ಎಂದು ಪರಿಗಣಿಸಬೇಕೆ ಅಥವಾ ವಸಾಹತು ದಬಾವಣೆ ಎಂದು ಪರಿಗಣಿಸಬೇಕೆ? ಚರಿತ್ರೆಯಲ್ಲಿ ಎಷ್ಟು ಕಾಲ ಹಿಂದೆ ಹೋಗಿ ಹಿಂದಿನ "ಪರಿಸರ ತಪ್ಪು"ಗಳನ್ನು ಸರಿ ಪಡಿಸಬಹುದು?

ಕೇರಳ ಇರಲಿ ಅಥವಾ ಎಲ್ಲೇ ಆಗಲಿ ಪರಿಸರವನ್ನು ಹಿಂದಿನ ಯುಗಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಏನಿದ್ದರೂ ಪರಿಸರ ತಾಳಿಕೊಳ್ಳುವ ರೀತಿಯ ಅಭಿವೃದ್ಧಿಗೆ ಒತ್ತುಕೊಡುವುದು ಉಳಿದ ದಾರಿ. ಇದು ಕೇರಳ ರಾಜ್ಯ ಮತ್ತು ಸಮಾಜ ಅನುಸರಿಸಬಹುದಾದ ಎರಡನೇಯ ವಿಧಾನ – ಪರಿಸರ ಮತ್ತು ಹೊಂದಾಣಿಕಾ ಸವಾಲುಗಳನ್ನು ವಿಜ್ಞಾನದ ಉತ್ತಮ ಬಳಕೆ ಮತ್ತು ಜನರ ಅನುಭವಗಳ ಜತೆ ಕ್ರಿಯಾತ್ಮಕವಾಗಿ ಜೋಡಿಸಿ, ಕೇರಳ ಜನರ

ಪುಟ 11 ಕ್ಕೆ





ಚಿತ್ರ ವ್ಯಂಗ್ಯ

ಹೆಚ್. ಆರ್. ನವೀನ್ ಕುಮಾರ್


ಪೆಟ್ರೋಲ್ ಸುಂಕ V/S ಕಾರ್ಪೋರೇಟ್ ತೆರಿಗೆ

ಮೋದಿ ಸರಕಾರದ ಮೊದಲ 3 ವರ್ಷಗಳಲಿ

- ಹೆಚ್ಚಿಸಿದ ಪೆಟ್ರೋಲ್ ಸುಂಕ (1.88 ಲಕ್ಷ ಕೋಟಿ ರೂ.) ಹೆಚ್ಚಿಸಿದ ಕಾರ್ಪೋರೇಟ್ ತೆರಿಗೆಯ (90.2 ಸಾವಿರ ಕೋಟಿ ರೂ.) ಎರಡು ಪಟ್ಟು
- ಒಟ್ಟು ತೆರಿಗೆಯಲ್ಲಿ ಪೆಟ್ರೋಲ್ ಸುಂಕದ ಪಾಲು ಇಮ್ಮಡಿಯಾಗಿದೆ (ಶೇ. 8.4 ರಷ್ಟು ಹೆಚ್ಚಿದೆ) ಕಾರ್ಪೋರೇಟ್ ತೆರಿಗೆಯ ಪಾಲು ಶೇ. 6.4 ಕಡಿಮೆಯಾಗಿದೆ
- ಕಾರ್ಪೋರೇಟ್ ತೆರಿಗೆಯ ಪಾಲು 2013-14 ರಷ್ಟೇ (ಶೇ. 34.7) ಇಟ್ಟಿದ್ದರೂ ಪೆಟ್ರೋಲ್ ಸುಂಕ ಏರಿಕೆ ಬೇಕಿರಲಿಲ್ಲ

ವರ್ಷ	2012–13	2013–14	2014–15 (ಮೋದಿ ಸರಕಾರದ ಅವಧಿ)	2015–16	2016–7
ಪೆಟ್ರೋಲಿಯಂ ಅಬಕಾರಿ ಸುಂಕ	84.2	88.1	106.7	198.8	276.5
ಒಟ್ಟು ತೆರಿಗೆ ಆದಾಯದ %	8.1	7.7	8.6	13.7	16.1
ಕಾರ್ಪೋರೇಟ್ ತೆರಿಗೆ ಮೊತ್ತ *	356.3	394.7	428.9	453.2	484.9
ಒಟ್ಟು ತೆರಿಗೆ ಆದಾಯದ %	34.4	34.7	34.5	31.1	28.3

* ಸಾವಿರ ಕೋಟಿ ರೂಗಳಲ್ಲಿ   ಮೂಲ : ವಾರ್ಷಿಕ ಸಿಬಿಜಿ ವರದಿಗಳು



ಈಗ ಹೇಳಿ.. ಮೋದಿ ಸರಕಾರ ಶ್ರೀಸಾಮಾನ್ಯನ ಪರವೋ.. ಕಾರ್ಪೋರೇಟ್ ಪರವೋ ?

ವಿಜೆಕೆ–80 : ಐದು ದಶಕಗಳ ಹೋರಾಟದ ಮೆಲುಕು

ವಸಂತರಾಜ ಎನ್.ಕೆ.



ಕರ್ನಾಟಕದ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಚಳುವಳಿಯ ಹಿರಿಯ ಚೇತನ ಕಾ. ವಿ.ಜೆ. ಕೆ.ನಾಯರ್ ಅವರಿಗೆ ಇದೇ ಸೆಪ್ಟೆಂಬರ್ 13 ರಂದು 80 ವರ್ಷ ತುಂಬಿದೆ. ಈ ವರ್ಷವೇ ಅವರ ಸಾರ್ವಜನಿಕ ಹೋರಾಟದ ಬದುಕಿನ ಐದು ದಶಕಗಳೂ ಕಳೆದಿವೆ. ಇವೆರಡರ ಬಗ್ಗೆ ಮೆಲುಕು ಹಾಕಲು ಸೆಪ್ಟೆಂಬರ್ 16 ರಂದು ಇ.ಎಂ.ಎಸ್. ಭವನದಲ್ಲಿ ಒಂದು ಸಮ್ಮಿಲನ ಏರ್ಪಡಿಸಲಾಗಿತ್ತು. ಅದರ ಬಗ್ಗೆ ಒಂದು ಕಿರು ವರದಿ. ಈ ಸಂದರ್ಭದಲ್ಲಿ ವಿ.ಜೆ.ಕೆ. ಅವರ ಐದು ದಶಕಗಳ ಸಾರ್ವಜನಿಕ ಬದುಕಿನ ಒಂದು ಸ್ಥೂಲ ನೋಟವೂ ಜತೆಗಿದೆ.

ಸೆಪ್ಟೆಂಬರ್ 16 ರಂದು ಸಂಜೆ, ಕಾ.ವಿ.ಜೆ. ಕೆ. ಅವರ ಜತೆ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಚಳುವಳಿಯಲ್ಲಿ ಕಳೆದ ಐದು ದಶಕಗಳಲ್ಲಿ ನಿಕಟವಾಗಿ ದುಡಿದ ವಿವಿಧ ಸಂಸ್ಥೆ ಸಂಘಟನೆ ಮತ್ತು ಕ್ಷೇತ್ರಗಳ ಅಸಂಖ್ಯಾತ ಸಂಗಾತಿಗಳಲ್ಲಿ ಪ್ರಾತಿನಿಧಿಕವಾಗಿ ಕೆಲವು ಸಂಗಾತಿಗಳನ್ನು ಸಮ್ಮಿಲನಕ್ಕೆ ಆಹ್ವಾನಿಸಲಾಗಿತ್ತು. ಆದರೂ 150ಕ್ಕಿಂತ ಹೆಚ್ಚು ಜನ ಭಾಗವಹಿಸಿದ್ದು ಇ.ಎಂ.ಎಸ್ ಭವನ ಕಿಕ್ಕಿರಿದು ತುಂಬಿತ್ತು. ಲಘು ಉಪಹಾರದ ನಂತರ ಇವರಲ್ಲಿ ಕೆಲವರು ಕಾ. ವಿ.ಜೆ.ಕೆ. ನಾಯರ್ ಜತೆ ತಮ್ಮ ಅನುಭವಗಳನ್ನು ಮೆಲುಕು ಹಾಕಿದರು.

ಮೊದಲಿಗೆ ಬಿಇಎಲ್ ಯೂನಿಯನಿನ ಪ್ರಧಾನ ಕಾರ್ಯದರ್ಶಿಯಾಗಿದ್ದ ಸುಕುಮಾರ ಪಿಳ್ಳೆ, ವಿ.ಜೆ.ಕೆ. ಕಾರ್ಮಿಕನಾಗಿ ದುಡಿದ ಬಿ.ಇ.ಎಲ್ ಮತ್ತು ಬೆಂಗಳೂರಿನ ಸಾರ್ವಜನಿಕ ಉದ್ಯಮಗಳ ಒಟ್ಟಾರೆ ಕಾರ್ಮಿಕ ಚಳುವಳಿಗೆ, ಹಾಗೂ 1980–81 ರ ಬೆಂಗಳೂರಿನ ಸಾರ್ವಜನಿಕ ಉದ್ಯಮಗಳ ಚಾರಿತ್ರಿಕ ಮುಷ್ಕರಕ್ಕೆ ಅವರ ಕೊಡುಗೆಯನ್ನು ಸ್ಮರಿಸಿದರು. ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿದ ಪರಿಷ್ಕರಣವಾದಿ ಎಐಟಿಯುಸಿ ವಿರುದ್ಧ ಕಾರ್ಮಿಕರ ವೇದಿಕೆ ಸ್ಥಾಪಿಸಿ, ಆ ಮೇಲೆ ಸಿಐಟಿಯುಗೆ ಸಂಯೋಜಿತವಾದ ಸ್ವತಂತ್ರ ಯೂನಿಯನ್ ಸ್ಥಾಪಿಸಿ ಅದು ಬೆಳೆದು, ಅದನ್ನು ಈ ವರ್ಷ ಮ್ಯಾನೇಜುಮೆಂಟು ಜತೆ ಕಾರ್ಮಿಕರ ಪರವಾಗಿ ಮಾತುಕತೆ ನಡೆಸುವ ಏಕಮಾತ್ರ ಯೂನಿಯನ್ ಆಗಿ ಕಾರ್ಮಿಕರು ಆರಿಸುವುದರ ಹಿಂದಿನ ಸತತ ಬೆಳವಣಿಗೆಯಲ್ಲಿ ವಿಜೆಕೆಯ ಕೊಡುಗೆಯನ್ನು ಸ್ಮರಿಸಿದರು. ಬಿಇಎಲ್ ನಲ್ಲಿ ಅವಿಭಜಿತ ಎಐಟಿಯುಸಿ ಯೂನಿಯನಿನ ಕಚೇರಿ ಕಾರ್ಯದರ್ಶಿಯಾಗಿ ಅವರು ದುಡಿಯುತ್ತಿದ್ದಾಗ, ಯೂನಿಯನಿಂದ ಬರುತ್ತಿದ್ದ ಅಹವಾಲುಗಳು ಬೇಡಿಕೆಗಳು ಇತ್ಯಾದಿ ಪತ್ರಗಳ ಹಿಂದಿನ ಬೌದ್ಧಿಕ ಪ್ರಬುದ್ಧತೆ ತರ್ಕಗಳಿಗೆ ಮ್ಯಾನೇಜುಮೆಂಟ್ ದಂಗಾಗಿತ್ತು. ಅದು ಎಐಟಿಯುಸಿ ಕೇಂದ್ರ ಕಚೇರಿ ದೆಹಲಿಯಿಂದ ಬರುತ್ತಿದೆ ಎಂದು ಅವರು ನಂಬಿದ್ದರು. ಆದರೆ ಅದರ ಹಿಂದಿದ್ದದ್ದು ವಿಜೆಕೆ ಎಂದು ಪಿಳ್ಳೆ ಮೆಲುಕು ಹಾಕಿದರು.

1970ರಲ್ಲಿ ಪಕ್ಷದ ಸದಸ್ಯತ್ವ ಕೊಟ್ಟಿದ್ದು, ಬಾಗೇಪಲ್ಲಿಯಲ್ಲಿ ತಳ ಮಟ್ಟದ ಕೆಲಸಕ್ಕೆ ಕಳಿಸಿದ್ದು, ತುರ್ತು ಪರಿಸ್ಥಿತಿಯಲ್ಲಿ ಬಂಧಿತರಾಗಿದ್ದಾಗ ಅವರಿಗೆ 'ಕುರಿಯರ್' ಆಗಿ ಕೆಲಸ ಮಾಡಿದ್ದು – ಮುಂತಾದ ವಿಜೆಕೆ ಜತೆ ತಮ್ಮ ದೀರ್ಘ ಕಾಲದ ಒಡನಾಟದ ನೆನಪುಗಳನ್ನು ಹಂಚಿಕೊಂಡವರು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾ.ಜಿ.ವಿ.ಶ್ರೀರಾಮರೆಡ್ಡಿ.

1980–81ರ ಸಾರ್ವಜನಿಕ ಉದ್ಯಮಗಳ ಚಳುವಳಿ, ನರಗುಂದ–ನವಲಗುಂದ ರೈತ ಚಳುವಳಿ ಮತ್ತು ಮೈಕೋ ಹೋರಾಟಗಳು ಹಾಗೂ ಅದಕ್ಕೆ ವ್ಯಾಪಕ ಸೌಹಾರ್ದ ಬೆಂಬಲ ಸಂಘಟಿಸುವ ಮೂಲಕ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರಕಾರ ಬರಲು ಕಾರಣವಾದ ರಾಜಕೀಯ ಬೆಳವಣಿಗೆಯಲ್ಲಿ ಅವರ ವಿಶಿಷ್ಟ ಪಾತ್ರವನ್ನು ವಿಶೇಷವಾಗಿ ಒತ್ತುಕೊಟ್ಟು ಹೇಳಿದರು.

'ವಿಜೆಕೆ ಕಾರ್ಮಿಕ ಚಳುವಳಿಯ ನನ್ನ ಗುರು' ಎಂದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ರಾಜ್ಯದಲ್ಲಿ ಸಿಐಟಿಯು ಮತ್ತು ಕಾರ್ಮಿಕ ಚಳುವಳಿಗೆ ಅವರ ವಿಶಿಷ್ಟ ಕೊಡುಗೆಯನ್ನು ನೆನೆಸಿದರು. ಕಾರ್ಮಿಕ ಚಳುವಳಿಯಲ್ಲಿ ಪರಿಷ್ಕರಣವಾದ ವಿರುದ್ಧ ಮತ್ತು ಸಿಐಟಿಯು ಒಳಗೂ ಸಾಮೂಹಿಕ ನಾಯಕತ್ವದ ಪರಿಕಲ್ಪನೆ ಎತ್ತಿ ಹಿಡಿಯಲು ನಡೆದ ಹೋರಾಟದಲ್ಲಿ ಅವರದ್ದು ಪ್ರಮುಖ ಪಾತ್ರವಾಗಿತ್ತು. ಕಳೆದ 3–4 ದಶಕಗಳಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕ ಚಳುವಳಿಯಲ್ಲಿ ಸಿಐಟಿಯು ಪ್ರಧಾನ ಪಾತ್ರ ವಹಿಸುವಂತೆ ಅದರ ವ್ಯೂಹ–ತಂತ್ರಗಳನ್ನು ಹೆಣೆದ ಅವರ ಕೊಡುಗೆ ಸ್ಮರಿಸಿದರು. ಕಾರ್ಮಿಕರ ಹಕ್ಕೊತ್ತಾಯಗಳನ್ನು ಮಂಡಿಸುವಾಗ ಕಾರ್ಖಾನೆಯ ಉದ್ಯಮದ ಅವರ ಸಮಗ್ರ ಅಭ್ಯಾಸ ಮಾದರಿಯಾಗಿರುವಂಥದ್ದು. ವೇತನ ಏರಿಕೆಯನ್ನು ಉತ್ಪಾದಕತೆ ಜತೆ ಜೋಡಿಸುವಾಗ ಕಾರ್ಮಿಕರು ಈಗಾಗಲೇ ಕೊಟ್ಟ ಉತ್ಪಾದಕತೆ ಸ್ಥಿರ ವೇತನದ ಭಾಗವಾಗಬೇಕು ಎಂಬ ಅವರ ವಾದ ಈಗಲೂ ದಾರಿದೀಪ. ಈಗ ಕಾರ್ಪೊರೆಟುಗಳು ಒತ್ತಾಯಿಸುತ್ತಿರುವ 'ವೇತನ ಏರಿಕೆ ಒಟ್ಟು ವೆಚ್ಚ ಹೆಚ್ಚಾಗದಂತೆ ಇರಬೇಕು' ಎಂಬ ಷರತ್ತನ್ನು ಹೇಗೆ ನಿಭಾಯಿಸುವುದು ಎಂಬಿತ್ಯಾದಿ ವಿಷಯಗಳ ಬಗ್ಗೆ ವಿಜೆಕೆ ಕಾರ್ಮಿಕ ಚಳುವಳಿಯ ನಾಯಕರ 'ಟೀಚರ್' 'ಟ್ರೈನರ್' ಆಗಬೇಕು. ಸೂರಿಯವರ ಸಮರಶೀಲ ಹೋರಾಟ ಮತ್ತು ವಿಜೆಕೆಯವರ ಅಭ್ಯಾಸಗಳ ಸಂಯೋಜನೆ ಕಾರ್ಮಿಕ ಚಳುವಳಿಯಲ್ಲಿ ಇಂದಿನ ತುರ್ತು ಅಗತ್ಯ ಎಂದು ಅವರು ವಿಜೆಕೆಯ ವಿಶಿಷ್ಟ ಕೊಡುಗೆಗಳನ್ನು ಪ್ರಸ್ತುತಪಡಿಸಿದರು.

ಸ್ವತಃ ಕಾರ್ಮಿಕ ವರ್ಗದಿಂದ ಬಂದು ಕಮ್ಯುನಿಸ್ಟ್ ಪಕ್ಷದ ಉನ್ನತ ನಾಯಕರಲ್ಲಿ ಒಬ್ಬರಾಗಿದ್ದು, ಯಾವುದೇ ಕಾರ್ಖಾನೆಯ ಉದ್ಯಮದ ಉತ್ಪಾದನಾ ಮತ್ತು ಉತ್ಪನ್ನದ ತಂತ್ರಜ್ಞಾನದ ಬಗ್ಗೆ ವಿಶೇಷ ಪರಿಣತಿ ಅಭ್ಯಾಸ, ಮಾರ್ಕ್ಸ್‌ವಾದ–ಲೆನಿನ್‌ವಾದ ದ ಮೂಲಕೃತಿಗಳ ಆಳವಾದ ಸಮಗ್ರ ಅಧ್ಯಯನ, ಆಧುನಿಕ ತಂತ್ರಜ್ಞಾನವನ್ನು ಕರಗತ ಮಾಡಿಕೊಂಡು ಅದನ್ನು ಚಳುವಳಿಯಲ್ಲಿ ಬಳಸುವುದು – ವಿಜೆಕೆ ಅವರ ಕೆಲವು ಅನನ್ಯತೆಗಳು ಎಂದು ಗುರುತಿಸಿದವರು ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ವಸಂತರಾಜ್. ತನ್ನನ್ನು ಮತ್ತು ವಿಜ್ಞಾನ–ತಂತ್ರಜ್ಞಾನ ಕ್ಷೇತ್ರದ ಹಲವರನ್ನು ಮಾರ್ಕ್ಸ್‌ವಾದಿ ಮತ್ತು ಕಮ್ಯುನಿಸ್ಟರಾಗಿ ತರಬೇತಿ ಮಾಡಿ ಬೆಳೆಸಿದ ಮತ್ತು ಈಗಲೂ ವಿಜ್ಞಾನ–ತಂತ್ರಜ್ಞಾನ, ಐಟಿ ಮತ್ತು ಸ್ವತಂತ್ರ ತಂತ್ರಾಂಶ ಚಳುವಳಿ ರೂಪಿಸಲು ಮಾರ್ಗದರ್ಶನ ಮಾಡುತ್ತಿರುವುದರ ಬಗೆಗೂ ಅವರು ಸ್ಮರಿಸಿದರು.

ಮಿನರ್ವ ಮಿಲ್ ಕಾರ್ಮಿಕ ನಾಯಕರಾಗಿದ್ದ ಚಂದ್ರಶೇಖರ್ ಮಿಲ್ ಕ್ಷೇತ್ರದ ಯೂನಿಯನುಗಳಲ್ಲಿ, ಹರಿಹರ ಪಾಲಿಫೈಬರ್ಸ್ ಕಾರ್ಮಿಕ ನಾಯಕ ಕೆಂಚ ರೆಡ್ಡಿ ತಮ್ಮ ಯೂನಿಯನಿನಲ್ಲಿ, ಮಂಜು ಮೈಕೋ ಕಾರ್ಖಾನೆಯ ಯೂನಿಯನಿನಲ್ಲಿ, ಲೋಕೇಶ್ ಮೈಸೂರಿನ ವಿಕ್ರಾಂತ ಟಯರ್ಸ್ ಯೂನಿಯನಿನಲ್ಲಿ ವಿಜೆಕೆ ಅವರ ವಿಶಿಷ್ಟ ಕೊಡುಗೆ ಮತ್ತು ತಮ್ಮ ದೀರ್ಘ ಒಡನಾಟಗಳ ಬಗ್ಗೆ ಮೆಲುಕು ಹಾಕಿದರು. ಜನ–ವಿಜ್ಞಾನ ಚಳುವಳಿ ಕ್ಷೇತ್ರದ ಡಾ. ಎಸ್. ಚಟರ್ಜಿ ವಿಜ್ಞಾನ–ತಂತ್ರಜ್ಞಾನ ಕ್ಷೇತ್ರದ ಬಗ್ಗೆ ಅವರ ತಿಳುವಳಿಕೆ, ಒಲವು ಹಾಗೂ ದಾಖಲೀಕರಣ ಸೇರಿದಂತೆ ಅವರ ಶಿಸ್ತುಬದ್ಧ ಕೆಲಸದ ಶೈಲಿಯ ಬಗ್ಗೆ ತಮ್ಮ ನೆನಪುಗಳನ್ನು ಹಂಚಿಕೊಂಡರು. ಸಾಂಸ್ಕೃತಿಕ ಚಳುವಳಿ ಕ್ಷೇತ್ರದ ಎಂ.ಜಿ.ವೆಂಕಟೇಶ್, ದೀರ್ಘಕಾಲ ವಿಜೆಕೆ ಅವರ ವೈದ್ಯರಾಗಿದ್ದ ಡಾ. ಪ್ರಕಾಶ ರಾವ್ ಅವರ ಹಲವು ವಿಶಿಷ್ಟತೆಗಳನ್ನು ಗುರುತಿಸಿದರು. ಮಾತನಾಡಿದ್ದ ಹಲವರು ವಿಜೆಕೆ ನೂರು ವರ್ಷ ಬಾಳಲಿ ಎಂದು ಹಾರೈಸಿದರು.

1937ರಲ್ಲಿ ಕೇರಳದಲ್ಲಿ ಮೊದಲ ಕಮ್ಯುನಿಸ್ಟ್ ಶಾಖೆ ಆರಂಭವಾಗಿತ್ತು. ಕೇವಲ 20 ವರ್ಷಗಳಲ್ಲಿ ಕಮ್ಯುನಿಸ್ಟ್ ಪಕ್ಷ ಸ್ಪಷ್ಟ ಬಹುಮತ ಪಡೆದು ಚುನಾಯಿತವಾಗಿತ್ತು. ಮುಂದಿನ 20 ವರ್ಷಗಳಲ್ಲಿ ಇದನ್ನು ಕರ್ನಾಟಕದಲ್ಲಿ ಸಾಧ್ಯ ಮಾಡುವುದು ಹೇಗೆ? ಎಂಬ ಸವಾಲನ್ನು ಕಾ. ವಿಜೆಕೆ ಕೊನೆಗೆ ಮಾತನಾಡುತ್ತಾ, 'ನೂರು ವರ್ಷ ಬಾಳಲಿ ಎಂದು ಹಾರೈಸಿ'ದವರತ್ತ ಎಸೆದರು. ಕರ್ನಾಟಕದ ಇತಿಹಾಸವನ್ನು ವರ್ಗದೃಷ್ಟಿಕೋಣದಿಂದ ಅರ್ಥ ಮಾಡಿಕೊಳ್ಳುವುದು,, ಕರ್ನಾಟಕದ ಜನಮನಗಳಲ್ಲಿ ಬೇರೂರಿರುವ ತಾತ್ವಿಕತೆಗಳನ್ನು ಅರ್ಥಮಾಡಿಕೊಂಡು ಅದನ್ನು ಬದಲಾಯಿಸುವ ಬಗೆ ಕಂಡು ಹಿಡಿಯುವುದು ಅಗತ್ಯ ಕೆಲಸ. ಇದರಲ್ಲಿ ನಾವೆಲ್ಲರೂ ತೊಡಗಬೇಕು ಎಂದು ಅವರು ಕರೆ ನೀಡಿದರು. ●



ವಿಜೆಕೆ ಅನುವಾದಕನ ಹೆಸರು ಹೇಳಿದ್ದರೆ !



ತುರ್ತು ಪರಿಸ್ಥಿತಿಯಲ್ಲಿ ಎ.ಕೆ.ಜಿ. ಲೋಕಸಭೆಯಲ್ಲಿ ಮಾಡಿದ ಭಾಷಣದ ಕನ್ನಡ ಅನುವಾದ ಮಾಡಿಸಿ ಮುದ್ರಿಸಿ ಹಂಚುವಾಗ ವಿಜೆಕೆ ಬಂಧಿತರಾಗಿದ್ದರು. ಮುದ್ರಿಸಿದ ಪ್ರೆಸ್ ಮಾಲಿಕರನ್ನೂ ಬಂಧಿಸಲಾಗಿತ್ತು. ಅನುವಾದದ ಜವಾಬ್ದಾರಿಯನ್ನು ತನಗೆ ಮತ್ತು ಡಿ.ಆರ್.ನಾಗರಾಜ್ ಅವರಿಗೆ ವಹಿಸಿದ್ದರು. ಅದೃಷ್ಟವೋ ದುರಾದೃಷ್ಟವೋ ಅನುವಾದಕರ ಹೆಸರನ್ನು ವಿಜೆಕೆ ಮುದ್ರಿಸಿಯೂ ಇರಲಿಲ್ಲ ಮತ್ತು ಪೋಲಿಸರಿಗೆ ಬಿಟ್ಟು ಕೊಡಲೂ ಇಲ್ಲ. ಅವರು ಅನುವಾದಕನ ಹೆಸರು ಬಿಟ್ಟುಕೊಟ್ಟಿದ್ದರೆ ನನ್ನನ್ನೂ ಬಂಧಿಸುತ್ತಿದ್ದರೂ. ಬಹುಶಃ ನನ್ನ ಜೀವನದ ಗತಿಯೇ ಬೇರೆಯಾಗುತ್ತಿತ್ತೇನೋ ಎಂದು ವಿಜೆಕೆ ಜತೆ ತಮ್ಮ ಒಡನಾಟದ ಬಗ್ಗೆ ನೆನೆಸಿಕೊಂಡವರು ಪ್ರಸಿದ್ಧ ದಲಿತ ಕವಿ ಸಿದ್ದಲಿಂಗಯ್ಯನವರು. ಅದೇ ರೀತಿ ತಾವು ಆರ್. ಗೋಪಾಲಸ್ವಾಮಿ ಅಯ್ಯರ್ ಹಾಸ್ಟೆಲಿನ ಕೆಲವು ಅವ್ಯವಸ್ಥೆಗಳ ವಿರುದ್ಧ ಸುಮಾರು 300 ವಿದ್ಯಾರ್ಥಿಗಳ ಚಳುವಳಿಯನ್ನು ಸಂಘಟಿಸಿದಾಗ ವಿಜೆಕೆ ಅವರ ಬೆಂಬಲ ಮಾರ್ಗದರ್ಶನವನ್ನೂ ನೆನೆದರು. ಹಾಸ್ಟೆಲಿನಲ್ಲಿ ಊಟ ನಿಲ್ಲಿಸಿದಾಗ 300 ಕುಟುಂಬಗಳಲ್ಲಿ ತಲಾ ಒಬ್ಬರಂತೆ ವಿದ್ಯಾರ್ಥಿಗಳಿಗೆ ಊಟಕ್ಕೆ (ಅದೂ ಚಿಕನ್–ಮಟನ್ ಊಟ!) ವ್ಯವಸ್ಥೆ ಮಾಡಿ ಸೌಹಾರ್ದ ಬೆಂಬಲ ಸಂಘಟಿಸಿದ್ದನ್ನು ಕೃತಜ್ಞತೆಯಿಂದ ನೆನೆಸಿಕೊಂಡರು. ವಿಜೆಕೆ ಮತ್ತು ಹಲವು ಕಮ್ಯುನಿಸ್ಟ್ ನಾಯಕರಲ್ಲಿ ಇರುವ ಏನನ್ನಾದರೂ ಎದುರಿಸುವ ಛಲ, ನಿಸ್ವಾರ್ಥ ಸರಳ ಜೀವನ, ಬದ್ಧತೆಗಳನ್ನು ಮೆಚ್ಚಿಕೊಂಡರು.

ವಿಜೆಕೆ 80: ಒಂದು ಹಿನ್ನೋಟ

ವಿಜೆಕೆಯವರ ಐದು ದಶಕಗಳ ಸಾರ್ವಜನಿಕ ಬದುಕಿನ ಒಂದು ಪೂರ್ಣ ಹಿನ್ನೋಟ ಒಂದೇ ಬರಹದಲ್ಲಿ ಕೊಡುವುದು ಕಷ್ಟ. ಆದರೆ ಇಲ್ಲಿ 1980ರ ದಶಕದ ಆರಂಭದ ವರೆಗೆ ಒಂದು ಸ್ಥೂಲ ಚಿತ್ರ ಕೊಡಲಾಗಿದೆ. ಅವರ ಬದುಕಿನ ಮುಂದಿನ ಹಂತಗಳ ಮತ್ತು ಇತರ ಕೆಲವು ಆಯಾಮಗಳು ಕಾರ್ಯಕ್ರಮದ ವರದಿಯ ಭಾಗವಾಗಿ ಪುಟ 9ರಲ್ಲಿದೆ.

60 ವರ್ಷಗಳ ಹಿಂದೆ, ವಿ ಜೆ ಕೃಷ್ಣನ್ ಕುಟ್ಟಿ ನಾಯರ್ ಕೇರಳದ ಚೆಂಗನ್ನೂರ್‌ನಿಂದ ಬೆಂಗಳೂರಿಗೆ ಬಂದದ್ದು ಉದ್ಯೋಗವನ್ನರಸಿ. ಎರಡನೇ ಮಹಾಯುದ್ಧದಲ್ಲಿ ಸಿಂಗಾಪುರದಲ್ಲಿ ಸೈನಿಕರಾಗಿದ್ದ ತಂದೆ ಗೋಪಾಲ್ ಕುರುಪ್ ಅಗಲಿದಾಗ ಇವರಿಗೆ 3 ವರ್ಷ. 8ನೇ ವಯಸ್ಸಿನಲ್ಲಿ ತಾಯಿಯೂ ಅಗಲಿದರು. ಆದ್ದರಿಂದ ಎಸ್‌ಎಸ್‌ಎಲ್‌ಸಿ ಯನ್ನು ಮೊದಲ ದರ್ಜೆಯಲ್ಲೇ ಪಾಸು ಮಾಡಿದರೂ ಮುಂದಿನ ಶಿಕ್ಷಣ ಸಾಧ್ಯವಾಗದೇ ಟೈಪಿಂಗ್, ಶಾರ್ಟ್‌ಹ್ಯಾಂಡ್ ತರಬೇತಿ ಪಡೆದರು.

ಬೆಂಗಳೂರಿನಲ್ಲಿ ಜೂನ್ 1958ರಲ್ಲಿ ಅವರಿಗೆ ಸಾರ್ವಜನಿಕ ವಲಯದ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್(ಬಿಇಎಲ್)ನಲ್ಲಿ ಟೈಪಿಸ್ಟ್ ಉದ್ಯೋಗ ಸಿಕ್ಕಿತು. ಆದರೆ ಜೀವನದಲ್ಲಿ ಮೇಲಕ್ಕೇರುವ ಮಹತ್ವಾಕಾಂಕ್ಷೆ ಅವರನ್ನು ಮೊದಲು ಬಹಳ ಅವಕಾಶಗಳಿದ್ದ ಅಕೌಂಟೆನ್ಸಿಯತ್ತ ಸೆಳೆಯಿತು. ಅದು ಕೈಗೂಡುವುಂತಾದರೂ, ಸಂದರ್ಭವಶಾತ್ ಅವರು ಅಕೌಂಟೆನ್ಸಿ ಬಿಟ್ಟು ಆಗಷ್ಟೇ ಬೆಳೆದು ಬರುತ್ತಿದ್ದ ಎಲೆಕ್ಟ್ರಾನಿಕ್ಸ್ ರಂಗದಲ್ಲಿ ಅಧ್ಯಯನದತ್ತ ತಿರುಗುವಂತೆ ಮಾಡಿತು. ಇದರಲ್ಲೂ ಕಠಿಣ ಶ್ರಮದಿಂದಾಗಿ ಬಹಳ ಬೇಗನೇ ಪ್ರಾವೀಣ್ಯತೆಯನ್ನು ಗಳಿಸಿ, ಇನ್ನೇನು ಸೀನಿಯರ್ ಟೆಕ್ನಿಕಲ್ ಅಸಿಸ್ಟೆಂಟ್ ಆಗಿ ಬದುಕಿನಲ್ಲಿ ಅವರು ಆಗ ಬಯಸುತ್ತಿದ್ದ ಉನ್ನತಿಯತ್ತ ಸಾಗಬೇಕು ಎನ್ನುವಷ್ಟರಲ್ಲಿ ಒಂದು ಅನಿರೀಕ್ಷಿತ ಘಟನೆ ಅವರ ಬದುಕಿನ ದಿಕ್ಕನ್ನೇ ಬದಲಿಸಿತು.

ಡಿಸೈನ್ ಡ್ರಾಫ್ಟ್ಸ್‌ಮನ್ ಆಗಿ ಬಡ್ತಿ ಪಡೆದಿದ್ದ ಭಾರತ್ ಎಲೆಕ್ಟ್ರಾನಿಕ್ಸ್ ನೌಕರರ ಸಂಘ (ಬಿಇಇಯು) ದ ಉಪಾಧ್ಯಕ್ಷ ಎಂ ಎಸ್ ಚಂದ್ರಶೇಖರ ರಾವ್ ಅವರನ್ನು ಮತ್ತೆ ಸಾಮಾನ್ಯ ಡ್ರಾಫ್ಟ್ಸ್‌ಮನ್ ಮಾಡಿ ಹಿಂಬಡ್ತಿ ಮಾಡಿದ್ದನ್ನು ಪ್ರತಿಭಟಿಸಿ ಬಿಇಎಲ್ ಕಾರ್ಮಿಕರು ಜೂನ್ 23, 1964ರಿಂದ ಟೂಲ್ ಡೌನ್ ಮುಷ್ಕರ ಆರಂಭಿಸಿದರು. ವಿಜೆಕೆ ಒಬ್ಬ ವಿಧೇಯ ನೌಕರನಾಗಿದ್ದರು. ಜತೆಗೆ ಯೂನಿಯನ್ ಸಂಘಟಿಸಿದ ಮೆರವಣಿಗೆ ಇತ್ಯಾದಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಆದರೆ ಈ ಮುಷ್ಕರಕ್ಕೇನೂ ನೇತೃತ್ವ ನೀಡಿರಲಿಲ್ಲ. ಆದರೂ ಮುಷ್ಕರ ಮುಗಿದಾಗ ಅವರನ್ನು ಅಮಾನತುಗೊಳಿಸಿದ್ದು ಯೂನಿಯನ್ ಮುಖಂಡರಿಗೂ, ಕಾರ್ಯಕರ್ತರಿಗೂ ಆಶ್ಚರ್ಯ ಉಂಟು ಮಾಡಿತ್ತು.

ವಿಜೆಕೆಯವರು ಕೆಲಸ ಮಾಡುತ್ತಿದ್ದ ವಿಭಾಗದ ಅಧಿಕಾರಿಗಳು ಅವರನ್ನು ಶಿಸ್ತುಕ್ರಮದಿಂದ ಉಳಿಸಿಕೊಳ್ಳಲು ಪ್ರಯತ್ನಪಟ್ಟರೂ ಯಶಸ್ವಿಯಾಗಲಿಲ್ಲ. ಇದು ಆಗ ಹತ್ತು ವರ್ಷ ತುಂಬಿದ್ದ ಬಿಇಎಲ್‌ನಲ್ಲಿ 62ನೇ ಟೂಲ್ಸ್‌ಡೌನ್ ಮುಷ್ಕರವಾಗಿತ್ತು. ಸಮರಶೀಲ ಕಾರ್ಮಿಕರಿಗೆ ಬುದ್ದಿ ಕಲಿಸಬೇಕೆನ್ನುವ ಕೆಲವು ಅಧಿಕಾರಿಗಳ ಹಟ ಮತ್ತು ಸಂಕುಚಿತ ಪ್ರಾಂತೀಯತೆ ಇತ್ಯಾದಿಗಳು ಕೆಲಸ ಮಾಡುತ್ತಿದ್ದವು. ವಿಜೆಕೆ ಮೇಲಿನ ಆರೋಪಗಳು ಸಾಬೀತಾಗದಿದ್ದರೂ ಅವರನ್ನು ಕ್ಷಮೆ ಕೋರಲು ಹೇಳಲಾಯಿತು. ಅವರು ನಿರಾಕರಿಸಿದಾಗ ಜನವರಿ 1967 ರಲ್ಲಿ ಅವರನ್ನು ಕೆಲಸದಿಂದ ತೆಗೆದು ಹಾಕಲಾಯಿತು. ಮುಂದೆ ನ್ಯಾಯಾಲಯ ಈ ವಜಾ ಆದೇಶ ಕಾನೂನುಬಾಹಿರ ಎಂದು ತೀರ್ಪು ನೀಡಿತು. ಆದರೆ ಅಷ್ಟರಲ್ಲಿ ವಿಜೆಕೆ ಯವರ ಬದುಕು ವರ್ಗಹೋರಾಟದ ದಾರಿ ಹಿಡಿದಿತ್ತು.

ಬಿ.ಇ.ಎಲ್. ನಿಂದ ವಜಾ ಆದ ನಂತರದ ಕೆಲವು ತಿಂಗಳುಗಳು ಬಹಳ ಕಷ್ಟದ ದಿನಗಳು. ಈ ಅವಧಿಯಲ್ಲಿ 'ಜೀವನೋಪಾಯದ ಹುಡುಕಾಟ ಅವರ ಬದುಕಿನ ಮುಂದಿನ ದಾರಿಯ ಹುಡುಕಾಟವೂ ಆಯಿತು. 1968ರ ಅಂತ್ಯದ ವೇಳೆಗೆ ಅವರು ಬಿಇಇಯು ಕಚೇರಿಯಲ್ಲಿಯೇ ಪೂರ್ಣ ಕಾಲದ ಕಾರ್ಯಕರ್ತರಾಗಿ ಸೇರಿಕೊಂಡರು. ಈ ಅವಧಿಯಲ್ಲಿ ಕೆಲವು ಕಾರ್ಮಿಕ ಆಂದೋಲನದ, ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತರೊಂದಿಗೆ, ಒಡನಾಟ, ಚರ್ಚೆ, ಅಧ್ಯಯನ, ಜ್ಯೋತಿ ಬಸುರವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ಸಿಪಿಐ(ಎಂ) ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಅಕಸ್ಮಾತ್ತಾಗಿ ಕೈಗೆ ಹತ್ತಿದ್ದು ಅವರನ್ನು ಸಿಪಿಐ(ಎಂ) ಬಳಿ ತಂದು ನಿಲ್ಲಿಸಿತು. ಇದು ಸರಿಯಾಗಿ ಐವತ್ತು ವರ್ಷಗಳ ಹಿಂದೆ.

ನಂತರದ ವರ್ಷಗಳು ಪೂರ್ಣವಾಗಿ ಹೋರಾಟದ ವರ್ಷಗಳು. ವರ್ಗ ಹೋರಾಟ ಮತ್ತು ಅದನ್ನು ಸರಿಯಾದ ದಿಕ್ಕಿನಲ್ಲಿ ಒಯ್ಯುವ ಧೋರಣೆಯನ್ನು ರೂಪಿಸಿಕೊಳ್ಳುವ ಹೋರಾಟ.

ಅವರು ಬೆಂಗಳೂರಿನಲ್ಲಿ ಪಕ್ಷಕ್ಕೆ ಸೇರಿದ ನಂತರ ನಡೆದ ಮೊದಲ ' ಬೆಂಗಳೂರು ಜಿಲ್ಲಾ ಸಮ್ಮೇಳನದಲ್ಲಿ ಸಿಪಿಐ(ಎಂ)ನ ಜಿಲ್ಲಾ ಸಮಿತಿಯ ಸದಸ್ಯರಾಗಿ ಆಯ್ಕೆಗೊಂಡರು.. 1971ರಲ್ಲಿ ನಡೆದ ಸಿಪಿಐ(ಎಂ)ನ 9ನೇ ಸಮ್ಮೇಳನದಲ್ಲಿ ಅವರು ಪಕ್ಷದ ರಾಜ್ಯ ಸಮಿತಿಗೂ ಆಯ್ಕೆಯಾದರು.

ಈ ನಡುವೆ ಕಾರ್ಮಿಕ ರಂಗದಲ್ಲಿ ನಡೆಯುತ್ತಿದ್ದ ಸೈದ್ಧಾಂತಿಕ ಹೋರಾಟದಲ್ಲಿ ಅವರ ಸರಿಯಾದ ಸೈದ್ಧಾಂತಿಕ ನಿಲುವಿನಿಂದಾಗಿ ಅವರನ್ನು ಬಿಇಇಯು ಕಚೇರಿಯಿಂದ ಹೊರ ಹಾಕಲಾಯಿತು. ಆದರೆ ಅದು ಅವರನ್ನು ರಾಜ್ಯದ ಕಾರ್ಮಿಕ ಆಂದೋಲನದ ವಿಶಾಲ ರಂಗಕ್ಕೆ ಧುಮುಕುವಂತೆಯೂ ಮಾಡಿತು. ಐಕ್ಯತೆ ಮತ್ತು ಹೋರಾಟದ ಘೋಷಣೆಯೊಂದಿಗೆ ರಾಜ್ಯದಲ್ಲಿಯೂ ರೂಪುಗೊಂಡ ಸಿಐಟಿಯುನ ಒಬ್ಬ ಪ್ರಮುಖ ಮುಖಂಡರಾಗಿ ಅವರು ಬೆಳೆದರು. ಮುಂದೆ ಅದರ ರಾಜ್ಯ ಪ್ರಧಾನ ಕಾರ್ಯದರ್ಶಿ, ಅಧ್ಯಕ್ಷರಾಗಿ ಅವರು ರಾಜ್ಯದಲ್ಲಿ ಕಾರ್ಮಿಕ ಆಂದೋಲನಕ್ಕೆ ನೇತೃತ್ವ ನೀಡಿದ್ದಾರೆ.

1973–78 ರ ಅವಧಿ ಅವರನ್ನು ಕಾರ್ಮಿಕ ವರ್ಗದಿಂದಲೇ ಬಂದ ಒಬ್ಬ ಸಮರ್ಥ ಕಾರ್ಮಿಕ ಧುರೀಣನಾಗಿ ರೂಪಿಸಿದ ವರ್ಷಗಳು ಸೈದ್ಧಾಂತಿಕವಾಗಿಯೂ, ಸಂಘಟನಾತ್ಮಕವಾಗಿಯೂ. ಮೆಟಲ್ ಲ್ಯಾಂಪ್ ಕ್ಯಾಪ್ ಕಾರ್ಖಾನೆಯ ಹೋರಾಟ ಈ ಅವಧಿಯ ಅವರ ನೇತೃತ್ವದಲ್ಲಿನ ಒಂದು ಪ್ರಮುಖ ಹೋರಾಟ.

ಈ ನಡುವೆ ಬಂದ ತುರ್ತು ಪರಿಸ್ಥಿತಿ ಅವರ ಬದುಕಿಗೆ ಇನ್ನೊಂದು ಆಯಾಮವನ್ನು ಕೊಟ್ಟಿತು. ಲೋಕಸಭೆಯಲ್ಲಿ ಸಿಪಿಐ(ಎಂ) ಗುಂಪಿನ ಮುಖಂಡರಾಗಿದ್ದ ಎ.ಕೆ.ಜಿ. ಯವರು ಸಂಸತ್ತಿನಲ್ಲೇ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಮಾಡಿದ ಭಾಷಣವನ್ನು, ಅದರ ಕನ್ನಡ ಅನುವಾದವನ್ನು ಮುದ್ರಿಸಿ ಹಂಚಿದ್ದಕ್ಕಾಗಿ ಜೈಲುವಾಸ ಅನುಭವಿಸಬೇಕಾಗಿ ಬಂದ ಅವರು ಆ ಜೈಲಿನಲ್ಲಿದ್ದ ಏಕೈಕ ಮಾರ್ಕ್ಸ್‌ವಾದಿ, ಉಳಿದವರಲ್ಲಿ ಹೆಚ್ಚಿನವರು ಆರೆಸ್ಸೆಸ್ ಮತ್ತು ಬೇರೆ ಪ್ರತಿಗಾಮಿ ಹಿನ್ನೆಲೆಯವರು.

ತುರ್ತು ಪರಿಸ್ಥಿತಿಯನ್ನು ಹಿಂತೆಗೆದುಕೊಂಡ ನಂತರ ಭುಗಿಲೆದ್ದ ಸರ್ವಾಧಿಕಾರಶಾಹಿ –ವಿರೋಧಿ ಹೋರಾಟದ ಭಾಗವಾಗಿ 1980–81ರಲ್ಲಿ ಬೆಂಗಳೂರಿನಲ್ಲಿ ಹೊಮ್ಮಿ ಬಂದ ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕರ ಸುಮಾರು ಮೂರು ತಿಂಗಳ ಮುಷ್ಕರ ಇಡೀ ನಗರವದಲ್ಲಿ ಮಾತ್ರವಲ್ಲ, ರಾಜ್ಯದ ರಾಜಕೀಯದಲ್ಲೂ ಸಂಚಲನ ಉಂಟು ಮಾಡಿತು. ಇದರಲ್ಲಿ ಸಿಐಟಿಯು ವಿನದ್ದು, ಮತ್ತು ಅದರಲ್ಲಿ ಸಾರ್ವಜನಿಕ ವಲಯದ ಉದ್ದಿಮೆಯಿಂದಲೇ ಬಂದಿದ್ದ ವಿಜೆಕೆ ನಾಯರ್ ಅವರದ್ದು ಒಂದು ಪ್ರಮುಖ ಪಾತ್ರ. ಆ ಸಮಯದಲ್ಲಿ ಬೆಂಗಳೂರಿನ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಸಂಖ್ಯಾತ್ಮಕವಾಗಿ ಸಿಐಟಿಯು ಪ್ರಭಾವ ಹೆಚ್ಚೇನೂ ಇರದಿದ್ದರೂ ಅದು ತನ್ನ 'ಐಕ್ಯತೆ ಮತ್ತು ಹೋರಾಟ'ದ ತತ್ವವನ್ನು ಯಶಸ್ವಿಯಾಗಿ ಜಾರಿಗೆ ತಂದ ಹೋರಾಟವಿದು.



ಚಿತ್ರಗಳು: ಸಿಐಟಿಯು 4ನೇ ಮತ್ತು ಸಿಪಿಐ(ಎಂ) 11ನೇ ರಾಜ್ಯ ಸಮ್ಮೇಳನಗಳಲ್ಲಿ ವಿಜೆಕೆ



ಉರ್ವಸ್ಟೋರ್ ಮಾರುಕಟ್ಟೆಯನ್ನು ಸುಸಜ್ಜಿತಗೊಳಿಸಲು ಆಗ್ರಹಿಸಿ ಡಿವೈಎಫ್ಐ ಪ್ರತಿಭಟನೆ

ಮಂಗಳೂರು ಉರ್ವಸ್ಟೋರ್‌ನ ಮಾರುಕಟ್ಟೆಯನ್ನು ಸುಸಜ್ಜಿತಗೊಳಿಸುವಂತೆ ಒತ್ತಾಯಿಸಲು ಹಾಗೂ ಮಾರುಕಟ್ಟೆಗೆ ಮೂಲಸೌಕರ್ಯಗಳನ್ನು ಕಲ್ಪಿಸಲು ಆಗ್ರಹಿಸಿ ಮಾರುಕಟ್ಟೆ ಮುಂಭಾಗದಲ್ಲಿ ಡಿವೈಎಫ್ಐ ಉರ್ವಸ್ಟೋರ್ ಘಟಕದ ನೇತೃತ್ವದಲ್ಲಿ ಸಪ್ಟೆಂಬರ್ 17 ರಂದು ಪ್ರತಿಭಟನೆ ನಡೆಯಿತು.

ಡಿವೈಎಫ್ಐ ದ.ಕ.ಜಿಲ್ಲಾ ಘಟಕದ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಮಂಗಳೂರು ನಗರಾಧ್ಯಕ್ಷ ನವೀನ್ ಕೊಂಚಾಡಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಉರ್ವಸ್ಟೋರ್ ಘಟಕದ ಅಧ್ಯಕ್ಷ ಇಕ್ಬಾಲ್, ಕಾರ್ಯದರ್ಶಿ ಧನರಾಜ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು

– ವಾಸುದೇವ ಉಚ್ಚಿಲ



150 ಐಟಿ ಉದ್ಯೋಗಿಗಳಿಂದ ಪ್ರತಿಭಟನೆ

ಬೆಂಗಳೂರಿನ MPS Ltd ಎಂಬ ಐಟಿ ಸಂಸ್ಥೆಯ 11 ಉದ್ಯೋಗಿಗಳನ್ನು ವಜಾ ಮಾಡಿದ್ದು, ಅದರ ವಿರುದ್ಧ 150 ಕ್ಕೂ ಹೆಚ್ಚು MPS Ltd ಐಟಿ ಉದ್ಯೋಗಿಗಳು ಅವರ ಸಂಸ್ಥೆಯ ಎದುರಿಗೆ ಸೆ. 20 ರಂದು ಪ್ರತಿಭಟನೆ ನಡೆಸಿದರು. ಅವರು Karnataka State IT/ITeS Employees Union (KITU) ಸಂಘಟನೆಯ MPS Ltd ಘಟಕದ ಸದಸ್ಯರಾಗಿದ್ದು, ಕಾನೂನುಬಾಹಿರ ವಜಾ ವಿರುದ್ಧ ಪ್ರತಿಭಟಿಸಿದರು.

ಸೆಪ್ಟೆಂಬರ್ 17, 1948 ಹೈದರಾಬಾದ್ ವಿಮೋಚನಾ ದಿನ

ಈ ವಾರ ಚರಿತ್ರೆಯಲ್ಲಿ

ಸೆಪ್ಟೆಂಬರ್ 17ನ್ನು ಹೈದರಾಬಾದ್ ವಿಮೋಚನಾ ದಿನವಾಗಿ ಆಚರಿಸುವುದು ಇತ್ತೀಚಿನ ವರ್ಷಗಳಲ್ಲಿ ಆರಂಭವಾಗಿದೆ. ಅದು 1948ರಲ್ಲಿ ಭಾರತೀಯ ಮಿಲಿಟರಿ ಹೈದರಾಬಾದು ಪ್ರಾಂತ್ಯ ಪ್ರವೇಶಿಸಿ, ನಿಜಾಮನ ಆಳ್ವಿಕೆಯಿಂದ ಜನತೆ ವಿಮೋಚನೆಯಾದ ದಿನವೆನ್ನುವುದು ನಿಜ. ಕೆಲವು ರಾಜಕೀಯ ಶಕ್ತಿಗಳು ಅದನ್ನು ಹೈದರಾಬಾದಿನ ಮುಸ್ಲಿಂ ನಿಜಾಮನ ಆಳ್ವಿಕೆಯಿಂದ ಹಿಂದೂ ಜನತೆಯ ವಿಮೋಚನೆಯೆಂದೋ, ಸರದಾರ ಪಟೇಲರ ದಿಟ್ಟ ನಾಯಕತ್ವದ ವಿಜಯ ಎಂಬ ಅರೆಸತ್ಯಗಳನ್ನು ಹರಡಿ ಅಥವಾ ಸರಳೀಕರಣಗಳನ್ನು ಮಾಡಿ ಅದಕ್ಕೆ ಬೇರೆ ಬಣ್ಣ ಕೊಡುವ ಪ್ರಯತ್ನ ಮಾಡುತ್ತಿದ್ದಾರೆ. ಈಗ ಹೈದರಾಬಾದ್ ವಿಮೋಚನೆ ದಿನ ಸುತ್ತ ಹುಟ್ಟಿಕೊಂಡಿರುವ ಕಥನಗಳು ಹಲವು ಸತ್ಯಗಳನ್ನು ಮರೆಮಾಚುತ್ತವೆ, ಹಲವು ಮಿಥ್ಯೆಗಳನ್ನು ಸೃಷ್ಟಿಸುತ್ತವೆ.



ಮೊದಲನೆಯದಾಗಿ ಹೈದರಾಬಾದಿನ ಜನತೆಯನ್ನು ನಿಜಾಮನ ಆಳ್ವಿಕೆಯಿಂದ ವಿಮೋಚನೆಗೊಳಿಸಿದ್ದರ ಶ್ರೇಯಸ್ಸು ಪ್ರಧಾನವಾಗಿ ಆಂಧ್ರ ಮಹಾಸಭಾ ಮತ್ತು ಕಮ್ಯುನಿಸ್ಟ್ ಪಕ್ಷಕ್ಕೆ ಸಲ್ಲಬೇಕು. ನಿಜಾಮನ ಬರ್ಬರ ಪಾಳೆಯಗಾರಿಯ ವಿರುದ್ಧ 1945ರಿಂದ 3 ವರ್ಷಗಳ ಕಾಲ ನಡೆದ ಅತ್ಯಂತ ಸಮರಶೀಲ ಹೋರಾಟಕ್ಕೆ ಈ ರಾಜಕೀಯ ಶಕ್ತಿಗಳು ನಾಯಕತ್ವ ಕೊಟ್ಟಿದ್ದವು. ಇದನ್ನು ಸದೆಬಡಿಯಲು ನಿಜಾಮ ತನ್ನ ಸೈನ್ಯ ಮತ್ತು ಕುಖ್ಯಾತ ಅರೆಸೈನಿಕ ಪಡೆ ರಜಾಕಾರರನ್ನು ಹರಿಯಬಿಟ್ಟಿದ್ದ. ಅದರ ವಿರುದ್ಧ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಸಶಸ್ತ್ರ ಗೆರಿಲ್ಲಾ ಹೋರಾಟ ಮಾಡಬೇಕಾಗಿ ಬಂದಿತ್ತು. 1947ರ ಮೊದಲು ಬ್ರಿಟಿಷ್ ಸರಕಾರ ನಿಜಾಮನಿಗೆ ಭಾರತೀಯ ಒಕ್ಕೂಟಕ್ಕೆ ಸೇರದೆ ಸ್ವತಂತ್ರವಾಗಿರಲು ಕುಮ್ಮಕ್ಕು ಕೊಡುತ್ತಿತ್ತು. 1946ರ ಕಾಂಗ್ರೆಸ್ ಲೀಗ್ ಸರಕಾರವಾಗಲಿ, 1947ರಲ್ಲಿ ಬಂದ ಕಾಂಗ್ರೆಸ್ ಸರಕಾರವಾಗಲಿ ನಿಜಾಮನ ವಿರುದ್ಧ ದಿಟ್ಟ ನಿಲುವನ್ನು ತೆಗೆದುಕೊಳ್ಳಲಿಲ್ಲ. ನಿಜಾಮನ 'ಸ್ವತಂತ್ರ ಹೈದಾರಾಬಾದು' ಯೋಜನೆಯನ್ನು ಅಂತರ್ರಾಷ್ಟ್ರೀಯಕರಿಸದಂತೆ ತಡೆಯಲು ಓಲೈಸುವುದರಲ್ಲಿ ಮಗ್ನವಾಗಿತ್ತು. ಇದಕ್ಕಾಗಿ ನವೆಂಬರ್ 1947ರಲ್ಲಿ ನಿಜಾಮನೊಂದಿಗೆ 'ತಟಸ್ಥ ಒಪ್ಪಂದ' (Standstill agreement) ಮಾಡಿಕೊಂಡಿತ್ತು.

1947–18ರ ಈ ಘಟ್ಟದಲ್ಲಿ ಹೈದರಾಬಾದು ಇಡಿಯಾಗಿ ಭಾರತದಲ್ಲಿ ವಿಲೀನಗೊಳ್ಳಬೇಕು. ಬರ್ಬರ ಪಾಳೆಯಗಾರಿ ಪದ್ಧತಿ ಹೋಗಬೇಕು ಎಂದು ಗೆರಿಲ್ಲಾ ಹೋರಾಟದ ಮೂಲಕ ನಿಜಾಮನ ಆಡಳಿತ ಕೊನೆಗೊಳಿಸಬೇಕು ಎಂದು ಹೋರಾಡುತ್ತಿದ್ದ ಕಮ್ಯುನಿಸ್ಟ್ ನಾಯಕತ್ವದ ವಿಮೋಚನಾ ಸೈನ್ಯದ ಮೇಲೆ ನಿಜಾಮನ ಸೈನ್ಯ ಮತ್ತು ರಜಾಕಾರ ಪಡೆಗಳ ಬರ್ಬರ ದಮನಚಕ್ರವನ್ನು ನೋಡಿಕೊಂಡು ಕೇಂದ್ರದ ಕಾಂಗ್ರೆಸ್ ಸರ್ಕಾರ 'ತಟಸ್ಥ'ವಾಗಿತ್ತು. ನಿಜಾಮನ ಮೇಲೆ ದಮನಚಕ್ರ ನಿಲ್ಲಿಸುವಂತೆ ಒತ್ತಡ ಹೇರಲೂ ಇಲ್ಲ. ಪರೋಕ್ಷವಾಗಿಯಾದರೂ ವಿಮೋಚನಾ ಸೈನ್ಯಕ್ಕೆ ಸಹಾಯ ಮಾಡಲೂ ಇಲ್ಲ. 1948 ಅಗಸ್ಟ್ ಹೊತ್ತಿಗೆ ನಿಜಾಮನ ಸೈನ್ಯ ಮತ್ತು ರಜಾಕಾರರನ್ನು ಹಿಮ್ಮೆಟ್ಟಿಸಿ 3 ಜಿಲ್ಲೆಗಳಲ್ಲಿ 3 ಸಾವಿರ ಹಳ್ಳಿಗಳನ್ನು ವಿಮೋಚನೆಗೊಳಿಸಲಾಯಿತು. ಬಿಟ್ಟಿ ಚಾಕರಿ ನಿಷೇಧ, ಭೂಸುಧಾರಣೆ ಮುಂತಾದ ಪಾಳೆಯಗಾರಿ ಪದ್ಧತಿ ನಿರ್ಮೂಲನಾ ಕ್ರಮಗಳನ್ನು ಜಾರಿ ಗೊಳಿಸಿತು. ಗ್ರಾಮೀಣ ಜನತೆಯ ಭಾರಿ ಬೆಂಬಲದಿಂದ ವಿಮೋಚನಾ ಸೈನ್ಯ ಇತರ ಜಿಲ್ಲೆಗಳಲ್ಲಿ ಪ್ರವೇಶಿಸಲು ಆರಂಭಿಸಿತು. ನಿಜಾಮನ ಸರಕಾರ ಬಿದ್ದು ಹೋಗುವುದು ಹೆಚ್ಚು ಕಡಿಮೆ ಖಚಿತವಾದಾಗ ಕಾಂಗ್ರೆಸ್ ಸರಕಾರ ಮತ್ತು ಸರದಾರ ಪಟೇಲರು ಎಚ್ಚೆತ್ತುಕೊಂಡರು. 'ಪೋಲೀಸ್ ಆಕ್ಷನ್' ಹೆಸರಲ್ಲಿ ಮಿಲಿಟರಿ ಮಧ್ಯಪ್ರವೇಶಕ್ಕೆ ಆದೇಶ ನೀಡಲಾಯಿತು.

ಪೋಲೀಸ್ ಆಕ್ಷನ್' ಸೆಪ್ಟೆಂಬರ್ 13ರಂದು ಆರಂಭವಾಗಿ 5 ದಿನಗಳಲ್ಲಿ ನಿಜಾಮ ಶರಣಾಗತನಾದ. ಆದರೆ ಮುಂದಿನ ದಿನಗಳಲ್ಲಿ ಅದರ ನಿಜವಾದ ಹೂರಣ ಬಯಲಾಯಿತು. ಬೀಕರ ಅಪರಾಧಗಳನ್ನು ಎಸಗಿದ್ದ ನಿಜಾಮನ ಅಧಿಕಾರಿಗಳಿಗಾಗಲಿ, ರಜಾಕಾರರಿಗಾಗಲಿ ಯಾವುದೇ ಶಿಕ್ಷೆಯಾಗಲಿಲ್ಲ. ಸಾವಿರಾರು ನೂರಾರು ಎಕರೆಗಳ ಒಡೆಯರಾಗಿದ್ದು ನಿಜಾಮನ ಬೆಂಬಲಿಗರಾಗಿದ್ದು ವಿಮೋಚನಾ ಸೈನ್ಯದ ದಾಳಿಗೆ ಹೆದರಿ ಓಡಿ ಹೋಗಿದ್ದ ದೇಶಮುಖಗಳು ಜಮೀನುದಾರರುಗಳು ಸೈನ್ಯದ ಸಹಾಯದಿಂದ ವಾಪಸು ಬಂದು ರೈತರಿಗೆ ಕೃಷಿ ಕೂಲಿಕಾರರಿಗೆ ಹಂಚಲಾಗಿದ್ದ ಜಮೀನುಗಳನ್ನು ವಶಪಡಿಸಿಕೊಂಡರು. ಕಮ್ಯುನಿಸ್ಟರು ಮತ್ತು ರೈತ–ಕೃಷಿಕೂಲಿ ನಾಯಕಕರು ಕಾರ್ಯಕರ್ತರುಗಳನ್ನು ಮಿಲಿಟರಿ ಬೇಟೆಯಾಡಿ ಕೊಲ್ಲಲಾರಂಭಿಸಿತು. ಗೃಹಮಂತ್ರಿ ಪಟೇಲರು "ಜನರಿಗೆ ಉಪಟಳ ಕೊಡುತ್ತಿರುವ' ಕಮ್ಯುನಿಸ್ಟರನ್ನು ಹತ್ತಿಕ್ಕುವುದು ಪೋಲೀಸ್ ಆಕ್ಷನ್' ನ ಉದ್ದೇಶ ಎಂದು ಬಹಿರಂಗವಾಗಿಯೇ ಹೇಳಿದರು. 'ಜನ' ಎಂದರೆ ಪಟೇಲರ ಪ್ರಕಾರ 'ಸಾವಿರಾರು ನೂರಾರು ಎಕರೆಗಳ ಒಡೆಯರು' ಎಂದಾದರೆ ಅವರು ಹೇಳಿದ್ದು ನಿಜವಾಗಿತ್ತು!

ಬಿಟ್ಟಿ ನಿಷೇಧ, ಭೂಸುಧಾರಣೆ ಮುಂತಾದ ಪಾಳೆಯಗಾರಿ ಪದ್ಧತಿ ನಾಶದ ಸಾಧನೆಗಳನ್ನು ಉಳಿಸಿಕೊಳ್ಳಲು, ಭಾರೀ ಜಮೀನುದಾರರ ರಕ್ಷಣೆಗೆ ನಿಂತ ಭಾರತದ ಮಿಲಿಟರಿ ವಿರುದ್ಧ ಸಶಸ್ತ್ರ ಗೆರಿಲ್ಲಾ ಪ್ರತಿರೋಧ ಮುಂದುವರೆಸಬೇಕಾಯಿತು. ಈ ಪ್ರತಿರೋಧ ಹತ್ತಿಕ್ಕಲು ಮಿಲಿಟರಿ ಮುಂದಿನ 3 ವರ್ಷಗಳಲ್ಲಿ ಭೀಕರ ದಮನಚಕ್ರ ನಡೆಸಿತು. ಹೈದರಾಬಾದು ವಿಮೋಚನೆ ಮತ್ತು ಪಾಳೆಯಗಾರಿ ಪದ್ಧತಿಯ ನಾಶಕ್ಕೆ ನಡೆದ 5 ವರ್ಷಗಳ ಹೋರಾಟದಲ್ಲಿ 4 ಸಾವಿರ ಕಮ್ಯುನಿಸ್ಟರು ರೈತ–ಕೃಷಿಕೂಲಿಕಾರ ನಾಯಕರು ಕಾರ್ಯಕರ್ತರ ಕೊಲೆಯಾಯಿತು. 10 ಸಾವಿರಕ್ಕೂ ಹೆಚ್ಚು ಜನ 3–4 ವರ್ಷಗಳ ಕಾಲ ಚಿತ್ರಹಿಂಸೆ ಮತ್ತು ಕಠಿಣ ಜೈಲುವಾಸ ಅನುಭವಿಸಬೇಕಾಯಿತು. 50 ಸಾವಿರಕ್ಕೂ ಹೆಚ್ಚು ಜನ ಪೋಲೀಸ್ ಮಿಲಿಟರಿ ಕ್ಯಾಂಪುಗಳಲ್ಲಿ ಯಮಯಾತನೆ ಅನುಭವಿಸಬೇಕಾಯಿತು. ಸಾವಿರಾರು ಮಹಿಳೆಯರು ಅತ್ಯಾಚಾರ ಮುಂತಾದ ಚಿತ್ರಹಿಂಸೆಗಳಿಗೆ ಗುರಿಯಾದರು.



ಹೈದ್ರಾಬಾದು ವಿಮೋಚನೆಯಲ್ಲಿ ರೈತರ ಸಶಸ್ತ್ರ ಹೋರಾಟದ ಮತ್ತು ಕಮ್ಯುನಿಸ್ಟ್ ನಾಯಕತ್ವದ ಪಾತ್ರ, ನಿಜಾಮನ ಮತ್ತು 'ಸ್ವತಂತ್ರ' ಹೈದರಾಬಾದು ಬಗ್ಗೆ ಪಟೇಲ್ ಸೇರಿದಂತೆ ಕಾಂಗ್ರೆಸ್ ಸರಕಾರದ ಮೃದು ಧೋರಣೆ, ಕಮ್ಯುನಿಸ್ಟರ ಮೇಲುಗೈ ಆಗುತ್ತಿದ್ದಂತೆ ನಡೆದ 'ಪೋಲೀಸ್ ಆಕ್ಷನ್' ಹಾಗೂ ಪಾಳೆಯಗಾರಿ ವ್ಯವಸ್ಥೆ ಉಳಿಸಿಕೊಳ್ಳಲು ಕಮ್ಯುನಿಸ್ಟರ ರೈತ ಹೋರಾಟಗಾರರ ದಮನ, ನಿಜಾಮ ಮಾತ್ರವಲ್ಲ ಎಲ್ಲಾ ರಾಜರುಗಳ ವಿರುದ್ಧ ಜನತಾ ಹೋರಾಟಗಳಿಂದ ಕಾಂಗ್ರೆಸ್ ದೂರವಿದ್ದದ್ದು – ಇವೆಲ್ಲವನ್ನೂ ಮರೆ ಮಾಚಲಾಗುತ್ತಿದೆ. ಇವನ್ನು ಈ ಹೈದರಾಬಾದು ವಿಮೋಚನಾ ದಿನದಂದು ನೆನಪು ಮಾಡಿಕೊಳ್ಳುವುದು ಅಗತ್ಯ.

ನೌಕಾಸೈನಿಕರ (ರಿನ್ ಬಂಡಾಯ), ತೇಭಾಗ ರೈತರ ಹೋರಾಟ, ಕೇರಳದ ಪುನ್ನಪ್ರ–ವಾಯಲಾರ್ ಮುಂತಾದ ಸಮರಶೀಲ ಹೋರಾಟಗಳ ಜತೆ ತೆಲಂಗಾಣ ರೈತರ ಸಶಸ್ತ್ರ ಹೋರಾಟ, ಭಾರತದ ಸ್ವಾತಂತ್ರ್ಯಕ್ಕೆ ಸಹ ಹಾದಿ ಮಾಡಿಕೊಟ್ಟಿತ್ತು. ಸ್ವಾತಂತ್ರ್ಯ ಹೋರಾಟವನ್ನು ಸಾಮ್ರಾಜ್ಯಶಾಹಿ ವಿರುದ್ಧ ಮಾತ್ರವಲ್ಲದೆ ಬಂಡವಾಳಶಾಹಿ–ಪಾಳೆಯಗಾರಿ ವ್ಯವಸ್ಥೆಗಳ ವಿರುದ್ಧ ಮತ್ತು ಜನತೆಯ ಆರ್ಥಿಕ–ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಸಹ ಹೋರಾಟವಾಗಿ ಮುಂದುವರೆಸುವಲ್ಲೂ ತೆಲಂಗಾಣ ರೈತರ ಸಶಸ್ತ್ರ ಹೋರಾಟ ಪ್ರಮುಖ ಪಾತ್ರ ವಹಿಸಿತ್ತು.

ಹೆಚ್ಚಿನ ವಿವರಗಳಿಗೆ, ಈ ಹೋರಾಟದ ಅಪ್ರತಿಮ ನಾಯಕ ಪಿ.ಸುಂದರಯ್ಯ ಅವರ ಈ ಎರಡು ಪುಸ್ತಕಗಳನ್ನು ಓದಬಹುದು.

– ವೀರ ತೆಲಂಗಾಣ: ತೆಲಂಗಾಣ ರೈತರ ಸಶಸ್ತ್ರ ಹೋರಾಟ 1946–51 : ಕ್ರಿಯಾ ಪ್ರಕಾಶನ ಪ್ರಕಟಣೆ

– ತೆಲಂಗಾಣ ಹೋರಾಟ – ಪಿ ಸುಂದರಯ್ಯ ಅನು: ಬಿ ಸುಜ್ಞಾನಮೂರ್ತಿ: ಪಲ್ಲವ ಪ್ರಕಾಶನ

ಕೇರಳದ ಪುನರ್–ನಿರ್ಮಾಣದ ಸವಾಲುಗಳು............ ಪುಟ 8 ರಿಂದ

ಕಲ್ಪನೆಯನ್ನು ಮತ್ತು ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಫಲವನ್ನು ತಾಳಿಕೊಳ್ಳುವ ರೀತಿಯಲ್ಲಿ ಬೆಸೆಯಬೇಕು.

ಕೇರಳ ಪುನರ್ ನಿರ್ಮಾಣದ ಪಥ

ಇದು ಬರಿಯ ಸೈದ್ಧಾಂತಿಕ ವಿವಾದವಲ್ಲ. ಈ ಪ್ರಶ್ನೆಗಳು ಮತ್ತು ಇದರಲ್ಲೇ ಸಿಗುವ ಉತ್ತರಗಳು ಕೇರಳದ ಪುನರ್ ನಿರ್ಮಾಣದ ಪಥ ನಿರ್ಧರಿಸಬಲ್ಲವು. ಹೆಚ್ಚಿನ ಗುಣಮಟ್ಟದ ಮಾನದಂಡಗಳಿಗೆ ಅನುಗುಣವಾಗಿ ಪುನರ್ ನಿರ್ಮಾಣ ಮಾಡುವುದರ ಬಗ್ಗೆ ಕೇರಳದ ಸಮಾಜದಲ್ಲಿ ಬಹಳಷ್ಟು ಆಸಕ್ತಿಯಿದೆ. ಆದರೆ ಪ್ರಶ್ನೆಯಿರುವುದು ಆ ಗುರಿ ತಲುಪುವುದು ಹೇಗೆ ಎಂಬುದರ ಬಗ್ಗೆ. ಆ ನಿಟ್ಟಿನಲ್ಲಿ ಪ್ರಜಾಸತ್ತಾತ್ಮಕ ಚರ್ಚೆ ಮುಖಾಂತರ ಕೆಲವೊಂದು ಮುಖ್ಯ ವಿಷಯಗಳು ಹೊರಹೊಮ್ಮಬೇಕು. ಜನ, ಉತ್ಪಾದನಾ ಚಟುವಟಿಕೆ, ಉದ್ಯೋಗ, ಜೀವನಾಧಾರದ ಪ್ರಶ್ನೆಗಳೇ ಪರಿಹಾರದ ತಿರುಳಾಗಬೇಕು.

ಸ್ಥಳಾಂತರ ಮೊದಲ ಪರಿಹಾರವಾಗಬಾರದು. ಉಳಿದ ಸಾಧ್ಯಾ–ಸಾಧ್ಯತೆಗಳನ್ನು ಗಮನಿಸಿ ಬೇರೆ ಯಾವುದೇ ಪರಿಹಾರ ಇಲ್ಲವಾದಾಗ ಕೊನೆಯ ಪರಿಹಾರವಾಗಬೇಕು. ವಿಕೋಪದಿಂದ ಉಂಟಾದ ವೈಪರಿತ್ಯಗಳನ್ನು ನಿರ್ವಹಿಸುವುದು ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಮಸ್ಯೆ, ತಂತ್ರಜ್ಞಾನ–ಕಾನೂನು, ಆಡಳಿತದ ಸಮಸ್ಯೆಯ ವಿಷಯವೆಂದು ಪರಿಗಣಿಸಬೇಕು. ಈ ಸಂಕೀರ್ಣತೆಗಳನ್ನು ನಿರ್ವಹಿಸುವುದರಿಂದ ತಪ್ಪಿಸಿಕೊಳ್ಳುವುದಕ್ಕೆ ಸ್ಥಳಾಂತರ ಅಥವಾ ಅಭಿವೃದ್ಧಿಯನ್ನು ಹೊರತುಪಡಿಸುವುದು ಆಯ್ಕೆಯಾಗಬಾರದು.

ಈ ಬಗೆಗಿನ ಸಹಾಯ ಮತ್ತು ಜ್ಞಾನದ ವಿನಿಮಯವನ್ನು ಕೇವಲ ಯು.ಎನ್. ಸಂಸ್ಥೆಗಳು ಮತ್ತು ಹಣಕಾಸಿನ ಸಂಸ್ಥೆಗಳು ಮತ್ತು ಎನ್‌ಜಿಒ ಗಳಿಗೆ ಸೀಮಿತಗೊಳಿಸಬಾರದು. ಜಪಾನ್ ನೆದರ್‌ಲ್ಯಾಂಡ್‌ನಿಂದಲೂ (ಎರಡೂ ವಿಕೋಪ ನಿರ್ವಹಣೆಗೆ ಹೆಸರಿದ ರಾಷ್ಟ್ರಗಳು) ಪಡೆಯಬೇಕು. ಅಂತರಾಷ್ಟ್ರೀಯ ಸಂಸ್ಥೆಗಳಿಗೆ ಇರುವ ಅನುಭವ ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಮಾತ್ರವೇ ಅನ್ವಯಿಸುತ್ತದೆ. ಅವನ್ನು ಎಲ್ಲಾ ಸಂದರ್ಭಗಳಿಗೆ ಅನ್ವಯಿಸುವ ಪ್ರಯತ್ನವನ್ನು ಅವು ಮಾಡುತ್ತವೆ. ಕೇರಳಕ್ಕೆ ಬೇಕಿರುವುದೇ ಅದಕ್ಕಿಂತ ಬೇರೆಯ ಪಥ. ಉಂಟಾಗಿರುವ ನಷ್ಟವನ್ನು ಸಮರ್ಪಕವಾಗಿ ವೈಜ್ಞಾನಿಕ ವಾಗಿ ವಿಶ್ಲೇಷಿಸಲು ಸಮಯದ ಅಗತ್ಯವಿದೆ. ನೆರೆ ಮತ್ತು ಭೂಕುಸಿತ ನಡೆದ ಸ್ಥಳಗಳ ಅಧ್ಯಯನ, ಜೈವಿಕ ಸಂಪತ್ತಿನ ವ್ಯಾಪಕ ನಷ್ಟದ ಪೂರ್ಣ ಅಂದಾಜಿನ ಅಗತ್ಯವಿದೆ. ಸರಕಾರ ಈಗಾಗಲೇ ಅದಕ್ಕಾಗಿ ಕ್ರಮಕೈಗೊಂಡಿದ್ದು ಮೊದಲ ಹೆಜ್ಜೆ.

ಪುನರ್ ನಿರ್ಮಾಣ ಮುಖ್ಯವಾದ ವಿಷಯ ಮತ್ತು ಸಮಕಾಲೀನ ಪರಿಸ್ಥಿತಿಯಲ್ಲಿ ರಾಜ್ಯಕ್ಕೆ ಸವಾಲಾಗಿದೆ. ಇದನ್ನು ಕೇರಳದ ಅನುಭವ, ನುಡಿಗಟ್ಟು, ಕ್ರಿಯಾತ್ಮಕ ಪರಿಧಿಯಲ್ಲೇ ನಿರ್ವಹಿಸಬೇಕು. ಕೇರಳದ ಈವರೆಗಿನ ಅಭಿವೃದ್ಧಿ ಜನರ ಮೇಲೆ ಮಾಡಿದ ಭಾರೀ ಹೂಡಿಕೆಯಿಂದ ಆಗಿರುವುದು. ಈಗ ಕೇರಳದ ವಿಶಿಷ್ಟ ಅಭಿವೃದ್ಧಿ ಪಥವನ್ನು ಬಿಟ್ಟುಕೊಟ್ಟು ದೇಶದ ಒಳಗಿನ ಹೊರಗಿನ ಸಿದ್ಧ ಮಾದರಿಯೊಳಗೆ ಮೂಲಭೂತವಾಗಿ ಭಿನ್ನವಾಗಿ ಚಿಂತಿಸದ, ತಾಳ್ಮೆಯಿರದ ಜನರಿಂದ, ಅವಸರಕ್ಕೆ ಬಲಿಯಾಗದೆ, ಸಾಗಬೇಕಿದೆ. ಹಿಂದಿನ ಸಾಧನೆಗಳ ನೆಲೆಯ ಮೇಲೆ ಮುಂದಿನ ಭವಿಷ್ಯಕ್ಕಾಗಿ ಕಟ್ಟುವ, ಸಂಚಯಿಸುವ ವಿಸ್ತರಿಸುವ ಕೆಲಸ ಮಾಡಬೇಕು. ಕೇರಳದ ವಿಶಿಷ್ಟ ಸಾರ್ವಜನಿಕ ಕ್ರಿಯೆ ಮೇಲೆ ಆಧಾರಿತ ಸಾಧನೆಗಳನ್ನು ಮರೆತುಬಿಡಬಾರದು. ಬಂಡವಾಳಶಾಹಿ, ಮಾರುಕಟ್ಟೆ ಚಾಲಿತ ಮತ್ತು ವರಮಾನ ಏರಿಕೆ ಮಾತ್ರವೇ ಜನರ ಅಭಿವೃದ್ಧಿ ಎನ್ನುವ ಮಂತ್ರಗಳನ್ನು ಹೇರಲು ಬಿಡಬಾರದು. ಕೇರಳದ ಪುನರ್ ನಿರ್ಮಾಣ ಜನ–ಕೇಂದ್ರಿತ ಹೊಂದಾಣಿಕೆಯ ಮೇಲೆ ಆಧಾರಿತವಾಗಿ ಇರಬೇಕು.

ಮೇ 2019 ರತ್ತ : ರೈತರಿಗೊಂದು 'ಭವ್ಯ' ಹೆಸರಿನ ಯೋಜನೆ, ಅಂಗನವಾಡಿ.......

ಸೆಪ್ಟಂಬರ್ 5ರ ಬೃಹತ್ ಮಜ್ದೂರ್–ಕಿಸಾನ್ ಸಂಘರ್ಷ ರ್‍ಯಾಲಿಯನ್ನು 'ಭಕ್ತ ಮಾಧ್ಯಮ'ಗಳು ಉಪೇಕ್ಷಿಸಿದರೂ, ಸಂಸತ್ತಿನ ಎದುರು 3ಲಕ್ಷ ರೈತರು, ಕಾರ್ಮಿಕರ ದನಿಗೆ ಕಿವುಡಾಗುವುದು ಅದೂ ಮೂರು ಬಿಜೆಪಿ ರಾಜ್ಯಗಳಲ್ಲಿ ಮತ್ತು ನಂತರ ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿರುವ ಸಮಯದಲ್ಲಿ ಒಳ್ಳೆಯ ದಿನಗಳ ಸರಕಾರಕ್ಕೆ ಒಳ್ಳೆಯದಲ್ಲ ಎಂದು ಅಚ್ಛೇ ದಿನ್‌ವಾಲಾಗಳಿಗೂ ಅನಿಸಿರುವಂತೆ ಕಾಣುತ್ತದೆ. ಆದ್ದರಿಂದಲೇ ಒಂದು ವಾರದ ನಂತರ ಅನ್ನದಾತ'ರಿಗೆ ಹೊಸದೊಂದು 'ಅಭಿಯಾನ'ವನ್ನು ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ 'ಗೌರವಧನ ಹೆಚ್ಚಳ'ವನ್ನು ಘೋಷಿಸಲಾಗಿದೆ. 'ಭಕ್ತ ಮಾಧ್ಯಮಗಳು' ಇದನ್ನು ಹಾಡಿ ಹೊಗಳಿವೆ,

ಆದರೆ ಇವೂ ಕೇವಲ 'ಕುಟಿಲ ಆಟಗಳು' ಎಂಬ ವಿಶ್ಲೇಷಕರೊಬ್ಬರ ಟಿಪ್ಪಣಿಯನ್ನು (ನ್ಯೂಸ್‌ಕ್ಲಿಕ್, ಸಪ್ಟಂಬರ್15) ಖಂಡಿತಾ ತಳ್ಳಿ ಹಾಕಲು ಸಾಧ್ಯವಿಲ್ಲ.

'ಪ್ರಧಾನ ಮಂತ್ರಿ ಅನ್ನದಾತ ಸಂಕರ್ಷಣ ಅಭಿಯಾನ' ಅಥವ 'ಪಿಎಂ–ಆಶಾ' ಇದು ರೈತರಿಗೆಂದು ಪ್ರಕಟಿಸಿರುವ ಹೊಸ ಯೋಜನೆಯ ಭವ್ಯ ಹೆಸರು, ಅಥವ ಯೋಜನೆಯ ಹೊಸ ಭವ್ಯ ಹೆಸರು. ಇದು 'ಅನ್ನದಾತ'ರ ಆದಾಯ ರಕ್ಷಣೆಯ ಯೋಜನೆ ಎನ್ನಲಾಗಿದೆ. ಇದು ಮೂರು ಯೋಜನೆಗಳ ಒಂದು ಪೊಟ್ಟಣ. ಮೊದಲನೆಯದ್ದು ರೈತರ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಯ (ಎಂಎಸ್‌ಪಿ)ಯೋಜನೆ. ಇದು ಹೊಸದೇನಲ್ಲ. ಇನ್ನಷ್ಟು ಬೆಳೆಗಳನ್ನು ಸೇರಿಸಲಾಗಿದೆಯಂತೆ. ಎರಡನೆಯದು, ಬೆಲೆ ಕೊರತೆಯನ್ನು ಪಾವತಿ ಮಾಡುವ ಯೋಜನೆ, ಅಂದರೆ ಸರಕಾರ ಪ್ರಕಟಿಸಿದ ಕನಿಷ್ಟ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ರೈತರು ಮಾರಬೇಕಾಗಿ ಬಂದಲ್ಲಿ ಅದರ ವ್ಯತ್ಯಾಸವನ್ನು ತುಂಬಿ ಕೊಡುವ ಭರವಸೆ ಕೊಡುವ ಯೋಜನೆ. ಮತ್ತು ಮೂರನೆಯದು ಖಾಸಗಿ ಖರೀದಿಯ ಯೋಜನೆ. ಇದು ಮಾತ್ರ ನಿಜವಾಗಿಯೂ ಹೊಸದು, ಆದರೆ ಅತ್ಯಂತ ಅಪಾಯಕಾರಿ ಹೆಜ್ಜೆ ಎಂದು ಪರಿಣಿತರು ಹೇಳುತ್ತಾರೆ.

ಕನಿಷ್ಟ ಬೆಂಬಲ ಬೆಲೆಯ ಘೋಷಣೆಯಲ್ಲಿನ ಕೊರತೆ(ಅಥವ ಮೋಸ?)ವನ್ನು ಈಗಾಗಲೇ ರೈತ ಸಂಘಟನೆಗಳು ಎತ್ತಿ ತೋರಿವೆ. ಸ್ವತ: ಕನಿಷ್ಟಬೆಂಬಲ ಬೆಲೆಯ ಶಿಫಾರಸು ಮಾಡಿದವರೂ ಅದಕ್ಕೆ ದನಿಗೂಡಿಸಿದ್ದಾರೆ ಎಂಬುದನ್ನು ಯಾರಾದರೂ ಗಮನಿಸಬಹುದು.

ಎರಡನೆಯ ಯೋಜನೆಯ ನಿಜವಾದ ವಿಶೇಷತೆಯೆಂದರೆ ಕನಿಷ್ಟ ಬೆಂಬಲ ಬೆಲೆ ರೈತರಿಗೆ ನಿಜವಾಗಿಯೂ ಸಿಗುತ್ತಿಲ್ಲ ಎಂಬುದನ್ನು ಈಗ ಸರಕಾರವೇ ಒಪ್ಪಿಕೊಂಡಿರುವುದು. ರೈತರಿಗೆ ಸಿಗುವ ಬೆಲೆಯಲ್ಲಿನ ಕೊರತೆಯನ್ನು ತುಂಬುವ ಆಶ್ವಾಸನೆ ಇರುವ ಯೋಜನೆ ಈಗಾಗಲೇ ಮಧ್ಯಪ್ರದೇಶದಲ್ಲಿ 2017ರಿಂದ ಜಾರಿಯಲ್ಲಿದೆ. ಆದರೆ ಅದರ ಅನುಭವಗಳು ಕನಿಷ್ಟ ಬೆಂಬಲ ಬೆಲೆಯ ಅನುಭವಗಳಿಗಿಂತ ಕೆಟ್ಟದಾಗಿವೆ ಎಂದು ರೈತ ಸಂಘಟನೆಗಳು ಹೇಳುತ್ತಿವೆ. ವಾಸ್ತವವಾಗಿ, ಮಧ್ಯಪ್ರದೇಶದಲ್ಲಿ ಜಾರಿಯಲ್ಲಿರುವ ಈ ಯೋಜನೆಯಲ್ಲಿ ಎಂಎಸ್‌ಪಿ ಮತ್ತು ರೈತರಿಗೆ ನಿಜವಾಗಿ ದೊರೆತ ಬೆಲೆಯಲ್ಲಿನ ಅಂತರವನ್ನು ನೀಡುತ್ತಿಲ್ಲ. ಮಧ್ಯಪ್ರದೇಶದಲ್ಲಿ ಮತ್ತು ಇನ್ನೆರಡು ಸಂಬಂಧಪಟ್ಟ ಬೆಳೆಗಳನ್ನು ಅತ್ಯಧಿಕ ಬೆಳೆಯುವ ರಾಜ್ಯಗಳಲ್ಲಿ ರೈತರಿಗೆ ಸಿಗುವ ಅತಿ ಹೆಚ್ಚು ಬೆಲೆ ಮತ್ತು ಎಂಎಸ್‌ಪಿ ನಡುವಿನ ಕೊರತೆಯನ್ನು ಕೊಡುವ ಆಶ್ವಾಸನೆಯಷ್ಟೆ. ರೈತರಿಗೆ ಸಾಮಾನ್ಯವಾಗಿ ಸಿಗುವುದು ಇನ್ನೂ ಕಡಿಮೆಯೇ ಎಂದು ಬೇರೇ ಹೇಳಬೇಕಾಗಿಲ್ಲ. ಅಂದರೆ ಆದಾಯ ರಕ್ಷಣೆ ಕೇವಲ ಹೆಸರಿಗೆ ಮಾತ್ರವೇ. ಇನ್ನೂ ಗಮನಾರ್ಹ ಸಂಗತಿಯೆಂದರೆ ಹೆಚ್ಚಿನ ರೈತರಿಗೆ ಈ ವ್ಯತ್ಯಾಸವೂ ಸಿಕ್ಕಿಲ್ಲ. ಇದನ್ನು ಅಲ್ಲಿನ ರೈತರು ಸರಕಾರದ ಗಮನಕ್ಕೆ ತಂದರೂ ಆ ದೋಷಗಳನ್ನು ಸರಿಪಡಿಸುವ ಗೋಜಿಗೆ ಸರಕಾರ ಹೋಗಿಲ್ಲ. ಪಿಎಂ–ಆಶಾ ಈ ನಿಜ ಅನುಭವಕ್ಕಿಂತ ಭಿನ್ನವಾಗಿರುತ್ತದೆ ಎಂದು ಅಶಿಸಬೇಕಷ್ಟೇ ಎನ್ನುತ್ತವೆ ರೈತ ಸಂಘಟನೆಗಳು.

ಇದರಲ್ಲಿ ಮೂರನೆಯ ಭಾಗವೇ 'ಹೊಸ' ಯೋಜನೆಯ ಹಿಂದಿರುವ ಸರಕಾರದ ನಿಜವಾದ ಆಶಯವನ್ನು ತೋರಿಸುತ್ತದೆ ಎನ್ನುತ್ತಾರೆ ಪರಿಣಿತರು ಮತ್ತು ರೈತ ಸಂಘಟನೆಗಳು. ಇದರ ಪ್ರಕಾರ ಖಾಸಗಿ ವ್ಯಾಪಾರಿಗಳು ಎಂಎಸ್‌ಪಿ ದರಗಳಲ್ಲಿ ಬೆಳೆಗಳನ್ನು ರೈತರಿಂದ ಖರೀಸುತ್ತಾರೆ. ನಿಜವಾದ ಬೆಲೆಗಳು ಎಂಎಸ್‌ಪಿಗಿಂತ ಕಡಿಮೆಯಾದಲ್ಲಿ ಅವುಗಳ ನಡುವಿನ ವ್ಯತ್ಯಾಸವನ್ನು ಸರಕಾರ ಖಾಸಗಿ ವ್ಯಾಪಾರಿಗಳಿಗೆ ಕೊಡುತ್ತದೆ. ವಾಸ್ತವವಾಗಿ ಇದು ರೈತರಿಂದ ಖರೀದಿ ಮಾಡಿ ಸಾರ್ವಜನಿಕ ದಾಸ್ತಾನು ವ್ಯವಸ್ಥೆ ಮಾಡುವ ಸರಕಾರದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಹುನ್ನಾರವಲ್ಲದೆ ಬೇರೇನೂ ಅಲ್ಲ, ಮತ್ತು ಈ ಮೂಲಕ ಕಾರ್ಪೊರೇಟ್ ಲಾಭಕೋರತನಕ್ಕೆ ಇನ್ನೊಂದು ಸೌಕರ್ಯವನ್ನು ಒದಗಿಸುವುದು ಇದರ ನಿಜವಾದ ಉದ್ದೇಶ ಎಂದು ಅಖಿಲ ಭಾರತ ಕಿಸಾನ್ ಸಭಾ ಟೀಕಿಸಿದೆ.

ಈ ಯೋಜನೆಯ ಮತ್ತೊಂದು ಮುಖ್ಯ ಲೋಪವೆಂದರೆ ಇದರಲ್ಲಿ ಕೃಷಿಯಲ್ಲಿ ತೊಡಗಿರುವ ಎರಡು ದೊಡ್ಡ ವಿಭಾಗಗಳಾದ ಕೃಷಿ ಕೂಲಿಕಾರರು ಮತ್ತು ಗೇಣಿ ರೈತರ 'ಆದಾಯ ರಕ್ಷಣೆ'ಯ ವಿಚಾರವೇ ಇಲ್ಲ.

ಇನ್ನು, ಅಂಗನವಾಡಿ ಕಾರ್ಯಕರ್ತೆಯರಿಗೆ ಈ 'ಉದಾರ' ಏರಿಕೆಯ ನಂತರವೂ ಸಿಗುವುದು ಪೂರ್ಣ ಕಾಲದ ಕಾರ್ಯಕರ್ತೆಯರಿಗೆ 4500ರೂ., ಮಿನಿಅಂಗನವಾಡಿ ಯವರಿಗೆ 3500ರೂ. ಮತ್ತು ಸಹಾಯಕಿಯರಿಗೆ 2250ರೂ. **ದೇಶದಲ್ಲಿ ಅಪೌಷ್ಟಿಕತೆಯನ್ನು ಬುಡಮಟ್ಟದಿಂದಲೇ ನಿವಾರಿಸುವ ಈ ಮಹತ್ವದ ಯೋಜನೆಯಲ್ಲಿ ಕೈಜೋಡಿಸಿರುವ ಕಾರ್ಯಕರ್ತೆಯರಿಗೆ ಸಿಗುವ ಈ 'ಗೌರವ'ದ ಮೊತ್ತ ಈ ಸರಕಾರದ 'ಉದಾರತೆ'ಯ ಮಾನದಂಡವಾಗಿದೆ.** ನಮಗೆ ಇಂತಹ ಟೊಳ್ಳು ಗೌರವ ಬೇಡ, ನಮ್ಮನ್ನು ನಿಯಮಿತ ನೌಕರರೆಂದು ಪರಿಗಣಿಸಿ ಎಂಬ ಅವರ ಬಹುವರ್ಷಗಳ ಬೇಡಿಕೆಯನ್ನು ಸರಕಾರವೂ ಭಾಗೀದಾರನಾಗಿರುವ ತ್ರಿಪಕ್ಷೀಯ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ) ಕೂಡ ಸರ್ವಾನುಮತದಿಂದ ಬೆಂಬಲಿಸಿದ್ದರೂ ಇನ್ನೂ ಆಳುವವರ ಗಮನ ಅತ್ತ ಹರಿದೇ ಇಲ್ಲ.

ಇವನ್ನೆಲ್ಲ ಮೇಲೆ ಹೇಳಿದ ವಿಶ್ಲೇಷಕರು ಟಿಪ್ಪಣಿ ಮಾಡಿರುವಂತೆ 'ಕುಟಿಲ ಆಟಗಳು' ಎಂದಲ್ಲದೆ ಬೇರೆ ಯಾವ ರೀತಿಯಲ್ಲಿ ವರ್ಣಿಸಲು ಸಾಧ್ಯ?



ಅಹಮದಾಬಾದ್ ಸಹಕಾರಿ ಬ್ಯಾಂಕ್ ಮತ್ತು ನೋಟುರದ್ಧತಿಯ 'ಯಶಸ್ಸು'

ಅಹಮದಾಬಾದ್ ಜಿಲ್ಲಾ ಸಹಕಾರಿ ಬ್ಯಾಂಕ್(ಎಡಿಸಿ ಬ್ಯಾಂಕ್) ತನಗೆ ಸಿಕ್ಕಿದ ಐದೇ ದಿನಗಳಲ್ಲಿ 745.59 ಕೋಟಿ ರೂ.ಗಳಷ್ಟು ಮೊತ್ತದ ರದ್ದಾದ ನೋಟುಗಳನ್ನು ಹಿಂದಕ್ಕೆ ಪಡೆದಿತ್ತು, ಇದು ಸಹಕಾರಿ ಬ್ಯಾಂಕುಗಳಿಗೆ ವಾಪಸಾದ ರದ್ದಾದ ನೋಟುಗಳ ಮೊತ್ತದಲ್ಲಿ ಅತ್ಯಂತ ಹೆಚ್ಚು ಎಂದು ಈ ಹಿಂದೆ ವರದಿಯಾಗಿತ್ತು. ಈ ಸುದ್ದಿ ಹೆಚ್ಚು ಪ್ರಚಾರ ಪಡೆಯಲು ಇನ್ನೊಂದು ಕಾರಣ ನಮ್ಮ ದೇಶದ ಆಳುವ ಪಕ್ಷದ ಅಧ್ಯಕ್ಷರು ಇದರ ನಿರ್ದೇಶಕರಲ್ಲಿ ಒಬ್ಬರು ಎಂಬುದು. ಅದರಿಂದಾಗಿಯೇ ಈ ಬ್ಯಾಂಕ್ ರದ್ದಾದ ನೋಟುಗಳ ಸಂಗ್ರಹದಲ್ಲಿ ಮೊದಲ ಸ್ಥಾನ ಪಡೆಯಿತೇ ಎಂಬುದು ಬೇರೆ ಮಾತು. ಐದು ದಿನಗಳ ನಂತರ ರಿಝರ್ವ್ ಬ್ಯಾಂಕಿಗೇ ಇಂತಹ ಸಹಕಾರಿ ಬ್ಯಾಂಕುಗಳ ಬಗ್ಗೆ ಸಂದೇಹ ಬಂದು ಅವು ರದ್ದಾದ ನೋಟುಗಳನ್ನು ವಿನಿಮಯ ಮಾಡಬಾರದು ಎಂದು ನಿರ್ದೇಶನ ನೀಡಿತು. ಅದಕ್ಕೂ ಈ ಬ್ಯಾಂಕೇ ಅಥವ ಇಂತಹ ಪ್ರತಿಷ್ಠಿತ ಬ್ಯಾಂಕ್ಗಳೇ ಕಾರಣವೋ ಗೊತ್ತಿಲ್ಲ. ಆದರೆ ಇಷ್ಟೊಂದು ದೊಡ್ಡ ಮೊತ್ತದ ವಿನಿಮಯ ಮಾಡಲು ಕಾರಣಗಳೇನು ಎಂಬ ಬಗ್ಗೆ ಆಸಕ್ತಿ ಸಹಜವಾಗಿಯೇ ಹಲವರಲ್ಲಿ ಇದೆ.

ಹಣಕಾಸು ಇಲಾಖೆ ನೋಟುರದ್ಧತಿಯ ಮೊದಲ ವಾರದಲ್ಲೇ 80 ಲಕ್ಷ ರೂ.ಗಳಿಗಿಂತ ಹೆಚ್ಚು ನೋಟು ವಿನಿಮಯ ಮಾಡಿದವರ ಪಟ್ಟಿ ತಯಾರಿಸಿದೆಯಂತೆ. ಅವರಿಗೆಲ್ಲ ವಿವರ ಕೇಳಿ ನೋಟೀಸುಗಳು ಹೋಗಿವೆಯಂತೆ. ನ್ಯೂಸ್‌ಲಾಂಡ್ರಿ ಎಂಬ ವೆಬ್ ಪತ್ರಿಕೆ ಸಂಗ್ರಹಿಸಿದ ಮಾಹಿತಿಯ ಪ್ರಕಾರ ಎಡಿಸಿ ಬ್ಯಾಂಕ್‌ನ ನೋಟು ವಿನಿಮಯದಾರರ ಪಟ್ಟಿಯಲ್ಲಿ ಇಂತಹ 12 ಪೆಟ್ರೋಲ್ ಬಂಕ್‌ಗಳ ಹೆಸರುಗಳಿವೆ. (ಅಮಿತ್ ಭಾರದ್ವಾಜ್, ಸಪ್ಟಂಬರ್ 19). ಇವುಗಳಲ್ಲಿ 12 ಬಂಕ್‌ಗಳಿಗೆ ಭೇಟಿ ನೀಡಿದಾಗ ಕಂಡು ಬಂದ ಸಂಗತಿಯೆಂದರೆ ಇವುಗಳಲ್ಲಿ ಹೆಚ್ಚಿನವು ಒಂದಿಲ್ಲೊಂದು ರೀತಿಯಲ್ಲಿ ದೇಶದ ಆಳುವ ಪಕ್ಷಕ್ಕೆ ಸೇರಿದವರದ್ದು, ಅಥವ ಅವರ ಸಂಪರ್ಕದಲ್ಲಿ ಇರುವವರದ್ದು.

ಈ ವೆಬ್ ಪತ್ರಿಕೆಯ ಪತ್ರಕರ್ತರು ಸಂಗ್ರಹಿಸಿದ ಮತ್ತೊಂದು ಮಾಹಿತಿಯ ಪ್ರಕಾರ ನೋಟುರದ್ಧತಿಯ ಮೊದಲ ಮೂರು ದಿನಗಳಲ್ಲಿ ಪೆಟ್ರೋಲ್ ಮಾರಾಟ ಸಾಮಾನ್ಯ ದಿನಕ್ಕೆ ಹೋಲಿಸಿದರೆ ದ್ವಿಗುಣಗೊಂಡಿತು. ನಂತರ ನಾಲ್ಕು ದಿನಗಳಲ್ಲಿ ಸಾಮಾನ್ಯ ದಿನದ ವ್ಯಾಪಾರಕ್ಕಿಂತ 40% ದಷ್ಟು ಹೆಚ್ಚಿತ್ತು. ಈ ಪೆಟ್ರೋಲ್ ಪಂಪ್‌ಗಳು ಹಳೆಯ ನೋಟುಗಳ ವಿನಿಮಯ ಮಾಡುವಾಗ ಅಗತ್ಯ ವಿಧಾನಗಳನ್ನು ಅನುಸರಿಸಲಾಗಿತ್ತೇ, ಮತ್ತು ಈ ವ್ಯವಹಾರಗಳ ಬಗ್ಗೆ ಹಣಕಾಸು ಬೇಹುಗಾರಿಕೆ ಘಟಕಕ್ಕೆ ಮಾಹಿತಿ ನೀಡಲಾಗಿತ್ತೇ ಎಂದು ಈ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಈ ವೆಬ್ ಪತ್ರಿಕೆಯವರು ಕೇಳಿದ್ದಾರಂತೆ. ಸಪ್ಟಂಬರ್ 19ರ ವರೆಗೆ ಅವರಿಗೆ ಉತ್ತರ ಬಂದಿರಲಿಲ್ಲ.

ಕಪ್ಪು ಹಣವನ್ನು ಹೊರತೆಗೆಯುವುದು ನೋಟುರದ್ಧತಿಯ ಆರಂಭದ ಘೋಷಿತ ಮುಖ್ಯ ಉದ್ದೇಶ ಎಂಬುದು ಆಗಿನ ಸುದ್ದಿ, ಮತ್ತು ಈಗ ಸುಮಾರಾಗಿ ಎಲ್ಲ ರದ್ದಾದ ಬ್ಯಾಂಕ್ ನೋಟುಗಳೂ ರಿಝರ್ವ್ ಬ್ಯಾಂಕಿಗೆ ವಾಪಸಾಗಿವೆ ಎಂಬುದು ಇತ್ತೀಚಿನ ಸುದ್ದಿ.

"ನೋಟುರದ್ದತಿಯಿಂದ 35 ಲಕ್ಷ ಉದ್ಯೋಗಗಳು ನಾಶ

ನಿಜ, ಇದು ಸರಕಾರೀ ಸಂಸ್ಥೆಯ ಸುದ್ದಿಯಲ್ಲ. ಏಕೆಂದರೆ ದೇಶದ ಸಮಸ್ಯೆ ಉದ್ಯೋಗಗಳ ಕೊರತೆಯದ್ದಲ್ಲ, ಉದ್ಯೋಗದ ಅಂಕೆ–ಸಂಖ್ಯೆಗಳದ್ದು ಎಂದು ಸ್ವತಃ ದೇಶದ ಪ್ರಧಾನ ಸೇವಕರೇ ಹೇಳಿದ್ದಾರೆ ತಾನೇ?

ಇದು ಸಿಎಂಐಇ (ಭಾರತೀಯ ಆರ್ಥಿಕದ ಪರಿವೀಕ್ಷಣೆ ಕೇಂದ್ರ) ಮುಖ್ಯ ಕಾರ್ಯಕಾರಿ ಅಧಿಕಾರಿ ಮಹೇಶ ವ್ಯಾಸ್ ಹೇಳಿರುವುದು(ನ್ಯೂಸ್ ಸೆಂಟ್ರಲ್, ಸಪ್ಟಂಬರ್ 15).

ಸರಕಾರದ ನೋಟು ರದ್ಧತಿಯ ಕ್ರಮದಿಂದಾಗಿ 35 ಲಕ್ಷ ಮಂದಿ ಕೆಲಸ ಕಳಕೊಂಡರು.

ಈ ಸಂಸ್ಥೆ ದೇಶಾದ್ಯಂತ 1.72 ಲಕ್ಷ ಕುಟುಂಬಗಳ ಸರ್ವೆ ಮಾಡಿದ ನಂತರ ಪಡೆದ ಮಾಹಿತಿ ಇದು. ಇದರಿಂದ ಅಯಿ ಹೆಚ್ಚು ಬಾದಿತರಾದವರು ಕೆಲಸಗಾರರು ಮತ್ತು ಮಹಿಳೆಯರು.

ಈ ಸಂಸ್ಥೆ ನೋಟುರದ್ದತಿಯ ನಾಲ್ಕು ತಿಂಗಳ ಮೊದಲು ಮಾಡಿದ ಸರ್ವೆ ಮತ್ತು ನಂತರ ಮಾಡಿದ ಸರ್ವೆಯ ಪ್ರಕಾರ ಕೆಲಸಗಾರರ ಸಂಖ್ಯೆಯಲ್ಲಿ 1.5 ಕೋಟಿ ಇಳಿಕೆಯಾಗಿದೆ. ಅಂದರೆ ನೋಟುರದ್ದತಿಯ ಸ್ವಲ್ಪ ಮೊದಲಿನ ವರೆಗೆ ಉದ್ಯೋಗದ ಹುಡುಕಾಟದಲ್ಲಿದ್ದವರು ಉದ್ಯೋಗ ಹುಡುಕುವುದನ್ನೇ ಬಿಟ್ಟರು ಎಂದು ಅರ್ಥೈಸಲಾಗಿದೆ.



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ, ಸಿಫಿ.ಕಾಂ

5 ದಿನಗಳಲ್ಲಿ ಅಲ್ಲ, 2 ದಿನಗಳಲ್ಲಿ ಒಂದು ಸಾವು

ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗ ಸಂಗ್ರಹಿಸಿದ ಮಾಹಿತಿಯ ಪ್ರಕಾರ ದೇಶದಲ್ಲಿ ಪ್ರತಿ ಐದು ದಿನಕ್ಕೊಬ್ಬ ಗಟಾರ ಸ್ವಚ್ಛ ಮಾಡುವ ವ್ಯಕ್ತಿಯ ಸಾವು ಸಂಭವಿಸುತ್ತಿದೆ. ಜನವರಿ 2017ರಿಂದ ಇದುವರೆಗೆ 123 ಜನ ಗಟಾರಗಳಲ್ಲಿ ಕೆಲಸ ಮಾಡುವಾಗ ಪ್ರಾಣ ಕಳಕೊಂಡಿದ್ದಾರೆ.


ಆದರೆ ವಾಸ್ತವವಾಗಿ ಈ ಸಂಖ್ಯೆ ಇನ್ನೂ ಹೆಚ್ಚು ಇದೆ ಎನ್ನಲಾಗುತ್ತಿದೆ.

ಮ್ಯಾಗ್ಸೆಸೆ ಪ್ರಶಸ್ತಿ ವಿಜೇತ ಬೆಜ್ವಾಡ ವಿಲ್ಸನ್ ಸ್ಥಾಪಿಸಿರುವ ಸಫಾಯಿ ಕರ್ಮಚಾರೀ ಆಂದೋಲನ ಕಲೆ ಹಾಕಿದ ಮರಣೋತ್ತರ ಪರೀಕ್ಷೆಗಳ ದಾಖಲೆಗಳ ಪ್ರಕಾರ ಜನವರಿ 2017ರಿಂದೀಚೆಗೆ 300 ಇಂತಹ ಸಾವುಗಳು ಸಂಭವಿಸಿವೆ. ಅಂದರೆ ಎರಡು ದಿನಕ್ಕೆ ಒಂದರಂತೆ!

ಅತಿ' ಹೆಚ್ಚು ಸಾವುಗಳು ವರದಿಯಾಗಿರುವುದು ಹರ್‍ಯಾಣ, ಉತ್ತರಪ್ರದೇಶ, ದಿಲ್ಲಿ ಮತ್ತು ಗುಜರಾತದಿಂದ ಎಂಬುದೂ ಗಮನಾರ್ಹ.

'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಮತ್ತು 'ಸ್ವಚ್ಛ ಭಾರತ್'ನ ನಾಲ್ಕು ವರ್ಷಗಳಲ್ಲಿ ಮಲ ಸ್ವಚ್ಚಮಾಡುವವರ ಪುನರ್ವಸತಿಗೆ ಕೊಟ್ಟಿರುವ ಹಣ ಸೊನ್ನೆ. ಇದು ಇನ್ನೊಂದು ಮಾಹಿತಿ.

ಇದರ ನಡುವೆ ಕಳೆದ ವಾರ ದೇಶಾದ್ಯಂತ 'ಸ್ವಚ್ಛತಾ ಹಿ ಸೇವಾ' (ಸ್ವಚ್ಛತೆಯೇ ಸೇವೆ) ಎಂಬ ಹೊಸದೊಂದು ಘೋಷಣೆ ಹೊಮ್ಮಿದೆ.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್

ರೂಪಾಯಿ ಮೌಲ್ಯ ಇಳಿಯುತ್ತಿದೆ, ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ



ರೂಪಾಯಿ ಕುಸಿತ ಮತ್ತು ಅದರಿಂದಾಗುತ್ತಿರುವ ಹಾನಿಯ ಬಳಿಕವೂ, ಮೋದಿ ಸರ್ಕಾರವು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶ ಮಾಡಲು ನಿರಾಕರಿಸಿದೆ. ಅಷ್ಟೇ ಅಲ್ಲ, ಜನತೆ ಎದುರಿಸುತ್ತಿರುವ ಬೆಲೆ ಏರಿಕೆಯ ಸಮಸ್ಯೆಗಳಿಗೆ ಬೆನ್ನು ತೋರಿಸಿ ಜನತೆಯನ್ನು ಇನ್ನಷ್ಟು ಸಂಕಷ್ಟಗಳಿಗೆ ತಳ್ಳಿದೆ, ಇಡೀ ಅರ್ಥ ವ್ಯವಸ್ಥೆಯನ್ನೇ ಒಂದು ಇಕ್ಕಟ್ಟಿನ ಪರಿಸ್ಥಿತಿಗೆ, ಭಾರತದ ಅರ್ಥವ್ಯವಸ್ಥೆಯು ಐಎಂಎಫ್ ಮತ್ತು ಜಾಗತಿಕ ಹಣಕಾಸು ಮಾರುಕಟ್ಟೆಗಳ ಮುಂದೆ ಭಿಕ್ಷುಕನಂತೆ ಕೈಚಾಚುವಂತಹ ಪರಿಸ್ಥಿತಿಯತ್ತ ತಳ್ಳುತ್ತಿದೆ. ಇದನ್ನು ತಪ್ಪಿಸಲು, ಕೆಲವು ಐಶಾರಾಮಿ ಅಥವಾ ಅನಗತ್ಯ ಆಮದುಗಳನ್ನು ನಿಗ್ರಹಿಸುವ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳದಿರಲು ಅದಕ್ಕೆ ಕಾರಣವೇ ಇಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್ ಭಾವಾನುವಾದ: ಕೆ.ಎಂ.ನಾಗರಾಜ್

ದೇಶದಲ್ಲಿ ನಡೆಯುತ್ತಿರುವ ನಾಟಕದ ಒಂದು ಅತಿರೇಕದ ದೃಶ್ಯ ನಮ್ಮ ಕಣ್ಣ ಮುಂದಿದೆ. ಡಾಲರ್ ಎದುರು ರೂಪಾಯಿ ಮೌಲ್ಯ ಒಂದೇ ಸಮನೆ ಇಳಿಯುತ್ತಿದೆ. ಉದಯೋನ್ಮುಖ ಆರ್ಥಿಕಗಳ ಕರೆನ್ಸಿಗಳ ಪೈಕಿ, ರೂಪಾಯಿ ಅತಿ ಹೆಚ್ಚು ಬಲ ಕಳೆದುಕೊಂಡಿದೆ. ಅದರಿಂದಾಗಿ, ನಮ್ಮ ಆಮದುಗಳು ತುಟ್ಟಿಯಾಗುತ್ತಿವೆ. ವಿಶೇಷವಾಗಿ, ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ದಿನೇ ದಿನೇ ಹೆಚ್ಚುತ್ತಿದೆ. ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಎಷ್ಟು ಏರಿಕೆಯಾಗಿದೆಯೋ ಅದಕ್ಕಿಂತ ಬಹಳ ಪಟ್ಟು ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಬೆಲೆಗಳು ಹೆಚ್ಚಾಗಿವೆ. ದಿನೇ ದಿನೇ ಏರುತ್ತಲೇ ಇವೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಈ ಪ್ರಮಾಣದಲ್ಲಿ ಏರುತ್ತವೆ ಎಂದು ಕೆಲವು ವಾರಗಳ ಹಿಂದೆ ಊಹಿಸುವಂತಿರಲಿಲ್ಲ. ಅದೇ ರೀತಿಯಲ್ಲಿ, ಡಾಲರ್ ಎದುರು ರೂಪಾಯಿ ಮೌಲ್ಯ ಈ ಪ್ರಮಾಣದಲ್ಲಿ ಕುಸಿಯುತ್ತದೆ ಎಂದು ಕೆಲವು ವಾರಗಳ ಹಿಂದೆ ಊಹಿಸುವಂತಿರಲಿಲ್ಲ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಈ ಪ್ರಮಾಣದಲ್ಲಿ ಏರುತ್ತಿರುವಾಗಲೂ ಅದರ ಹೊರೆಯನ್ನು ಬಳಕೆದಾರರು ಹೊರುತ್ತಿರುವಾಗ ಮತ್ತು ಈ ಏರಿಕೆಯ ಪರಿಣಾಮಗಳು ಪೆಟ್ರೋಲ್ ಮತ್ತು ಡೀಸೆಲ್ ಬಳಸದೇ ಇರುವವರನ್ನೂ ತಟ್ಟುತ್ತಿರುವಾಗ, ಸರ್ಕಾರ ಏನೂ ಗೊತ್ತಿಲ್ಲದಂತೆ ಕಣ್ಣು ಮುಚ್ಚಿ ಕುಳಿತಿದೆ.

ಸರ್ಕಾರವು ತನ್ನ ಈ ನಿಷ್ಕ್ರಿಯತೆಗೆ ಯಾವ ವಿವರಣೆಯನ್ನೂ ಕೊಡುತ್ತಿಲ್ಲ. ಸರ್ಕಾರದ ಆರ್ಥಿಕ-ನೀತಿ ನಿರೂಪಕರ ಆಲೋಚನೆ ಬಹುಶ: ಹೀಗಿರಬಹುದು: ರೂಪಾಯಿಯ ಮೌಲ್ಯದ ಇಳಿಕೆ ಒಂದು ಹಂತದಲ್ಲಿ ತನ್ನಷ್ಟಕ್ಕೆ ತಾನೇ ನಿಲ್ಲುತ್ತದೆ. ಹೇಗೆಂದರೆ, ರೂಪಾಯಿ ಲೆಕ್ಕದಲ್ಲಿ ರಫ್ತುದಾರರಿಗೆ ಲಾಭವಾಗುವ ಉತ್ತೇಜನದಿಂದ ರಫ್ತುಗಳು ಹೆಚ್ಚುತ್ತವೆ ಮತ್ತು ಅದೇ ಸಮಯದಲ್ಲಿ ಆಮದುಗಳು ತುಟ್ಟಿಯಾಗುವುದರಿಂದ ಇಳಿಯುತ್ತವೆ. ಆಗ, ರೂಪಾಯಿಯ ವಿನಿಮಯ ದರವು ಒಂದು ರೀತಿಯ ಸಮತೋಲನ ಕಾಪಾಡಿಕೊಳ್ಳುತ್ತದೆ. ರೂಪಾಯಿಯ ವಿನಿಮಯ ದರದಲ್ಲಿ ಸ್ಥಿರತೆ ಉಂಟಾದಾಗ ಬಂಡವಾಳದ ಒಳ ಹರಿವು ಹೆಚ್ಚುತ್ತದೆ. ಹಾಗಾಗಿ, ಆಮದು-ರಫ್ತುಗಳ ವ್ಯಾಪಾರ ಕೊರತೆಯನ್ನು (ನಾವು ಕೊಡಬೇಕಾಗುವ ಬಾಕಿ) ಒಳ ಹರಿಯುವ ಬಂಡವಾಳದ ಮೂಲಕ ಹೊಂದಿಸಿಕೊಳ್ಳಬಹುದು.

ಇಂತಹ ಅಭಿಪ್ರಾಯ ಹೊಂದಿರುವವರ ಪ್ರಕಾರ, ಸಧ್ಯದಲ್ಲಿ, ರೂಪಾಯಿಯ ವಿನಿಮಯ ದರವು ಒಂದು ಸಮತೋಲನದ ಮಟ್ಟಕ್ಕಿಂತ ಎತ್ತರದಲ್ಲಿರುವುದರಿಂದ ಅದು ಸಮತೋಲನದ ಮಟ್ಟಕ್ಕೆ ಇಳಿಯಲು ಬಿಡಬೇಕು. ಆಗ, ಇಳಿಕೆ ನಿಲ್ಲುತ್ತದೆ. ಈ ಕಾರಣದಿಂದಾಗಿ, ಸರ್ಕಾರ ಸುಮ್ಮನಿರಬೇಕು ಮತ್ತು ರೂಪಾಯಿಯ ವಿನಿಮಯ ದರವು ಸಮತೋಲನದ ಮಟ್ಟ ತಲುಪುವವರೆಗೂ ಇಳಿಯಲು ಬಿಡಬೇಕು.

ರೂಪಾಯಿಯ ವಿನಿಮಯ ದರವು, ಅದರ ವ್ಯವಹಾರಗಳಲ್ಲಿ ತಲೆಹಾಕದಿದ್ದರೆ, ತನ್ನಷ್ಟಕ್ಕೆ ತಾನೇ ಒಂದು ಸಮತೋಲನದ ಮಟ್ಟ ತಲುಪುತ್ತದೆ. ಆದ್ದರಿಂದ ಮಾರುಕಟ್ಟೆಯ ವ್ಯವಹಾರಗಳಲ್ಲಿ ತಲೆಹಾಕಬಾರದು ಎನ್ನುವ ಮಾರುಕಟ್ಟೆಯ ಸದ್ಗುಣಗಳ ಮೇಲೆ ಸರ್ಕಾರವು ಇಟ್ಟಿರುವ ಇಂತಹ ಶೋಚನೀಯ ವಿಶ್ವಾಸವು ಅಸಂಗತವಾಗಿದೆ, ಅನೇಕ ಕಾರಣಗಳಿಂದ. ಮೊದಲನೆಯದು, ಸರ್ಕಾರ ಭಾವಿಸಿದ ರೀತಿಯಲ್ಲಿಯೇ ರೂಪಾಯಿಯ ದರ ಸಮತೋಲನ ತಲುಪಿದೆ ಎಂದು ಊಹಿಸಿಕೊಂಡರೂ, ಅದು ತಲುಪಿದ ಅಪಾಯಕಾರಿ ಮಟ್ಟದ ಪರಿಣಾಮವು ಜನತೆಯ ಮೇಲೆ ಸಹಿಸಲಾರದ ಹೊರೆ ಹೆಚ್ಚಿಸುತ್ತದೆ.

ಎರಡನೆಯದು, ಈ ರೀತಿಯಲ್ಲಿ ಭಾವಿಸಿದಂತಹ ಒಂದು ಸಮತೋಲನದ ಮಟ್ಟ ಎನ್ನುವುದು ಇಲ್ಲದೇ ಇರಬಹುದು. ನಿರ್ದಿಷ್ಟವಾಗಿ, ವಿದೇಶಿ ವಿನಿಮಯ ಮಾರುಕಟ್ಟೆಗಳಲ್ಲಿ ಇರುವ ಪರಿಸ್ಥಿತಿ ಇಂಥದ್ದೇ. ಅಂದರೆ ಸಮತೋಲನದ ಮಟ್ಟ ಎಂಬುದು ಅಲ್ಲಿಲ್ಲ. ಹಾಗಾಗಿ, ರೂಪಾಯಿಯ ಬೆಲೆ ಇಳಿಯುತ್ತಲೇ ಇರುತ್ತದೆ. ಆಮದು ವಸ್ತುಗಳ ಬೆಲೆ ಏರುತ್ತಲೇ ಹೋಗುತ್ತದೆ. ಅದರಿಂದಾಗಿ, ಹೆಚ್ಚುತ್ತಾ ಹೋಗುವ ಹಣದುಬ್ಬರದ ಪರಿಣಾಮವಾಗಿ **ಜನಜೀವನದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗುವವರೆಗೂ ರೂಪಾಯಿ ಬೆಲೆ ಇಳಿಯುತ್ತಲೇ ಇರುತ್ತದೆ.**

ಇಳಿಯುತ್ತಾ ಹೋಗುವ ರೂಪಾಯಿಯ ಬೆಲೆಯು, ಯಾವ ಮಟ್ಟದಲ್ಲಿ ನಿಂತರೆ ಅದನ್ನು ಜನಜೀವನ ತಾಳಿಕೊಳ್ಳಬಲ್ಲದು ಎನ್ನುವ ಸಮತೋಲನದ ಮಟ್ಟದಲ್ಲಿ ನಿಲ್ಲುವುದಿಲ್ಲ. ಅದಕ್ಕೆ ಕಾರಣ ಹೀಗಿದೆ: ಹಣದುಬ್ಬರದಿಂದಾಗಿ, ದೇಶದಲ್ಲಿ ವಸ್ತುಗಳ ಬೆಲೆ ಏರುತ್ತದೆ. ಅದರಿಂದಾಗಿ, ಈ ವಸ್ತುಗಳು ಜಾಗತಿಕ ಮಾರುಕಟ್ಟೆಗಳಲ್ಲಿ ಸ್ಪರ್ಧಾತ್ಮಕವಾಗಿರುವುದಿಲ್ಲ. ಹಾಗಾಗಿ, ರೂಪಾಯಿಯ ಅಪಮೌಲ್ಯವು, ಜಾಗತಿಕ ಮಾರುಕಟ್ಟೆಗಳಲ್ಲಿ, ದೇಶದಲ್ಲಿ ಉತ್ಪಾದಿಸಿದ ವಸ್ತುಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುತ್ತದೆಯಾದರೂ (ವಾದಕ್ಕಾಗಿ, ಇಂತಹ ಪರಿಸ್ಥಿತಿ ಇದೆ ಎಂದುಕೊಳ್ಳೋಣ ಮತ್ತು ಅದರಿಂದಾಗಿ ನಮ್ಮ ರಫ್ತುಗಳು ಹೆಚ್ಚುತ್ತವೆ ಎಂದುಕೊಳ್ಳೋಣ), ಕ್ರಮೇಣ, ರೂಪಾಯಿಯ ಇದೇ ಅಪಮೌಲ್ಯವು ಉಂಟುಮಾಡಿದ ಹಣದುಬ್ಬರವು ಜಾಗತಿಕ ಮಾರುಕಟ್ಟೆಗಳಲ್ಲಿ ದೇಶದ ವಸ್ತುಗಳ ಸ್ಪರ್ಧಾತ್ಮಕತೆಯನ್ನು ತಗ್ಗಿಸುತ್ತದೆ.

ರೂಪಾಯಿಯ ಅಪಮೌಲ್ಯವು ವ್ಯಾಪಾರ ಕೊರತೆಯ ಮೇಲೆ ಬೀರುವ ಪರಿಣಾಮಗಳು ಪ್ರಕಟಗೊಳ್ಳಲು ಸಾಕಷ್ಟು ಸಮಯ ಹಿಡಿಯುತ್ತದೆ. ವ್ಯಾಪಾರದ ಕೊರತೆಯ ಪರಿಸ್ಥಿತಿ ಅನುಕೂಲಕರವಾಗಿರುತ್ತದೆ ಎಂಬ ಭಾವನೆ ದೇಶದಲ್ಲಿತ್ತು. ಅದೇನೇ ಇರಲಿ, ವ್ಯಾಪಾರ ಕೊರತೆಯ ಮೇಲೆ ಅಪಮೌಲ್ಯದ ಪರಿಣಾಮಗಳು ಗೋಚರಿಸಿದ ನಂತರದ ಪರಿಸ್ಥಿತಿಯನ್ನು ಯಾವ ಕ್ರಮದ ಮೂಲಕವೂ ತಕ್ಷಣ ಸುಧಾರಿಸಲಾಗುವುದಿಲ್ಲ. ಇನ್ನೊಂದು ಕಡೆಯಲ್ಲಿ, ರೂಪಾಯಿಯ ಅಪಮೌಲ್ಯವು ಉಂಟುಮಾಡಿದ ಹಣದುಬ್ಬರವು, ರೂಪಾಯಿ ಬೆಲೆ ಇನ್ನಷ್ಟು ಕೆಳಗೆ ಇಳಿಯುತ್ತದೆ ಎಂಬ ನಿರೀಕ್ಷೆಯನ್ನು ಹುಟ್ಟಿಹಾಕುತ್ತದೆ. ಹಾಗಾಗಿ, ಸಟ್ಟಾಕೋರರು ರೂಪಾಯಿ ಬಾಜಿ ವ್ಯವಹಾರದಿಂದ ದೂರ ಉಳಿಯುತ್ತಾರೆ. ಇದು ರೂಪಾಯಿಯ ಮೌಲ್ಯವು ಮತ್ತಷ್ಟು ಕೆಳಗಿಳಿಯುವ ನಿರೀಕ್ಷೆಯನ್ನು ಬಲಪಡಿಸುತ್ತದೆ.

ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ರೂಪಾಯಿ ಇಳಿಯುತ್ತಿರುವಾಗ, ಅದಿನ್ನೇನು ನಿಲ್ಲುತ್ತದೆ ಎಂಬುದಾಗಿ ಹೇಳಿ ಸಟ್ಟಾಕೋರರ ಮನವೊಲಿಸುವ ಕೆಲಸ ತಕ್ಷಣದಲ್ಲೇ ಆಗುವುದಿಲ್ಲ. ಇನ್ನೊಂದು ಕಡೆಯಲ್ಲಿ, ಈ ಪರಿಸ್ಥಿತಿಗೆ ವಿರುದ್ಧವಾಗಿ, ರೂಪಾಯಿ ಬೆಲೆ ಇನ್ನಷ್ಟು ಕೆಳಗೆ ಇಳಿಯುತ್ತದೆ ಎಂಬುದಾಗಿ ಏರುತ್ತಿರುವ ಹಣದುಬ್ಬರವೇ ಸಟ್ಟಾಕೋರರ ಮನವೊಲಿಸುತ್ತದೆ. ಹಾಗಾಗಿ, ರೂಪಾಯಿಯ ಅಪಮೌಲ್ಯ-ಜೊತೆಗೆ-ಹಣದುಬ್ಬರ ವಿದ್ಯಮಾನಗಳು ಸಾಗುತ್ತವೆ, ಅದೂ ಅಲ್ಪಸಮಯದಲ್ಲಿ, ವೇಗವಾಗಿ ಮತ್ತು ಕೊನೆಗೊಳ್ಳದೆ.

ಇಂತಹ ಪರಿಸ್ಥಿತಿಯಲ್ಲಿ, ವಿಶ್ವದ ಎಲ್ಲಾ ದೇಶಗಳಲ್ಲೂ, ಸರ್ಕಾರಗಳು ವಿದೇಶಿ ವಿನಿಮಯ ಮಾರುಕಟ್ಟೆಗಳಲ್ಲಿ ತಲೆಹಾಕುವುದು ಅವಶ್ಯವಾಗುತ್ತದೆ. (ಬಹುಶ: ಅಮೇರಿಕಾ ದೇಶವನ್ನು ಹೊರತುಪಡಿಸಿ – ಅದರ ಡಾಲರ್ ಕರೆನ್ಸಿಯು ಚಿನ್ನಕ್ಕೆ ಸಮವೆಂದು ತಿಳಿಯಲಾಗಿದೆ). ಮುಖ್ಯವಾಗಿ, ಬಹಳ ಸಮಯದಿಂದಲೂ ಮೂರನೆ ಜಗತ್ತಿನ ದೇಶಗಳ ಕರೆನ್ಸಿಗಳು ಸತತವಾಗಿ ಅಪಮೌಲ್ಯಗೊಳ್ಳುತ್ತಿರುವ ಪರಿಸ್ಥಿತಿಯಲ್ಲಿ, ವಿದೇಶಿ ವಿನಿಮಯ ಮಾರುಕಟ್ಟೆಗಳಲ್ಲಿ ಸರ್ಕಾರಗಳ ಮಧ್ಯಪ್ರವೇಶ ಅವಶ್ಯವಾಗುತ್ತದೆ. ಉದಾಹರಣೆಗೆ, **ಕೇವಲ ಮೂರು ದಶಕಗಳ ಹಿಂದೆ ಒಂದು ಡಾಲರ್ ಬೆಲೆ ಹದಿಮೂರು ರೂಪಾಯಿ ಇತ್ತು. ಈಗ ಅದು ಎಪ್ಪತ್ತೆರಡಕ್ಕಿಂತಲೂ ಅಧಿಕ. ಹಾಗಾಗಿ, ರೂಪಾಯನ್ನು ಯಾವ ಮಟ್ಟದಲ್ಲಿ ನೆಲೆಗೊಳಿಸಿ ಅದನ್ನು ಲಂಗರಿಗೆ ಬಿಗಿಯಬಹುದು ಎಂದು ನಿರೀಕ್ಷಿಸುವಂತಿಲ್ಲ. ಸರ್ಕಾರದ ಮಧ್ಯಪ್ರವೇಶ ಇಲ್ಲದಿಎಉವುದೇ ರೂಪಾಯಿ ಮೌಲ್ಯದ ಅಗಾಧ ಇಳಿಕೆಗೆ ಕಾರಣ.**

ರೂಪಾಯಿ ಮೌಲ್ಯದ ಇಳಿಕೆಗೆ ಕಾರಣವಾಗಿರುವ ಇನ್ನೊಂದು ಅಂಶವೂ ಇದೆ. ಅನೇಕ ಭಾರತೀಯ ಕಂಪೆನಿಗಳು ವಿಶ್ವ ಹಣಕಾಸು ಮಾರುಕಟ್ಟೆಗಳಿಂದ ಕಡಿಮೆ ಬಡ್ಡಿಯ ಡಾಲರ್ ಸಾಲ ಪಡೆದಿವೆ. ಕಾರಣ, ಅಮೇರಿಕಾದ ಅಗ್ಗದ ಹಣ ನೀತಿಯಿಂದಾಗಿ, ಅಲ್ಲಿನ ಬಡ್ಡಿ ದರ ಕಡಿಮೆ ಇತ್ತು. ರೂಪಾಯಿಯ ಅಪಮೌಲ್ಯದ ಪರಿಣಾಮವಾಗಿ, (ಅಂದರೆ, ಡಾಲರ್ ಬೆಲೆ ಹೆಚ್ಚಾಗಿರುವುದರಿಂದ) ಈ ಕಂಪೆನಿಗಳು ತಮ್ಮ ಸಾಲ+ಬಡ್ಡಿಯನ್ನು ಡಾಲರ್ ಮೂಲಕ ತೀರಿಸಲು ಅತಿ ಹೆಚ್ಚಿನ ದರದಲ್ಲಿ ಡಾಲರ್ ಕೊಳ್ಳಲು ಸಾಧ್ಯವಾಗದೆ ದಿವಾಳಿಯ ಅಂಚಿಗೆ ತಲುಪುತ್ತಾರೆ ಎಂಬ ನಿರೀಕ್ಷೆಯ ಅಂಶವು ಸಟ್ಟಾಕೋರರು ರೂಪಾಯಿ ಬಾಜಿ ವ್ಯವಹಾರದಿಂದ ದೂರ ಉಳಿಯುವಂತೆ ಮಾಡುತ್ತದೆ. ಇದು ರೂಪಾಯಿಯ ಮೌಲ್ಯವನ್ನು ಮತ್ತಷ್ಟು ಕೆಳಗಿಳಿಸುವ ಕೊಡುಗೆಯಾಗುತ್ತದೆ.

ರೂಪಾಯಿ ಕುಸಿತ ಮತ್ತು ಅದರಿಂದಾಗುತ್ತಿರುವ ಹಾನಿಯ ಬಳಿಕವೂ, ಮೋದಿ ಸರ್ಕಾರವು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶ ಮಾಡಲು ನಿರಾಕರಿಸಿದೆ. ಅಷ್ಟೇ ಅಲ್ಲ, ಜನತೆ ಎದುರಿಸುತ್ತಿರುವ ಬೆಲೆ ಏರಿಕೆಯ ಸಮಸ್ಯೆಗಳಿಗೆ ಬೆನ್ನು ತೋರಿಸಿದೆ. ಹಾಗಾಗಿ, ಅದು ಜನತೆಯನ್ನು ಇನ್ನಷ್ಟು ಸಂಕಷ್ಟಗಳಿಗೆ ತಳ್ಳಿದೆ. ಮಾತ್ರವಲ್ಲ, ಇಡೀ ಅರ್ಥ ವ್ಯವಸ್ಥೆಯನ್ನೇ ಒಂದು ಇಕ್ಕಟ್ಟಿನ ಪರಿಸ್ಥಿತಿಗೆ ತಳ್ಳಿದೆ. ಎಂತಹ ಇಕ್ಕಟ್ಟಿಗೆ ತಳ್ಳಿದೆ ಎಂದರೆ, ದೇಶವು ತನ್ನ ವಿದೇಶಿ ವಿನಿಮಯದ ಅಗತ್ಯಗಳಿಗಾಗಿ ಐಎಂಎಫ್ ಮತ್ತು ಅಂತಾರಾಷ್ಟ್ರೀಯ ಹಣಕಾಸು ಮಾರುಕಟ್ಟೆಗಳಿಗೆ ಮೊರೆ ಹೋಗಬೇಕಾಗುತ್ತದೆ. ಆಗ, ಈ ಸಂಸ್ಥೆಗಳು ಹೇರುವ ಕಠೋರ ಶರತ್ತುಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಐಎಂಎಫ್ ಇಂತಹ ಶರತ್ತುಗಳನ್ನು ಗ್ರೀಸ್ ದೇಶದ ಮೇಲೆ ಹೇರಿದ ಪರಿಣಾಮವಾಗಿ, (ಅಂದರೆ, ಮಿತವ್ಯಯ ನೀತಿಗಳ ಪಾಲನೆಯಿಂದಾಗಿ) ಅಲ್ಲಿನ ಜನತೆ ಈಗಲೂ ನರಳುತ್ತಿರುವುದನ್ನು ಈ ಇಕ್ಕಟ್ಟು ಜ್ಞಾಪಿಸುತ್ತದೆ.

ಮೋದಿ ಸರ್ಕಾರದ ನಿಷ್ಕ್ರಿಯತೆಯನ್ನು ವ್ಯಾಪಕವಾಗಿ ಖಂಡಿಸಲಾಗಿದೆ. ಅದೇನೇ ಆದರೂ, ಒಂದು ಪ್ರಶ್ನೆ ಏಳುತ್ತದೆ: ಈ ಪರಿಸ್ಥಿತಿಯನ್ನು ನಿಭಾಯಿಸಲು, ಸರ್ಕಾರ ತೊಡಗಬೇಕಾದ "ಕ್ರಿಯೆ" ಯಾವ ರೀತಿಯದಾಗಿರಬೇಕು? ಸಾಮಾನ್ಯವಾಗಿ, ಯಾವುದೇ ಬೂರ್ಷ್ವಾ ಸರ್ಕಾರವು ತೊಡಗುವ ಇಂತಹ "ಕ್ರಿಯೆ" ಎರಡು ಮುಖಗಳಿಂದ ಕೂಡಿರುತ್ತದೆ. ಒಂದು, ಬಡ್ಡಿ ದರ ಏರಿಕೆ, ಮತ್ತೊಂದು, ರೂಪಾಯಿಯ ಮೌಲ್ಯವನ್ನು ಸ್ಥಿರಗೊಳಿಸಲು ರಿಸರ್ವ್ ಬ್ಯಾಂಕ್ ಬಳಿ ಇರುವ ವಿದೇಶಿ ವಿನಿಮಯದ ಸಂಗ್ರಹದ ಬಳಕೆ. ತಮ್ಮ ಈಗಿನ ನಿಲುವು ಬದಲಾಯಿಸಿಕೊಂಡಾಗ, ಮೋದಿಯವರು ಕೈಗೊಳ್ಳವುದೂ ಇದೇ "ಕ್ರಿಯೆ", ಐಎಂಎಫ್‌ಗೆ ಓಡುವ ಅವಶ್ಯಕತೆ ಬೀಳುವ ಮೊದಲು.

ಬಡ್ಡಿ ದರ ಏರಿಕೆಯಿಂದಾಗಿ, ಆರ್ಥಿಕ ಹಿಂಜರಿಕೆಯಾಗುತ್ತದೆ. ಕಿರು ಉತ್ಪಾದಕರು ಹಾನಿಗೊಳಗಾಗುತ್ತಾರೆ. ಹಾಗಾಗಿ, ರೂಪಾಯಿ ಕುಸಿತ ತಡೆಯಲು ಇವಿಷ್ಟೇ ಕ್ರಮಗಳು ಸಾಕಾಗುವುದಿಲ್ಲ. ಇಲ್ಲಿರುವ ಮೂಲ ಸಮಸ್ಯೆ ಎಂದರೆ, ಬಹಳ ಕಾಲದಿಂದಲೂ ಭಾರತದ ಚಾಲ್ತಿ ಖಾತೆಯು ಕೊರತೆಯಲ್ಲೇ ಇದೆ. ಈ ಸಮಸ್ಯೆಯ ಬಗ್ಗೆ ಭಾರತ ಈ ವರೆಗೆ ತಲೆ ಕೆಡಿಸಿಕೊಂಡಿರಲಿಲ್ಲ, ಏಕೆಂದರೆ, ನವ-ಉದಾರ ಆಳ್ವಿಕೆಯಲ್ಲಿ ಒಳ ಹರಿಯುತ್ತಿದ್ದ ಬಂಡವಾಳವು ವಿದೇಶಿ ವಿನಿಮಯದ ಕೊರತೆ ನೀಗಿಸಲು ಸಾಕಾಗುವಷ್ಟಿತ್ತು. ಮುಂದುವರೆದ ಬಂಡವಾಳಶಾಹಿ ದೇಶಗಳಿಗಿಂತ ಉನ್ನತ ಮಟ್ಟದ ಬಡ್ಡಿ ದರಗಳ ಆಕರ್ಷಣೆ ಭಾರತದಲ್ಲಿ ಇದ್ದುದರಿಂದ, ಬಂಡವಾಳ ಒಳ ಹರಿಯುತ್ತಿತ್ತು. ಆದರೆ, ಬಡ್ಡಿ ದರಗಳನ್ನು ಏರಿಸುವ ಮೂಲಕ, ಇದೇ ರೀತಿಯಲ್ಲಿ, ಚಾಲ್ತಿ ಖಾತೆಯ ಕೊರತೆ ನೀಗಿಸುವ ಚಮತ್ಕಾರವನ್ನು ನಾವು ಮತ್ತೊಮ್ಮೆ ತೋರಿಸಬಹುದು ಎಂದು ಭಾವಿಸುವುದು ಸರಿಯಲ್ಲ. ಏಕೆಂದರೆ, ಜಾಗತಿಕವಾಗಿ, ನವ-ಉದಾರ ಆಳ್ವಿಕೆಯೇ ಮುಂದಿನ ದಾರಿ ಕಾಣದ ಸ್ಥಿತಿಯಲ್ಲಿದೆ.

ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ನವ-ಉದಾರ ಆಳ್ವಿಕೆಗೆ ಜನತೆಯ ಬೆಂಬಲ ಕ್ಷೀಣಿಸುತ್ತಿದೆ. ಜನತೆಯು ಸಿಟ್ಟು ಬಲ-ಪಂಥೀಯ ಪಕ್ಷಗಳಿಗೆ ಬೆಂಬಲವಾಗಿ ಪ್ರಕಟಗೊಳ್ಳುತ್ತಿದೆ. ಬಲ-ಪಂಥವು ಅಧಿಕಾರಕ್ಕೆ ಬಂದ ದೇಶಗಳಲ್ಲಿ (ಅಮೇರಿಕಾದಲ್ಲಿ ಆಗಿರುವಂತೆ), ಅದು ನವ-ಉದಾರ ಆಳ್ವಿಕೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಬಲವಂತಕ್ಕೆ ಬೀಳುತ್ತದೆ. (ಹಣಕಾಸು ಬಂಡವಾಳದಿಂದ ಹಣ ಪಡೆದ ಹಂಗಿನಲ್ಲಿರುವ ಬಲ-ಪಂಥವು ನವ-ಉದಾರ ಆಳ್ವಿಕೆಯನ್ನು ಒಟ್ಟಾರೆಯಾಗಿ ತಿರಸ್ಕರಿಸುವುದಿಲ್ಲ).

ಡೊನಾಲ್ಡ್ ಟ್ರಂಪ್ ಮಾಡುತ್ತಿರುವುದು ಇದೇ ಕೆಲಸ. ಅವರು, ನವ-ಉದಾರವಾದದ ಜೀವಾಳದಂತಿರುವ ಹಣಕಾಸಿನ ಹರಿದಾಟವನ್ನು ತಡೆಯುತ್ತಿಲ್ಲ. ಆದರೆ, ಟ್ರಂಪ್, ಅಮೇರಿಕಾದ ಕಂಪೆನಿಗಳು ಮತ್ತು ಅವು ಬೇರೆ ದೇಶಗಳಲ್ಲಿ ಹೊಂದಿರುವ ತಯಾರಿಕಾ ಘಟಕಗಳ ಹೊರಗುತ್ತಿಗೆಯ ಮೇಲೆ ಕೆಲವು ನಿರ್ಬಂಧನ್ನು ಹೇರಿದ್ದಾರೆ. ಇಂತಹ ನಿರ್ಬಂಧಗಳಿಂದಾಗಿ ಬಂಡವಳಿಗರಿಗೆ ತಗಲಬಹುದಾದ ನಷ್ಟಕ್ಕೆ ಪರಿಹಾರವಾಗಿ ತೆರಿಗೆ ಕಡಿತ ಮಾಡಿದ್ದಾರೆ. ನವ-ಉದಾರ ಆಳ್ವಿಕೆಗೆ ಮುಂದಿನ ದಾರಿಕಾಣದಂತಾಗಿದೆ ಎಂಬ ಅಂಶವು ಟ್ರಂಪ್‌ರವರ ಈ ಕ್ರಮಗಳಿಂದ ಸ್ಪಷ್ಟವಾಗುತ್ತದೆ.

ಈ ಪರಿಸ್ಥಿತಿಯಿಂದಾಗಿ ಹಣಕಾಸು ವಲಯಗಳಲ್ಲಿ ಒಂದು ರೀತಿಯ ಅನಿಶ್ಚಿತತೆ ಉಂಟಾಗಿದೆ. ಹಾಗಾಗಿ, ವಿಶ್ವದ ಎಲ್ಲೆಡೆಯಿಂದ ಹಣವನ್ನು ಅದರ ತವರು ಅಮೇರಿಕಾಗೆ ಮರಳಿ ತರುವ ಪ್ರವೃತ್ತಿ ಬೆಳೆಯುತ್ತಿದೆ. ಸುಮಾರಾಗಿ ಎಲ್ಲಾ ದೇಶಗಳ ಕರೆನ್ಸಿಗಳ ಎದುರು ಡಾಲರ್ ಬಲಗೊಳ್ಳುತ್ತಿರುವುದು ಈ ಪ್ರವೃತ್ತಿಯನ್ನು ಸೂಚಿಸುತ್ತದೆ. ಈ ಸನ್ನಿವೇಶದಲ್ಲಿ, ಭಾರತದಲ್ಲಿ ಬಡ್ಡಿ ದರಗಳ ಏರಿಕೆಯು, ಆರ್ಥಿಕ ಹಿಂಜರಿಕೆಯ ಹೊರತಾಗಿ, ನಮ್ಮ ಚಾಲ್ತಿ ಖಾತೆಯ ಕೊರತೆ ನೀಗಿಸಿಕೊಳ್ಳಲು ಸಾಕಾಗುವಷ್ಟು ಮತ್ತು ರೂಪಾಯಿ ಕುಸಿತವನ್ನು ತಡೆಯುವಷ್ಟು ಮಟ್ಟದ ವಿದೇಶಿ ವಿನಿಮಯ ತರುವುದಿಲ್ಲ (ಅಂದರೆ, ಬಂಡವಾಳ ಒಳಹರಿಯುವುದಿಲ್ಲ).

ಹಾಗಾದರೆ, ಬಡ್ಡಿ ದರಗಳ ಏರಿಕೆಯ ಪರಿಣಾಮವಾಗಿ ಉಂಟಾದ ಆರ್ಥಿಕ ಹಿಂಜರಿತವೇ ಚಾಲ್ತಿ ಖಾತೆಯ ಕೊರತೆಯನ್ನು ನಿಭಾಯಿಸುವ (ಸರಿದೂಗಿಸುವ) ಮಟ್ಟಿಗೆ ಆಮದುಗಳನ್ನು ಕಡಿಮೆ ಮಾಡುವುದಿಲ್ಲವೇ? ಎಂಬ ಪ್ರಶ್ನೆಯನ್ನು ಕೇಳಬಹುದು. ವಾದಕ್ಕೋಸ್ಕರ, ಅದು ಸಾಧ್ಯವಿದೆ ಎಂದು ಒಪ್ಪಿಕೊಂಡರೂ ಸಹ, ಈ ರೀತಿಯಲ್ಲಿ ಕೊರತೆ ನಿವಾರಿಸುವ ಕ್ರಮವು ಜನವಿರೋಧಿಯಾಗಿರುತ್ತದೆ.

ವ್ಯಾಪಾರ ಕೊರತೆ ಎಂದರೆ, ನಮ್ಮ ರಫ್ತುಗಳಿಗಿಂತ ಆಮದುಗಳೇ ಹೆಚ್ಚಾಗಿರುವ ಪರಿಸ್ಥಿತಿ. ಅದನ್ನು $m.Y-X$ ಎಂಬ ಒಂದು ಸೂತ್ರವಾಗಿ ಬರೆಯಬಹುದು. ಈ ಸೂತ್ರದಲ್ಲಿ, m ಜಿಡಿಪಿಯ ಪ್ರತಿ ಯೂನಿಟ್‌ನ ಆಮದು ಗುಣಾಂಕವನ್ನು, Y ಜಿಡಿಪಿಯನ್ನು ಮತ್ತು X ರಫ್ತುಗಳನ್ನು ಪ್ರತಿನಿಧಿಸುತ್ತವೆ. ಬಡ್ಡಿ ದರ ಏರಿಕೆಯು ವ್ಯಾಪಾರ ಕೊರತೆಯನ್ನು ಇಳಿಸುವ ಪ್ರಯತ್ನದಲ್ಲಿ ಉಂಟಾದ ಆರ್ಥಿಕ ಹಿಂಜರಿತವು ಜಿಡಿಪಿಯನ್ನು ಇಳಿಸುತ್ತದೆ. ಈ ಪ್ರಕ್ರಿಯೆಯು, ನಿರುದ್ಯೋಗ, ತಾಳಲಾರದ ಸಂಕಟ ಮತ್ತು ದಾರಿದ್ರ್ಯಗಳಿಗೆ ಕಾರಣವಾಗುತ್ತದೆ.

ವ್ಯಾಪಾರ ಕೊರತೆಯನ್ನು ಇಳಿಸುವಲ್ಲಿ ಹೆಚ್ಚು ಪರಿಣಾಮಕಾರಿ ಮತ್ತು ಕಡಿಮೆ ಜನ-ವಿರೋಧಿಯಾದ ಒಂದು ಕ್ರಮವೆಂದರೆ, ಆಮದು ಗುಣಾಂಕವನ್ನು (m.) ಇಳಿಸಬೇಕಾಗುತ್ತದೆ. ಅಂದರೆ ವ್ಯಾಪಾರ ಕೊರತೆಯನ್ನು ರಕ್ಷಣಾತ್ಮಕ ಕ್ರಮಗಳ ಮೂಲಕ ಇಳಿಸಬಹುದು. ಜನಜೀವನದ ಮೇಲೆ ಅಡ್ಡ ಪರಿಣಾಮಗಳು ಉಂಟಾಗದಂತಹ ಕೆಲವು ಆಯ್ದ ವಸ್ತುಗಳ ಆಮದನ್ನು ನಿಗ್ರಹಿಸಬೇಕಾಗುತ್ತದೆ. ವಿಶ್ವದ ಪ್ರಧಾನ ಬಂಡವಾಳಶಾಹಿ ದೇಶದ ಅಧ್ಯಕ್ಷ ಟ್ರಂಪ್ ಸ್ವತ: ರಕ್ಷಣಾತ್ಮಕ ಕ್ರಮಗಳನ್ನು ಕೈಗೊಂಡಿದ್ದಾರೆ. ಹಾಗಾಗಿ, ಅವರು ಬೇರೆ ದೇಶಗಳಿಗೆ "ಮುಕ್ತ ವ್ಯಾಪಾರ" ನೀತಿಪಾಟ ಹೇಳುವಂತಿಲ್ಲ. ಆದ್ದರಿಂದ, ಭಾರತದ ಜನತೆಗೆ ತಟ್ಟಬಹುದಾದ ದಾರಿದ್ರ್ಯವನ್ನು ತಪ್ಪಿಸಲು ಮತ್ತು ಭಾರತದ ಅರ್ಥವ್ಯವಸ್ಥೆಯು ಐಎಂಎಫ್ ಮತ್ತು ಜಾಗತಿಕ ಹಣಕಾಸು ಮಾರುಕಟ್ಟೆಗಳ ಮುಂದೆ ಭಿಕ್ಷುಕನಂತೆ ಕೈಚಾಚುವುದನ್ನು ತಪ್ಪಿಸಲು, ಕೆಲವು ಐಶಾರಾಮಿ ಅಥವಾ ಅನಗತ್ಯ ಆಮದುಗಳನ್ನು ನಿಗ್ರಹಿಸುವ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳದಿರಲು ಕಾರಣವೇ ಇಲ್ಲ. ●

ವಿಜಯವಾಡಾದಲ್ಲಿ ಬೃಹತ್ 'ಮಹಾಘರ್ಜನಾ' ರ್‍ಯಾಲಿ





ಸಿಪಿಐ(ಎಂ) ಮತ್ತು ಸಿಪಿಐ ಕರೆಯ ಮೇರೆಗೆ ಸೆಪ್ಟಂಬರ್ 15 ರಂದು 50,000ಕ್ಕೂ ಹೆಚ್ಚು ಜನರು ವಿಜಯವಾಡಾದಲ್ಲಿ ಒಂದು ಬೃಹತ್ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದರು. ಅಂದು ವಿಜಯವಾಡ ನಗರ ಕೆಂಪು ಸಾಗರವಾಗಿ ಮಾರ್ಪಟ್ಟಿತು. ಜನಗಳು ರೈಲುಗಳಲ್ಲಿ, ಬಸ್ಸುಗಳಲ್ಲಿ, ಲಾರಿಗಳಲ್ಲಿ ಬಂದು ಸೇರಿದರು. ಕೆಂಬಾವುಟಗಳನ್ನು ಹಿಡಿದ ಯುವಜನರು, ಮಹಿಳೆಯರು ಸಾರ್ವಜನಿಕ ಸಭೆಯ ಮೊದಲು ನಡೆದ ರ್‍ಯಾಲಿಯಲ್ಲಿ ಹುರುಪಿನಿಂದ ಭಾಗವಹಿಸಿದರು.

ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಒಂದು ರಾಜಕೀಯ ಪರ್ಯಾಯದ 'ಮಹಾಘರ್ಜನೆ' ಮೊಳಗಿಸುವ ಗುರಿಯಿಂದ ಈ ರ್‍ಯಾಲಿಗೆ ಈ ಎಡಪಕ್ಷಗಳು ಜನಗಳನ್ನು ಅಣಿನೆರೆಸಿದ್ದವು. ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್, ಕೇಂದ್ರದ ಬಿಜೆಪಿ ಸರಕಾರ ಹಿಂದಿನ ಕಾಂಗ್ರೆಸ್ ನೇತೃತ್ವದ ಸರಕಾರದ ವಿಧ್ವಂಸಕಾರಿ ಆರ್ಥಿಕ ಧೋರಣೆಗಳನ್ನೇ ಅನುಸರಿಸುತ್ತಿದೆ, ರಾಜ್ಯದಲ್ಲಿ ಚಂದ್ರಬಾಬು ನಾಯ್ಡು ಸರಕಾರ ಬಹಿರಂಗದಲ್ಲಿ ಬಿಜೆಪಿಯನ್ನು ವಿರೋಧಿಸುತ್ತಲೇ ರಾಜಿ ರಾಜಕೀಯ ನಡೆಸುತ್ತಿದೆ ಎಂದು ಟೀಕಿಸಿದರು. ವೈಎಸ್‌ಆರ್‌ಸಿಪಿ ಮತ್ತು ಜಗನ್ ಪಾದಯಾತ್ರೆ ಅಧಿಕಾರ ಗ್ರಹಣಕ್ಕೆ ಮಾತ್ರ ಎಂದು ಅವರು ಹೇಳಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ.ಮಧು ಕಾರ್ಮಿಕರನ್ನು ಕುರಿತಂತೆ ರಾಜ್ಯ ಸರಕಾರದ ಧೋರಣೆಗಳನ್ನು, ರಾಜ್ಯ ಸರಕಾರದಲ್ಲಿ ಕಾಂಟ್ರಾಕ್ಟೀಕರಣ ಹೆಚ್ಚುತ್ತಿರುವುದನ್ನು ಪ್ರಶ್ನಿಸಿದರು. ಸಾರಾಯಿ ಮತ್ತು ಮರಳು ವ್ಯಾಪಾರದ ಮೂಲಕ ಟಿಡಿಪಿ ಮುಖಂಡರು ಕಪ್ಪು ಹಣ ರಾಶಿ ಹಾಕುತ್ತಿದ್ದಾರೆ, ಅತ್ತ ಉತ್ತರ ಆಂಧ್ರಪ್ರದೇಶದಲ್ಲಿ ಜನಗಳು ಮಲೇರಿಯಾ, ಡೆಂಗು ಇತ್ಯಾದಿಗಳಿಗೆ ತುತ್ತಾಗಿದ್ದಾರೆ. ಟಿಡಿಪಿ ಕಾರ್ಮಿಕ ಕಾನೂನುಗಳನ್ನು ನಾಶ ಮಾಡುತ್ತಿರುವಾಗ ವೈಎಸ್‌ಆರ್‌ಸಿಪಿ ವಿಧಾನಸಭೆಯಲ್ಲಿ ಒಂದೇ ಒಂದು ಪ್ರತಿಭಟನೆಯ ದನಿ ಎತ್ತುತ್ತಿಲ್ಲ ಎಂದು ಖೇದ ವ್ಯಕ್ತಪಡಿಸಿದ ಅವರು ಎಡಶಕ್ತಿಗಳು ರಾಜ್ಯದಲ್ಲಿ ಒಂದು ಬಲಿಷ್ಟ ರಾಜಕೀಯ ಪರ್ಯಾಯವನ್ನು ನಿರ್ಮಿಸುತ್ತವೆ ಎಂದು ಹೇಳಿದರು.



ಸಿಪಿಐ ಪ್ರಧಾನ ಕಾರ್ಯದರ್ಶಿ ಎಸ್. ಸುಧಾಕರ ರೆಡ್ಡಿ ಮತ್ತು ರಾಜ್ಯ ಕಾರ್ಯದರ್ಶಿ ರಾಮಕೃಷ್ಣ, ಫಾರ್ವರ್ಡ್ ಬ್ಲಾಕ್, ಸಿಪಿಐ(ಎಂಎಲ್)–ಲಿಬರೇಷನ್, ಎಂಪಿಸಿಪಿಐಯು, ವಿಕೆಸಿ, ಆಮ್ ಆದ್ಮಿ ಪಾರ್ಟಿ ಮತ್ತು ಜನಸೇನಾದ ಮುಖಂಡರುಗಳೂ ಈ 'ಮಹಾಘರ್ಜನೆ' ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

"ಉತ್ತರಪ್ರದೇಶದಲ್ಲಿ ಭ್ರಷ್ಟಾಚಾರ ದ್ವಿಗುಣಗೊಂಡಿದೆ"

ಇಬ್ಬರು ಆಳುವ ಪಕ್ಷದ ಶಾಸಕರಿಂದಲೇ ದೂರು

ಬಿಜೆಪಿಯ ಆಳ್ವಿಕೆಯ ಉತ್ತರಪ್ರದೇಶದಲ್ಲಿ ಯೋಗಿ ಆದಿತ್ಯನಾಥ ಸರಕಾರದ ಅಡಿಯಲ್ಲಿ ಭ್ರಷ್ಟಾಚಾರ ಹಿಂದಿನ ಸರಕಾರಕ್ಕೆ ಹೋಲಿಸಿದರೆ ದ್ವಿಗುಣಗೊಂಡಿದೆ ಎಂದು ಸ್ವತಃ ಬಿಜೆಪಿಯ ಇಬ್ಬರು ಶಾಸಕರೇ ರಾಜ್ಯ ವಿಜಿಲೆನ್ಸ್ ಕಮಿಶನ್‌ಗೆ ಬರೆದಿದ್ದಾರೆ ಎಂದು ವರದಿಯಾಗಿದೆ(ನ್ಯೂಸ್‌ಸೆಂಟ್ರಲ್, ಸೆಪ್ಟಂಬರ್ 8).

ಲಖ್ನೌ ಅಭಿವೃದ್ಧಿ ಪ್ರಾಧಿಕಾರದ ವ್ಯವಹಾರಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಇಟಾಹ್ ಕ್ಷೇತ್ರ ಶಾಸಕ ವೀರೇಂದ್ರ ಲೋಧಿ ಮತ್ತು ಬದಾವುನ ಶಾಸಕ ಧರ್ಮೇಂದ್ರ ಕಾಯಸ್ಥ ಆಗ್ರಹಿಸಿದ್ದಾರೆ ಎಂದು ಎಬಿಪಿ ನ್ಯೂಸ್ ವರದಿ ಮಾಡಿದೆ. ಸೈಟ್ ಮ್ಯಾಪ್‌ಗಳನ್ನು ಕೊಡಲು 30–50 ಕ್ಷ ರೂ. ಲಮಚ ತಗೊಳ್ಳುತ್ತಾರೆ ಎಮದು ಈ ಇಬ್ಬರು ಶಾಸಕರು ಆರೋಪಿಸಿದ್ದಾರೆ.

ಈ ಸುದ್ದಿ ಅಧಿಕಾರ ವಲಯದಲ್ಲಿ ಆಘಾತ ವುಂಟು ಮಾಡಿದೆ ಎನ್ನಲಾಗಿದೆ.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ ಯಾದವ್ ಇದೊಮದು ಗಂಭೀರ ವಿಷಯ, ಇದರ ತನಿಖೆಯನ್ನು ಬೆಂಬಲಿಸಿದ್ದಾರೆ.

ಅಸ್ಸಾಂನಲ್ಲೂ ಹಗರಣದ ವಾಸನೆ

ಬಿಜೆಪಿ ಆಳ್ವಿಕೆಯ ಮತ್ತೊಂದು ರಾಜ್ಯದಲ್ಲೂ 'ಉದ್ಯೋಗಕ್ಕಾಗಿ ನಗದು 'ಬಹುಕೋಟಿ ಹಗರಣ ನಡೆದಿದೆ. ಇದಕ್ಕೆ ಸಂಬಂಧಪಟ್ಟಂತೆ ಪೋಲೀಸರು ತೇಜ್ಪುರ್‌ನ ಬಿಜೆಪಿ ಸಂಸದ್ ಸದಸ್ಯ ಆರ್‌ಪಿ ಶರ್ಮ ಅವರ ಪುತ್ರಿ ಪಲ್ಲಬಿ ಶರ್ಮ ಸೇರಿದಂತೆ 19 ಜನರಿಗೆ ಸಮನ್ಸ್ ಕಳಿಸಲಾಗಿದೆ ಎಂದು ವರದಿಯಾಗಿದೆ. ಸರಕಾರೀ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆರಿಸಲು ಈ ಬಿಜೆಪಿ ಮುಖಂಡರ ಪುತ್ರಿ ಭಾರೀ ಲಂಚ ವಸೂಲಿ ಮಾಡುತ್ತಿದ್ದಾರಂತೆ.

ಈ ಹಗರಣ ಕುರಿತಂತೆ ಪೋಲೀಸರು ಈ 19 ಮಂದಿಯ ಬಗ್ಗೆ ಸಾಕಷ್ಟು ಸಾಕ್ಷ್ಯಗಳನ್ನು ಸಂಗ್ರಹಿಸಿರುವುದಾಗಿ ಹೇಳಿದ್ದಾರೆ. ಈ ಗಾಗಲೇ ಇದಕ್ಕೆ ಸಂಬಂಧಪಟ್ಟಂತೆ 30 ಹಿರಿಯ ಮಟ್ಟದ ಸರಕಾರೀ ಸಿಬ್ಬಂದಿಯನ್ನು ಬಂಧಿಸಲಾಗಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಕೇಂದ್ರ ಸರಕಾರದ ದುರಹಂಕಾರೀ ವರ್ತನೆ: ಪಂಚಾಯತು ಚುನಾವಣೆಗಳನ್ನು ಬಹಿಷ್ಕರಿಸಲು ಸಿಪಿಐ(ಎಂ) ನಿರ್ಧಾರ

ಜಮ್ಮು ಮತ್ತು ಕಾಶ್ಮೀರದಲ್ಲಿ ಮುಂಬರುವ ಪಂಚಾಯತು ಚುನಾವಣೆಗಳನ್ನು ಬಹಿಷ್ಕರಿಸಲು ಸಿಪಿಐ(ಎಂ) ರಾಜ್ಯ ಸಮಿತಿ ನಿರ್ಧರಿಸಿದೆ. ಈಗಾಗಲೇ ರಾಜ್ಯದ ಪ್ರಮುಖ ಪಕ್ಷಗಳಾದ ನ್ಯಾಶನಲ್ ಕಾನ್ಫರೆನ್ಸ್ ಮತ್ತು ಪಿಡಿಪಿ ಚುನಾವಣೆಗಳನ್ನು ಬಹಿಷ್ಕರಿಸುವುದಾಗಿ ಹೇಳಿವೆ. ಆದರೂ ಈ ಕುರಿತು ಒಂದು ಸರ್ವಪಕ್ಷ ಸಭೆಯನ್ನು ಕರೆಯುವ ಬದಲು ಕೇಂದ್ರದ ಬಿಜೆಪಿ ಸರಕಾರ ಈ ಚುನಾವಣೆಗಳನ್ನು ನಡೆಸಿಯೇ ತೀರುತ್ತೇವೆ ಎಂದು ದರಹಂಕಾರದಿಂದ ವರ್ತಿಸುತ್ತಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಗುಲಾಮ್ ನಬೀ ಮಲಿಕ್ ಹೇಳಿದ್ದಾರೆ.

ರಾಜ್ಯದ ರಾಜಕೀಯ ಪಕ್ಷಗಳು ಕೆಲವು ಪ್ರಶ್ನೆಗಳನ್ನು ಎತ್ತಿದ್ದವು. ಅದರಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಚುನಾವಣೆಗಳನ್ನು ಕಲಮು 35 ಎ ಬಗ್ಗೆ ಸುಪ್ರಿಂ ಕೋರ್ಟಿನಲ್ಲಿ ಇರುವ ಅರ್ಜಿಯ ಜೊತೆಗೆ ತಳುಕು ಹಾಕುವ ಪ್ರಶ್ನೆಯೂ ಸೇರಿದೆ.

ನಗರ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ಚುನಾವಣೆಗಳನ್ನು ಪ್ರಕಟಿಸುವ ಮೊದಲು ಕಲಮು 35ಎ ಬಗ್ಗೆ ಕೇಂದ್ರ ಸರಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಎಂದೂ, ರಾಜ್ಯದಲ್ಲಿ ಚುನಾಯಿತ ಸರಕಾರ ರಚನೆಯಾಗುವ ವರೆಗೆ ಈ ಬಗ್ಗೆ ವಿಚಾರಣೆಯನ್ನು ಮುಂದಕ್ಕೆ ಹಾಕುವಂತೆ ಕೇಳಬೇಕು ಎಂದೂ ರಾಜ್ಯದ ರಾಜಕೀಯ ಪಕ್ಷಗಳು ಆಗ್ರಹಿಸಿದ್ದವು. ಆದರೆ ಸರಕಾರ ಆ ಬಗ್ಗೆ ಸ್ಪಂದಿಸದೆ ಈಗ ಈ ಚುನಾವಣೆಗಳನ್ನು ಕಾರಣವಾಗಿ ಮುಂದಿಟ್ಟು ಈ ಕುರಿತ ವಿಚಾರಣೆಯನ್ನು ಮುಂದೂಡುವಂತೆ ಸುಪ್ರಿಂ ಕೋರ್ಟನ್ನು ಕೇಳಿತು.

ಅಲ್ಲದೆ ರಾಜ್ಯದ ರಾಜಕೀಯ ಪಕ್ಷಗಳು ಈ ಅರ್ಜಿಯ ವಿಚಾರಣೆಯಲ್ಲಿ ರಾಜ್ಯದ ಪರವಾಗಿ ವಾದ ಮಾಡುವ ಅಡಿಶನಲ್ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ ಆಗಸ್ಟ್ 31ರಂದು ತಮಗೆ ನೀಡಿದ ಅನುಜ್ಞೆಯನ್ನು ಮೀರಿ ಮಾತನಾಡಿರುವುದರಿಂದ ಬೇರೆಯವರನ್ನು ಅವರ ಸ್ಥಾನದಲ್ಲಿ ನೇಮಿಸಬೇಕು ಎಂದೂ ಒತ್ತಾಯಿಸುತ್ತಿವೆ.


ಮತದಾನವನ್ನು ಮುಂದೂಡುವಂತೆ ಸಿಪಿಐ(ಎಂ) ಕೇಳಲು ಇನ್ನೊಂದು ಕಾರಣ ರಾಜ್ಯದಲ್ಲಿನ ಈಗಿನ ಪರಿಸ್ಥಿತಿ.

ರಾಜ್ಯದಲ್ಲಿ ಭಿನ್ನಾಭಿಪ್ರಾಯ ಇರುವ ಪಕ್ಷ/ಸಂಘಟನೆಗಳೂ ಸೇರಿದಂತೆ ಎಲ್ಲ ರಾಜಕೀಯ ಶಕ್ತಿಗಳೊಂದಿಗೆ ಸಂವಾದ ನಡೆಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿಕೊಂಡೇ ಬಂದಿದೆ. ಆದರೆ ಇದಕ್ಕೆ ಕೇಂದ್ರ ಸರಕಾರದ ಹಿಂದೇಟಿನಿಂದಾಗಿ ಈಗ ಪರಿಸ್ಥಿತಿ ಎಂತಹ ಮಟ್ಟವನ್ನು ತಲುಪಿದೆಯೆಂದರೆ ಮುಖ್ಯಧಾರೆಯ ರಾಜಕೀಯ ಪಕ್ಷಗಳ ಸಲಹೆ–ಸೂಚನೆಗಳನ್ನೂ ಉಪೇಕ್ಷಿಸಲಾಗುತ್ತಿದೆ. ಈಗಿನ ಸನ್ನಿವೇಶದಲ್ಲಿ ಚುನಾವಣೆಗಳನ್ನು ನಡೆಸಿಯೇ ತೀರುತ್ತೇವೆ ಎಂದು ಹಟ ಹಿಡಿಯುವ ಬದಲು ತಾನು ಕಲಮು 35ಎ ರಕ್ಷಣೆಯ ಬಗ್ಗೆ ಗಂಭೀರವಾಗಿದ್ದೇನೆ ಎಂದು ರಾಜ್ಯದ ಜನತೆಗೆ ಆಶ್ವಾಸನೆ ನೀಡಬೇಕಾಗಿತ್ತು.

ಈ ಸ್ಥಳೀಯ ಸಂಸ್ಥೆಗಳನ್ನು ಸಬಲೀಕರಿಸುವುದು ಅಗತ್ಯ. ಆದರೆ ಅದಕ್ಕೆ ಚುನಾವಣಾ ಪ್ರಕ್ರಿಯೆಯಲ್ಲಿ ಜನತೆ ಭಾಗವಹಿಸುವುದು ಕೂಡ ಅಷ್ಟೇ ಅಗತ್ಯ. ಆದರೆ ಈಗಿನ ಸನ್ನಿವೇಶದಲ್ಲಿ ಇದು ಸಂದೇಹಾಸ್ಪದ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಅಭಿಪ್ರಾಯ ಪಟ್ಟಿದ್ದಾರೆ.

ಜೆಎನ್‌ಯು ಚುನಾವಣಾ ವಿಜಯ: ಕಾಶ್ಮೀರಿ ಯುವಜನರ ಅಭಿನಂದನೆ

ಜೆಎನ್‌ಯುಎಸ್‌ಯು ಚುನಾವಣೆಗಳಲ್ಲಿ ವಿಜಯಕ್ಕೆ ಎಡ ಐಕ್ಯತೆಯ ಮೈತ್ರಿಕೂಟವನ್ನು ಅಭಿನಂದಿಸಿರುವ ಜೆಕೆಡಿವೈಎಫ್ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾಗಿರುವ ಎಜಾಝ್ ಅಹ್ಮದ್ ರಾಥೇರ್ ರವರನ್ನು ವಿಶೇಷವಾಗಿ ಅಭಿನಂದಿಸಿದೆ. ಇವರು ಜಮ್ಮು–ಕಾಶ್ಮೀರದ ಕುಲ್‌ಗಾಮ್ ಜಿಲ್ಲೆಯವರು ಮತ್ತು ಈ ಸ್ಥಾನವನ್ನೇರಿದ ಮೊದಲ ಕಾಶ್ಮೀರಿ.ಇದು ಜೆಎನ್‌ಯುನ ಎಲ್ಲರನ್ನೂ ಒಳಗೊಳ್ಳುವ ಜನವಾದಿ ಸ್ವರೂಪಕ್ಕೆ ಸಾಕ್ಷಿ ಎಂದಿರುವ ಜೆಕೆಡಿವೈಎಫ್, ಎಜಾಝ್



ಎಸ್‌ಎಫ್‌ಐ ಮತ್ತು ಜೆಎನ್‌ಯುನ ಪ್ರಗತಿಪರ ಮತ್ತು ಜನವಾದಿ ಪರಂಪರೆಯನ್ನು ಮುಂದೊಯ್ಯುತ್ತಾರೆ ಎಂದು ಹಾರೈಸಿದೆ.

ಬ್ರೆಜಿಲ್ ಅಧ್ಯಕ್ಷೀಯ ಚುನಾವಣೆ: ಲೂಲಾ ಬಾವುಟ ಎತ್ತಿ ಹಿಡಿಯಲು ಜನಪರ ಮೈತ್ರಿಕೂಟ

ಲೂಲಾ ಗೆ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಲು ಬ್ರೆಜಿಲ್‌ನ ಸುಪ್ರೀಂ ಚುನಾವಣಾ ಟ್ರಿಬ್ಯೂನಲ್ (ಟಿ.ಎಸ್.ಇ.), ನಿಷೇಧ ಹಾಕಿರುವ ಹಿನ್ನೆಲೆಯಲ್ಲಿ ತಮ್ಮ ಬೆಂಬಲದ ಅಭ್ಯರ್ಥಿಗಳನ್ನಾಗಿ, ವರ್ಕರ್ಸ್ ಪಾರ್ಟಿಯ ಫರ್ನಾಂಡೊ ಹಡ್ಡಾದ್ ಮತ್ತು ಕಮ್ಯೂನಿಸ್ಟ್ ಪಕ್ಷದ ಮ್ಯಾನುಯೆಲ್ ಡಿ' ಅವಿಲಾ ಅವರನ್ನು ಕ್ರಮವಾಗಿ, ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲಿದ್ದಾರೆ. ಲೂಲಾರವರು," ಬ್ರೆಜಿಲಿಯನ್ ಜನರನ್ನು ಮತದಾನದಿಂದ ಮುಕ್ತವಾಗಿ ನಿಷೇಧಿಸುವ ಸಂಚು ನಡೆದಿದೆ, ನಾವು ಎಂದಿಗೂ ಅನ್ಯಾಯ ವನ್ನು ಸಹಿಸಲಾರೆವು ಆದ್ದರಿಂದಲೇ, ನನ್ನ ಸಹೋದರ ಫರ್ನಾಂಡೊ ರನ್ನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಶಿಫಾರಸ್ಸು ಮಾಡಿದ್ದೇನೆ' ಇವರು ನಿಷ್ಠಾವಂತರಾಗಿದ್ದಾರೆ. ನಮ್ಮ ದನಿಯನ್ನು ಅಡಗಿಸಲು ಹಾಗೂ ನಮ್ಮ ಯೋಜನೆಗಳನ್ನು ಸೋಲಿಸಲು ಬಿಡಬಾರದು "ಎಂದಿದ್ದಾರೆ.

ಬ್ರೆಜಿಲ್ ದೇಶದಲ್ಲಿ ಪ್ರಜಾಪ್ರಭುತ್ವ, ಸಾರ್ವಭೌಮತ್ವ ಹಾಗೂ ಸಮಾನತೆಗಾಗಿ ಹೋರಾಟ ಮುಂದಿವರಿಸಲು ಈ ಇಬ್ಬರೂ ಅಭ್ಯರ್ಥಿಗಳು ದೃಡವಾದ ಪ್ರತಿಜ್ಞೆ ಕೈಗೊಂಡಿದ್ದಾರೆ.

ಲೂಲಾ ಡಿ' ಸಿಲ್ವಾ

ಅಧ್ಯಕ್ಷೀಯ ಉಮೇದುವಾರಿಕೆಗೆ ನಿಷೇಧ:

ಮುಂಬರುವ ಅಕ್ಟೋಬರ್ ನಲ್ಲಿ ಬ್ರೆಜಿಲ್ ನ, ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ನಡೆಯುವ ಮೊದಲ ಹಂತದ ಚುನಾವಣೆಯಲ್ಲಿ ಸುಳ್ಳು ಭ್ರಷ್ಟಾಚಾರದ ಆರೋಪಗಳ ಮೇಲೆ ಸೆರೆಮನೆ ವಾಸದಲ್ಲಿರುವ ಬ್ರೆಜಿಲ್ ನ ಮಾಜಿ ಅಧ್ಯಕ್ಷ ಲೂಲಾ ಡಿ ' ಸಿಲ್ವಾ ರವರಿಗೆ, " ತನ್ನ ಎಲ್ಲಾ ರೀತಿಯ ರಾಜಕೀಯ ಹಕ್ಕುಗಳನ್ನು ಅನುಭವಿಸಲು ಅಥವಾ ಆನಂದಿಸಲು ಮುಕ್ತ ಅವಕಾಶ ಕೊಡಬೇಕು ಆ ನಿಟ್ಟಿನಲ್ಲಿ, 2018 ರಲ್ಲಿ ನಡೆಯುವ ಅಧ್ಯಕ್ಷೀಯ ಚುನಾವಣೆಯಲ್ಲಿ ಅಭ್ಯರ್ಥಿಯಾಗಲು ಅನುವು ಮಾಡಿಕೊಡಬೇಕು" ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯು ಬ್ರೆಜಿಲ್ ಪ್ರಭುತ್ವಕ್ಕೆ ತಿಳಿಸಿತ್ತು. ಆದರೂ ಇದೇ ಸೆಪ್ಟೆಂಬರ್ 1 ರಂದು ಬ್ರೆಜಿಲ್ ನ ಸುಪ್ರೀಂ ಚುನಾವಣಾ ಟ್ರಿಬ್ಯೂನಲ್ ಲೂಲಾರವರ ಅಧ್ಯಕ್ಷೀಯ ಉಮೇದುವಾರಿಕೆ ನಿಷೇಧಿಸುವಂತೆ ಮತ ಹಾಕಿದೆ. ಅಭ್ಯರ್ಥಿ ಗಳ ಉಮೇದುವಾರಿಕೆ ನೊಂದಾವಣಿಗೆ ಸೆಪ್ಟೆಂಬರ್ 11.

ಮೈತ್ರಿಕೂಟ ಕ್ಕೆ ಹೆಚ್ಚು ಒತ್ತು

ಬ್ರೆಜಿಲ್ ಕಮ್ಯೂನಿಸ್ಟ್ ಪಕ್ಷ (ಪಿಸಿಡೊಬಿ), ವರ್ಕರ್ಸ್ ಪಾರ್ಟಿ ಮತ್ತು ರಿಪಬ್ಲಿಕನ್ ಪಾರ್ಟಿ ಆಫ್ ಸೋಶಿಯಲ್ ಆರ್ಡರ್ (ಪ್ರೋಸ್) ಒಟ್ಟಾಗಿ ಸೇರಿ "ಓ ಪೊವೊ ಫೆಲಿಜ್ ಡಿ ನೊವೊ", ಅಂದರೆ 'ಜನಗಳು ಮತ್ತೆ ಸಂತುಷ್ಟರು' ಮೈತ್ರಿ ಕೂಟಕ್ಕೆ ಹೆಚ್ಚು ಒತ್ತು ಕೊಡುವ ತೀರ್ಮಾನದ ಹಿನ್ನೆಲೆಯಲ್ಲಿ, ಪೆರ್ನಾಂಡೋ ಹಡ್ಡಾದ್ ಅಧ್ಯಕ್ಷ ಸ್ಥಾನಕ್ಕೆ, ಹಾಗೂ ಕಮ್ಯೂನಿಸ್ಟ್ ಪಕ್ಷ ದ ಮ್ಯಾನುಯಲಾ ಡಿ ' ಅವಿಲಾ ರು ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ನಿರ್ಧರಿಸಲಾಗಿದೆ. ಪ್ರಸ್ತುತ ಬ್ರೆಜಿಲ್ ಎದುರಿಸುತ್ತಿರುವ ರಾಜಕೀಯ ಅರಾಜಕತೆಯ ಬಿಕ್ಕಟ್ಟಿನಿಂದ ಹೊರಬರಲು ಈ ಮೈತ್ರಿಕೂಟ ಗೆಲ್ಲಲೆ ಬೇಕಾಗಿದೆ. ನಾವುಗಳು ಗೆದ್ದೇ ಗೆಲ್ಲುತ್ತೇವೆ ಎಂಬ ವಿಶ್ವಾಸವನ್ನು ಈ ಇಬ್ಬರು ಅಭ್ಯರ್ಥಿಗಳು ವ್ಯಕ್ತಪಡಿಸಿದ್ದಾರೆ.



ಅಧ್ಯಕ್ಷೀಯ ಅಭ್ಯರ್ಥಿ ಫರ್ನಾಂಡೊ ಹಡ್ಡಾದ್

ಸಾವೊ ಪಾಲೊ ವಿಶ್ವವಿದ್ಯಾಲಯ ದಲ್ಲಿ ಕಾನೂನು ಅಧ್ಯಯನ ಮಾಡುವಾಗ ಇವರು ವಿದ್ಯಾರ್ಥಿ ಚಳುವಳಿಯ ಮೂಲಕ ತಮ್ಮ ರಾಜಕೀಯ ಹೋರಾಟದ ಜೀವನ ಆರಂಭಿಸಿದರು. ಆ ನಂತರ ಇವರು ಅರ್ಥಶಾಸ್ತ್ರದಲ್ಲಿ, ಮಾರ್ಕ್ಸ್ ಮತ್ತು ತತ್ವಶಾಸ್ತ್ರದಲ್ಲಿ ಒಂದು ಪಿ.ಹೆಚ್.ಡಿ ಪದವಿಯನ್ನು ಪಡೆದರು. 2005 ರಿಂದ 2012 ರವರೆಗೆ ಲೂಲಾ ಮತ್ತು ದಿಲ್ಮಾ ರವರ ಸರ್ಕಾರದಲ್ಲಿ ಶಿಕ್ಷಣ ಸಚಿವರಾಗಿದ್ದರು, ಆಗ ಇವರು ಬ್ರೆಜಿಲ್ ಜನರಿಗೆ ಗುಣಮಟ್ಟದ ಹಾಗೂ ಮೂಲಭೂತ ಮತ್ತು ಉನ್ನತ ಶಿಕ್ಷಣ ಲಭ್ಯತೆಯನ್ನು ಉತ್ತಮಪಡಿಸಲು ಕಾರಣರಾಗಿದ್ದರು. ಇವರು ಮಂತ್ರಿ ಯಾಗಿದ್ದ ಸಮಯದಲ್ಲಿ "ಪ್ರೊಯೂನಿ ಯೋಜನೆ" ಯ ವ್ಯಾಪ್ತಿ ಯನ್ನು ಹೆಚ್ಚಿಸುವುದಕ್ಕೆ ಅಂದರೆ ಕಡಿಮೆ-ಆದಾಯದ ವಿದ್ಯಾರ್ಥಿಗಳಿಗೆ ಖಾಸಗಿ ವಿಶ್ವ ವಿದ್ಯಾನಿಲಯಗಳಿಗೆ ಹಾಜರಾಗಲು ಹಣಕಾಸು ಮತ್ತು ಸಾಲಗಳ ಸೌಕರ್ಯಗಳನ್ನು ಒದಗಿಸಲು ಶ್ರಮಿಸಿದ್ದರು. ಈ ಯೋಜನೆಯು ಸಾವಿರಾರು ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ಪ್ರವೇಶಿಸಲು ಅವಕಾಶ ಕಲ್ಪಿಸಿ ಕೊಟ್ಟಿತ್ತು. ಈ ಯೋಜನೆಯನ್ನು ಜಗತ್ತಿನ ಅನೇಕ ರಾಷ್ಟ್ರಗಳು ಅನುಕರಣೆ ಮಾಡಲು ಪ್ರಯತ್ನಿಸಿದುಂಟು.

ಇತರೆ ದೇಶಗಳ ವಿದ್ಯಾರ್ಥಿಗಳು ಬ್ರೆಜಿಲ್ ನ ಸಾರ್ವಜನಿಕ ವಿಶ್ವ ವಿದ್ಯಾನಿಲಯಗಳಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗುವಂತೆ ಮಾಡುವಲ್ಲಿ ಹಡ್ಡಾದ್ ಯಶಸ್ಸು ಕಂಡು ಕೊಂಡಿದ್ದರು.

ಹಾಗೆಯೇ, ಸಾರ್ವಜನಿಕ ಸಂಸ್ಥೆ ಗಳಲ್ಲಿ ಜನಾಂಗೀಯ ಅಲ್ಪಸಂಖ್ಯಾತರಿಗೆ ನಿರ್ದಿಷ್ಟ ಪ್ರಮಾಣದ ಸ್ಥಾನಗಳನ್ನು ಕಾಯ್ದಿರಿಸಲು ದೃಢಪಡಿಸಿದ್ದರು. 2013-2016 ರ ಅವಧಿಯಲ್ಲಿ 'ಸಾವೊ ಪಾಲೊ ' ದ ಮೇಯರ್ ಆಗಿ ಹಡ್ಡಾದ್ ಸೇವೆ ಸಲ್ಲಿಸಿದ್ದಾರೆ. ಅಲ್ಲಿ ಇವರು ಬಡವರ ಮತ್ತು ಅಲ್ಪಸಂಖ್ಯಾತರ ಪರ ಅನೇಕ ಹೊಸ ಹೊಸ ಕಾರ್ಯಕ್ರಮಗಳನ್ನು ನೀಡಿ ಹಲವಾರು ಸಾರ್ವಜನಿಕ ಯೋಜನೆಗಳ ಅನುಷ್ಠಾನಕ್ಕೆ ಕಾರಣರಾಗಿದ್ದಾರೆ.

ಕಮ್ಯೂನಿಸ್ಟ್ ಪಕ್ಷದ ಮ್ಯಾನುಯೆಲಾ ಡಿ' ಅವಿಲಾ

ಇವರು ಈ ಮೈತ್ರಿ ಕೂಟದಿಂದ ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿ ಯಾಗಿದ್ದಾರೆ, ಆರಂಭದಲ್ಲಿ ಲೂಲಾ ರವರು ಇವರನ್ನೆ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಚುನಾವಣೆಯ ಕಣಕ್ಕೆ ಇಳಿಸುವ ಇಚ್ಚೆಯನ್ನು ವ್ಯಕ್ತಪಡಿಸಿದ್ದರು, ಕಳೆದ ಆಗಸ್ಟ್ ನಲ್ಲಿ, ಲೂಲಾ ಪರ ಕೋರ್ಟಿನಲ್ಲಿ ಕಾನೂನು ವಾದ ಮಂಡಿಸುತ್ತಿರುವ ನ್ಯಾಯವಾದಿಗಳು ತುಂಬಾ ವಿಶ್ವಾಸದಿಂದಲೆ ಲೂಲಾರ ಬಿಡುಗಡೆಯ ಬಗ್ಗೆ ಆಶಾವಾದ ಹೊಂದಿದ್ದರು, ಆದರೆ, ಲೂಲಾಗೆ ಅದು ಅಸಾಧ್ಯವೆಂಬ ಅರಿವು ಮೂಡಿತ್ತು. ಆ ಸಮಯದಲ್ಲಿ, ಕಮ್ಯೂನಿಸ್ಟ್ ಪಕ್ಷದ ಮ್ಯಾನುಯೆಲಾ ರವರನ್ನು ಕಣಕ್ಕೆ ಧುಮಿಕಿಸಲು ಸೂಚಿಸಿದ್ದರು. ಆದರೆ, ರಾಜಕೀಯ ಬಿಕ್ಕಟ್ಟನ್ನು ಸೂಕ್ಷ್ಮವಾಗಿ ಅರ್ಥ ಮಾಡಿಕೊಂಡ ಕಮ್ಯೂನಿಸ್ಟ್ ಹಾಗೂ ವರ್ಕರ್ಸ್ ಪಾರ್ಟಿಗಳು ಮೈತ್ರಿಕೂಟ ರಚಿಸಿಕೊಂಡು ಚುನಾವಣೆ ಎದುರಿಸಲು ಹೂಡಿದ ತಂತ್ರದ ಭಾಗವಾಗಿ, ಈ ಎರಡು ಪ್ರಮುಖ ಪಕ್ಷಗಳು ಅಂತಿಮವಾಗಿ ಲೂಲಾರ ಸೂಚನೆ ಮೇರೆಗೆ ಈ ನಿರ್ಧಾರಕ್ಕೆ ಬಂದಿವೆ.

ಮ್ಯಾನುಯೆಲಾ ರವರು, ಯೂನಿವರ್ಸಿಟಿ ಆಫ್ ರಿಯೊ ಗ್ರಾಂಡೆ ಡೊ ಸುಲ್ ನಲ್ಲಿನ, ಪಾಂಟಿಫಿಕಲ್ ಕ್ಯಾಥೊಲಿಕ್ ವಿಶ್ವವಿದ್ಯಾಲಯದಲ್ಲಿ ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ರಾಜಕೀಯದಲ್ಲಿ ಕ್ರಿಯಾಶೀಲರಾಗಿದ್ದವರು. ಅಲ್ಲಿ ಇವರು ಪತ್ರಿಕೋದ್ಯಮ ದಲ್ಲಿ ಪರಿಣಿತ ಅಭ್ಯಾಸ ಮಾಡಿದ್ದರು, ಬ್ರೆಜಿಲ್ ಕಮ್ಯೂನಿಸ್ಟ್ ಪಕ್ಷದ ಯುವ ರಂಗವಾದ ಯೂನಿಯನ್ ಆಫ್ ಸೋಶಿಯಲಿಸ್ಟ್ ಯೂತ್ (ಯು. ಜೆ.ಎಸ್) ನ ಮೂಲಕ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದರು. 2006 ರಲ್ಲಿ, ಇವರು ರಿಯೊ ಗ್ರಾಂಡೆ ಸ್ಕೂಲ್ ನ ಫೆಡರಲ್ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್ ಪ್ರತಿನಿಧಿ ಯಾಗಿ ಪಿಸಿಡೊಬಿ -ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. 2010 ರಲ್ಲಿ ಮರು ಆಯ್ಕೆಯಾಗಿದ್ದರು.

ಬ್ರೆಜಿಲ್ ಸಾರ್ವಭೌಮತ್ವ ರಕ್ಷಣೆಯ ಪಣ

ಸ್ವತಂತ್ರ ಬ್ರೆಜಿಲ್, ಪ್ರಜಾಪ್ರಭುತ್ವ ಬ್ರೆಜಿಲ್, ಸಾರ್ವಭೌಮ ಬ್ರೆಜಿಲ್ ಮತ್ತು ಸಮಾನತೆಯ ಬ್ರೆಜಿಲ್ ನಿರ್ಮಿಸಲು ಹೋರಾಟವನ್ನು ಮುಂದುವರಿಸವ ಸಲುವಾಗಿಯೇ ಹಡ್ಡಾದ್ ಹಾಗೂ ಡಿ' ಅವಿಲಾ ಪ್ರತಿಜ್ಞೆ ಕೈಗೊಂಡಿದ್ದಾರೆ. ಲೂಲಾ ರಚಿಸಲು ಪ್ರಯತ್ನಿಸಿದ್ದ, ಕಾರ್ಮಿಕ ಹಕ್ಕುಗಳ ರಕ್ಷಣೆ ಮತ್ತು ಅವರ ನ್ಯಾಯಯುತ ಪಿಂಚಣಿ ರಕ್ಷಣೆ, ಹಾಗೂ ಬ್ರೆಜಿಲ್ ನ ಸಾರ್ವಭೌಮತ್ವ ವನ್ನು ರಕ್ಷಿಸುವುದು ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಂದ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸುವುದು, ಮತ್ತು ಬ್ರೆಜಿಲ್ ಪ್ರಜಾಪ್ರಭುತ್ವ ವನ್ನು ಪುನಃ ಸ್ಥಾಪಿಸುವುದು. ಈ ಎಲ್ಲಾ ಹಕ್ಕುಗಳನ್ನು ಬ್ರೆಜಿಲ್ ಜನರಿಗಾಗಿ, ಖಾತ್ರಿ ಪಡಿಸುವ ನಿಟ್ಟಿನಲ್ಲಿ ಬೃಹತ್ ಹೋರಾಟ ಮಾಡಲು ಈ ಮೈತ್ರಿ ಕೂಟ ದೃಡ ನಿರ್ಧಾರ ಮಾಡಿದೆ. ಅಧ್ಯಕ್ಷೀಯ ಚುನಾವಣೆ ಪ್ರಮುಖ ಸವಾಲನ್ನು ಎದುರಿಸಲು ಸಿದ್ಧವಾಗಿದೆ.

ಬೊಲಿವಿಯಾ: ಉಚಿತ ಸಾರ್ವತ್ರಿಕ ಆರೋಗ್ಯ ಸಂರಕ್ಷಣಾ ಯೋಜನೆ

ಬೊಲಿವಿಯಾ ಅಧ್ಯಕ್ಷ ಇವೊ ಮೊರೇಲ್ಸ್ ತಮ್ಮ ದೇಶದ ಎಲ್ಲಾ ನಾಗರಿಕರಿಗೂ ಉಚಿತ ಸಾರ್ವತ್ರಿಕ ಆರೋಗ್ಯ ಸಂರಕ್ಷಣಾ ಯೋಜನೆಯ ಪ್ರಸ್ತಾಪವನ್ನು ಅಂತಿಮಗೊಳಿಸುವುದಾಗಿ ಘೋಷಿಸಿದ್ದಾರೆ. ಹಾಗೆಯೇ ಈ ಯೋಜನೆಯು 2019 ರೊಳಗೆ ಕಾರ್ಯರೂಪಕ್ಕೆ ಬರುವುದು ನಿಶ್ಚಿತವೆಂದು ಖಚಿತ ಪಡಿಸಿದ್ದಾರೆ.

ಈ ಹಿಂದೆ ಇದ್ದಂತೆ ಇದು ಯಾವುದೇ ರೀತಿಯ ತೆರಿಗೆಯ ವ್ಯಾಪ್ತಿಗೆ ಒಳಪಡದೆ, ನೇರವಾಗಿ ಸರ್ಕಾರವೇ ಹಣಕಾಸನ್ನು ಒದಗಿಸುತ್ತದೆ ಎಂದು ಪ್ರಕಟಿಸಿದ್ದಾರೆ. ಈ ಯೋಜನೆಯು ಸರ್ಕಾರವು ಹಮ್ಮಿಕೊಂಡಿರುವ 2016-2020 ರ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಪ್ರಮುಖ ಭಾಗವಾಗಿದೆ. ಈ ಉಚಿತ ಸಾರ್ವತ್ರಿಕ ಆರೋಗ್ಯ ಸಂರಕ್ಷಣಾ ಯೋಜನೆಯನ್ನು ಅಂತಿಮಗೊಳಿಸುವ ಮುನ್ನಾ, ರಾಷ್ಟ್ರೀಯ ಸಹಕಾರ ಸಂಘದ ಮೂಲಕ, ಸಾಮಾಜಿಕ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು ಮತ್ತು ಅನೇಕ ಸಂಘ-ಸಂಸ್ಥೆಗಳೊಂದಿಗೆ ಹಲವು ಬಾರಿ ಸಭೆ ಸೇರಿಸಿ ಹಾಗೂ ಅವುಗಳೊಂದಿಗೆ ಸುದೀರ್ಘವಾದ ಚರ್ಚೆ ನಡೆಸಿ ಈ ಯೋಜನೆಯನ್ನು ಅಂತಿಮಗೊಳಿಸಲಾಗಿದೆ.

2016-2020 ರ ಸರ್ಕಾರದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಭಾಗವಾದ, ಈ ಯೋಜನೆಯು ಸಾರ್ವಜನಿಕರ ಆರೋಗ್ಯದ ರಕ್ಷಣೆಗಾಗಿಯೇ, ವಿಶೇಷವಾಗಿ ರೂಪಿಸಿರುವ ಸುಮಾರು 200 ವಿವಿಧ ಬಗೆಯ ವಿಸ್ತಾರವಾದ ಉಪಯೋಜನೆಗಳನ್ನು ಇದರೊಂದಿಗೆ ಒಳಗೊಂಡಿದೆ. ಅವುಗಳಲ್ಲಿ, ಪ್ರಮುಖವಾಗಿ, ಆರೋಗ್ಯ ಮತ್ತು ಸಾಂಪ್ರದಾಯಿಕ ಮತ್ತು ಪೂರ್ವಜರ ಆರೋಗ್ಯ ವ್ಯವಸ್ಥೆಗಳ ಏಕೀಕರಣವನ್ನು ಹೆಚ್ಚು ಅರ್ಹತೆ ಮತ್ತು ಬದ್ಧತೆ ಹೊಂದಿರುವ ಸಿಬ್ಬಂದಿಯೊದಿಗೆ ಸಾರ್ವತ್ರಿಕ ಲಭ್ಯತೆಯನನು ಸಿದ್ದಿಸುವ ಉದ್ದೇಶ ವನ್ನು ಕೂಡ ಹೊಂದಿದೆ. ವರದಿಗಳ ಪ್ರಕಾರ, ಇದರ ಆರ್ಥಿಕ ಯೋಜನೆ ನಾಲ್ಕು ನಿರ್ದಿಷ್ಟವಾಗಿ ಕ್ಯಾನ್ಸರ್, ಮೂತ್ರಪಿಂಡ, ಜಠರ-ಕರುಳು ಮತ್ತು ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳಿಗೆ ಮೀಸಲಾದ ನಾಲ್ಕನೇ ಹಂತದ ಆಸ್ಪತ್ರೆಗಳು, 12 ಮೂರನೇ ಹಂತದ ಆಸ್ಪತ್ರೆಗಳು, 31 2ನೇ ಹಂತದ ಆಸ್ಪತ್ರೆಗಳು, 180 ಮೊದಲ ಹಂತದ ಆಸ್ಪತ್ರೆಗಳನ್ನು ವಿವಿಧ ಇಲಾಖೆಗಳ ಅಡಿಯಲ್ಲಿ ಇಡೀ ದೇಶಾದ್ಯಂತ ನಿರ್ಮಿಸಲಾಗುವುದು. ಸುಮಾರು 1430 ಆರೋಗ್ಯ ಠಾಣೆಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೆ ಏರಿಸಲಾಗುವುದು.

ವಿಶ್ವ ಆರೋಗ್ಯ ಸಂಸ್ಥೆಯಿಂದ ಮೆಚ್ಚುಗೆ

ಬೊಲಿವಿಯಾ ಯಶಸ್ವಿಯಾಗಿ ಬಡತನ ಮಟ್ಟ ಮತ್ತು ದೀರ್ಘ ಕಾಲದ ಅಪೌಷ್ಟಿಕತೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸಾರ್ವತ್ರಿಕ ಯೋಜನಗಳ ವ್ಯವಸ್ಥಿತ ಜಾರಿಯ ಮೂಲಕ ಉತ್ತಮವಾಗಿ ಕಾರ್ಯನಿರ್ವಹಣೆ ಮಾಡುತ್ತಿದೆ. ಶಿಶು ಮರಣ ಪ್ರಮಾಣದಲ್ಲಿ ಶೇ.30 ರಷ್ಟು ಮತ್ತು ತಾಯಂದಿರ ಮರಣದ ಪ್ರಮಾಣದಲ್ಲಿ ಶೇ.50 ರಷ್ಟು ಕಡಿಮೆಯಾಗಿದೆ. 2013 ರಲ್ಲಿ ಪ್ರಾರಂಭವಾದ 'ಮಿ ಸಲೂದ್ ಅಂದರೆ ನನ್ನ ಆರೋಗ್ಯ ಯೋಜನೆಯ ಮೂಲಕ ಇಲ್ಲಿಯವರೆವಿಗೂ ಲಕ್ಷಾಂತರ ಬೊಲಿವಿಯಾ ನಾಗರಿಕರಿಗೆ ಉಚಿತವಾಗಿ ಆರೋಗ್ಯ ಸೇವೆ ಒದಗಿಸಲಾಗಿದೆ. ಜಿಡಿಪಿ ಮತ್ತು ಒಟ್ಟು ತಲಾ ಆರೋಗ್ಯ ವೆಚ್ಚಗಳು ಏರಿಕೆಯಾಗಿವೆ. ತಲಾ ವೈದ್ಯಕೀಯ ಸೌಲಭ್ಯ ಮತ್ತು ವೈದ್ಯರ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡುಬಂದಿದೆ. ಹಾಗೆಯೇ, ಬಡವರು ವಾಸ ಮಾಡುವ ಪ್ರದೇಶಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ವಿಸ್ತರಣೆ ಮಾಡಲಾಗಿದೆ. ಈ ಆರೋಗ್ಯ ಯೋಜನೆಯ ಸಫಲತೆಗೆ ಸಮಾಜವಾದಿ ಕ್ಯೂಬಾ ಬೊಲಿವಿಯಾ ಸರ್ಕಾರಕ್ಕೆ ತನ್ನ ಎಲ್ಲಾ ಸಹಾಯವನ್ನು ನೀಡುತ್ತಾ ಬಂದಿದೆ. 2017 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂ. ಹೆಚ್.ಓ) ಬೊಲಿವಿಯಾ ಸರಕಾರವು ತನ್ನ ನಾಗರಿಕರಿಗೆ ಗುಣಮಟ್ಟದ ಆರೋಗ್ಯ ಒದಗಿಸುವ ನಿಟ್ಟಿನಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದೆ.

ಸರಕೀಕರಣ ಮತ್ತು ರಾಜಕೀಯ ಹಸ್ತಕ್ಷೇಪಗಳ.... ಪುಟ 16 ರಿಂದ

ತೀವ್ರ ಹಿನ್ನಡೆಯಾಗಲಿದೆ ಎಂದರು.


ನ್ಯಾಶನಲ್ ಲಾ ಸ್ಕೂಲಿನ ಪ್ರೊ. ವಿ.ಪಿ.ನಿರಂಜನಾರಾಧ್ಯ ಮಾತನಾಡುತ್ತಾ, ಎಚ್.ಇ.ಸಿ.ಐ. ಮಸೂದೆ ಸಂವಿಧಾನ ಮತ್ತು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಭಾಗವಾಗಿ ಉಚ್ಚ ಶಿಕ್ಷಣ ಸೇರಿದಂತೆ ಶಿಕ್ಷಣದ ಮಾನವ ಹಕ್ಕಿನ ಉಲ್ಲಂಘನೆ ಎಂದರು. ಎಚ್.ಇ.ಸಿ.ಐ. ಮಸೂದೆ ಹಿಂತೆಗೆಯಬೇಕು. ಇಂತಹ ಪ್ರಸ್ತಾವಗಳಿಗೆ ಮೂಲಕಾರಣವಾದ ಡಬ್ಲ್ಯೂ.ಟಿ.ಒ.-ಗ್ಯಾಟ್ಸ್ ಒಪ್ಪಂದದಿಂದ ಭಾರತ ಹೊರಬೇಕು. ಇಂತಹ ಪ್ರಸ್ತಾವಗಳ ಮೂಲವಾದ ನೀತಿ ಆಯೋಗವನ್ನೂ ವಿರೋಧಿಸಬೇಕು ಎಂದು ವಾದಿಸಿದರು.

ಸಾಮಾಜಿಕ ಕಾರ್ಯಕರ್ತ ಡಾ. ಪ್ರಕಾಶ್ ಮಾತನಾಡಿ ಎಚ್.ಇ.ಸಿ.ಐ. ಮಸೂದೆ ಅ-ಪ್ರಾಯೋಗಿಕವಾದ ಕ್ರಮಗಳ ಮೂಲಕ ಶಿಕ್ಷಣ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಬಲ್ಲ, ಅತಿ ಕೇಂದ್ರೀಕರಣದ ಮೂಲಕ ಒಕ್ಕೂಟ ವ್ಯವಸ್ಥೆಗೆ ಮಾರಕವಾಗುವ, ಶಿಕ್ಷಕರ ಸಂಬಳ-ಸವಲತ್ತುಗಳನ್ನು ಒಂದೇ ಏಟಿನಲ್ಲಿ ಹಿಂತೆಗೆಯಬಲ್ಲ ಭೀಕರ ಪ್ರಸ್ತಾವ ಎಂದು ಟೀಕಿಸಿದರು. ದೇಶದಲ್ಲಿರುವ 900 ವಿ.ವಿ.ಗಳು 40 ಸಾವಿರ ಸಂಸ್ಥೆಗಳ ಲಕ್ಷಾಂತರ ಕೋರ್ಸುಗಳಿಗೆ 3 ವರ್ಷಗಳ ಒಳಗೆ ಮಂಜೂರಾತಿ, ಹೊಸ ಕೋರ್ಸುಗಳ ಮಂಜೂರಾತಿ, ಎಲ್ಲಾ ಸಂಸ್ಥೆಗಳ ಮೌಲ್ಯಾಂಕನ ಮಾನ್ಯತೆ ಮತ್ತು ತೆರೆಯುವ ಮುಚ್ಚುವುದರ ನಿರ್ವಹಣೆ ಯಾವುದೇ ಶಾಶ್ವತ ಸಿಬ್ಬಂದಿ ಇಲ್ಲದಿರುವ ಒಂದು ಕಮಿಶನಿನಿಂದ ಪ್ರಾಯೋಗಿಕವಾಗಿ ಸಾಧ್ಯವೇ ಎಂದು ಅವರು ಪ್ರಶ್ನಿಸಿದರು. ಕಮಿಶನಿನ ತೀರ್ಮಾನಗಳನ್ನು ಉಲ್ಲಂಘಿಸುವವರಿಗೆ 2 ವರ್ಷ ಜೈಲು ಶಿಕ್ಷೆ ವಿರುದ್ಧ ಹೈ ಕೋರ್ಟ್ ಮತ್ತು ಸುಪ್ರೀಂ ಕೋರ್ಟುಗಳಲ್ಲಿ ಮಾತ್ರ ಪ್ರಶ್ನಿಸಬಹುದು ಎಂಬುದೂ ಈ ಮಸೂದೆಯ ಕರಾಳ ಅಂಶ. ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ವಿ.ವಿ. ಶಿಕ್ಷಣ ಸಂಸ್ಥೆ ಸ್ಥಾಪಿಸುವ ರಾಜ್ಯ ಸರಕಾರಗಳ ಅಧಿಕಾರದ ಮೇಲೆ ದಾಳಿ ಮಾಡುವ ಮಸೂದೆಯನ್ನು ಎಲ್ಲಾ ರಾಜ್ಯ ಸರಕಾರಗಳು ಬಲವಾಗಿ ವಿರೋಧಿಸಬೇಕು ಎಂದು ಅವರು ಕರೆ ಕೊಟ್ಟರು. ಯುಜಿಸಿ ಇಲ್ಲದ ಮೇಲೆ ಅದು ವಿಧಿಸಿದ ಶಿಕ್ಷಕರ ಸಂಬಳ-ಸವಲತ್ತುಗಳ ಸೇವಾ ನಿಯಮಗಳು ಎಲ್ಲಿರುತ್ತವೆ ಎಂಬುದನ್ನು ಗಮನಿಸಿ ಅಧ್ಯಾಪಕರು ಎಚ್ಚೆತ್ತುಗೊಳ್ಳಬೇಕು. ವಿದ್ಯಾರ್ಥಿಗಳು, ಅಧ್ಯಾಪಕರು, ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಈ ಮಸೂದೆಯ ವಿರುದ್ಧ ವ್ಯಾಪಕ ಚಳುವಳಿ ಎತ್ತಿಕೊಳ್ಳಬೇಕು ಎಂದು ಅವರು ಕರೆ ಕೊಟ್ಟರು.

ಎಲ್ಲಾ ಮಾತನಾಡಿದವರು 'ಬೆಂಗಳೂರು ಕಲೆಕ್ಟಿವ್' ರಚನೆ ಮತ್ತು ಮೊದಲ ಸಂವಾದವಾಗಿ ಈ ವಿಷಯವನ್ನು ಎತ್ತಿಕೊಂಡಿದ್ದನ್ನು ಮೆಚ್ಚಿ ಅಭಿನಂದಿಸಿದರು.

●

JANASHAKTHI KANNADA VARA PATRIKE SEP 24-30, 2018 Price: Rs. 10/- Date of Publication: 21 SEPTEMBER 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಪ್ರೊ. ಪಟ್ನಾಯಕ್



ಉಚ್ಚಶಿಕ್ಷಣದ ಮೇಲೆ ಪ್ರಹಾರ – ಸಾರ್ವಜನಿಕ ಸಂವಾದ

"ಸರಕೀಕರಣ ಮತ್ತು ರಾಜಕೀಯ ಹಸ್ತಕ್ಷೇಪಗಳ ಪ್ರಹಾರ"

ಉಚ್ಚಶಿಕ್ಷಣ ಬಹಳ ಕಾಲದಿಂದ ರಾಜ್ಯ ವಿ.ವಿ.ಗಳಿಗೆ ತಕ್ಕ ಅನುದಾನವಿಲ್ಲದೆ ಅವನತಿಯ ಹಾದಿಯಲ್ಲಿದೆ. ಆದರೆ ಕಳೆದ 4 ವರ್ಷಗಳಲ್ಲಿ ಸರಕೀಕರಣ ಮತ್ತು ರಾಜಕೀಯ ಹಸ್ತಕ್ಷೇಪಗಳಿಂದ ಉಚ್ಚಶಿಕ್ಷಣದ ಮೇಲೆ ದಾಳಿ ಆರಂಭವಾಗಿದೆ ಎಂದು ಪ್ರೊ. ಪ್ರಭಾತ್ ಪಟ್ನಾಯಕ್ ಹೇಳಿದರು. ಅವರು "ಉಚ್ಚ ಶಿಕ್ಷಣದ ಮೇಲೆ ಪ್ರಹಾರ" ಎಂಬ ವಿಷಯದ ಮೇಲೆ ಬೆಂಗಳೂರು ಕಲೆಕ್ಟಿವ್ ಸೆಪ್ಟೆಂಬರ್ 19ರಂದು ಸೈಂಟ್ ಜೋಸೆಫ್ ಕಾಲೇಜಿನ ಕ್ಸೇವಿಯರ್ ಸಭಾಂಗಣದಲ್ಲಿ ಸಂಘಟಿಸಿದ ಸಾರ್ವಜನಿಕ ಸಂವಾದದಲ್ಲಿ ದಿಕ್ಸೂಚಿ ಭಾಷಣ ಮಾಡುತ್ತಿದ್ದರು. ಸರಕೀಕರಣ ಮತ್ತು ಖಾಸಗೀಕರಣ ಅಭಿವೃದ್ಧ ಬಂಡವಾಳಶಾಹಿ ದೇಶಗಳಿಗಿಂತಲೂ ಭಾರತದಲ್ಲಿ ತ್ವರಿತ ಗತಿಯಲ್ಲಿ ಆಳವಾಗಿ ನಡೆಯುತ್ತಿದೆ. ಉದಾಹರಣೆಗೆ ಭಾರತದಲ್ಲಿ ಖಾಸಗಿ ವಿ.ವಿ.ಯಲ್ಲಿ ಉಚ್ಚ ಶಿಕ್ಷಣದ ವಾರ್ಷಿಕ ವೆಚ್ಚ ಸಾರ್ವಜನಿಕ ವಿ.ವಿ.ಯಲ್ಲಿನ ವೆಚ್ಚದ 70 ಪಟ್ಟು ಇದ್ದರೆ, ಅಮೆರಿಕದಲ್ಲಿ ಸುಮಾರು 5 ಪಟ್ಟು ಇದೆ. ಯುರೋಪಿನಲ್ಲಿ ಅದು ಇನ್ನಷ್ಟು ಕಡಿಮೆಯಿದೆ. ವಿ.ವಿ. ಡಿಗ್ರಿ ಮಾರುಕಟ್ಟೆಯಲ್ಲಿ ಎಷ್ಟು ದುಡ್ಡು ತರುತ್ತದೆ ಎಂಬುದರ ಮೇಲೆ ಒತ್ತು ಕೊಡುವ ಮೂಲಕ, ಸರಕೀಕರಣ ವಿಮರ್ಶಾತ್ಮಕ ಚಿಂತನೆಯನ್ನು ಕುಂಠಿತಗೊಳಿಸುತ್ತದೆ. ರಾಜಕೀಯ ಹಸ್ತಕ್ಷೇಪ ಸಹ ಹಿಂದುತ್ವದ ಸಿದ್ಧಾಂತವನ್ನು ಹೇರಿ, ನವ–ಉದಾರವಾದಿ ಮತ್ತು ಕೋಮುವಾದಿ ನೀತಿಗಳನ್ನು ಪ್ರಶ್ನಿಸುವುದನ್ನು ಕೊನೆಗೊಳಿಸಲು ಬಯಸುತ್ತದೆ. ಹಾಗಾಗಿ ಎರಡೂ ಒಂದಕ್ಕೊಂದು ಪೂರಕವಾಗುತ್ತವೆ. ಸರಕಾರ ತಂದಿರುವ ಉಚ್ಚ ಶಿಕ್ಷಣ ಕಮಿಶನ್ (ಎಚ್.ಇ.ಸಿ.ಐ.) ಮಸೂದೆ ಶಿಕ್ಷಣದ ಸಾಮಾಜಿಕ ಪಾತ್ರವನ್ನು ನಿರಾಕರಿಸುತ್ತದೆ. ಇದನ್ನು ತಿರಸ್ಕರಿಸಬೇಕು. ಸಾರ್ವಜನಿಕ ಅನುದಾನದಿಂದ ನಡೆಯುವ ಉಚ್ಚ ಶಿಕ್ಷಣ ಮೂಲಭೂತ ಹಕ್ಕಾಗುವ ಸಂವಿಧಾನಿಕ ತಿದ್ದುಪಡಿ ತರಬೇಕು ಎಂದು ಪ್ರೊ. ಪಟ್ನಾಯಕ್ ವಾದಿಸಿದರು.

ಸಂವಾದದಲ್ಲಿ ಬೆಂಗಳೂರಿನ ಹಲವು ವಿ.ವಿ.ಗಳ ಉಚ್ಚಶಿಕ್ಷಣ ಸಂಸ್ಥೆಗಳ, ವೈಜ್ಞಾನಿಕ ಸಂಸ್ಥೆಗಳ ವಿದ್ಯಾರ್ಥಿಗಳು ಸಂಶೋಧಕರು, ಅಧ್ಯಾಪಕರು ಭಾಗವಹಿಸಿದ್ದು, ಕ್ಸೇವಿಯರ್ ಸಭಾಂಗಣ ಕಿಕ್ಕಿರಿದು ತುಂಬಿತ್ತು.

ಎಚ್.ಇ.ಸಿ.ಐ. ಫರ್ಮಾನು ಉಲ್ಲಂಘಿಸಿದರೆ 2 ವರ್ಷ ಜೈಲು

ಗೋಷ್ಟಿ–1 ರಲ್ಲಿ ಮಾತನಾಡುತ್ತಾ ಕಾನೂನು ತಜ್ಞ ಪ್ರೊ. ಬಾಬು ಮ್ಯಾಥ್ಯೂ ಅವರು ಯುಜಿಸಿ ಒಂದು ಆದರ್ಶ ವ್ಯವಸ್ಥೆ ಅಲ್ಲದಿದ್ದರೂ ಅದಕ್ಕಿಂತಲೂ ವಿ.ವಿ.ಗಳ ಸ್ವಾಯತ್ತತೆ ಮತ್ತು ಆರೋಗ್ಯಕರ ಬೆಳವಣಿಗೆಗೆ ಹಲವು ರೀತಿಗಳಲ್ಲಿ ಮಾರಕವಾಗಬಲ್ಲ ಅಪಾಯಕಾರಿ ಸಾಧ್ಯತೆಗಳನ್ನು ಪ್ರಸ್ತಾವಿತ ಎಚ್.ಇ.ಸಿ.ಐ. ಹೊಂದಿದೆ ಎಂದು ವಾದಿಸಿದರು. ಎಲ್ಲಾ ವಿ.ವಿ. ಉಚ್ಚ ಶಿಕ್ಷಣ ಸಂಸ್ಥೆಗಳ ಮೌಲ್ಯಮಾಪನ, ಮೂಲ್ಯಾಂಕನ, ಕೋರ್ಸುಗಳಿಗೆ ಮಂಜೂರಾತಿ, ಸಂಸ್ಥೆ ತೆರೆಯಲು ಮುಚ್ಚಲು ಮಂಜೂರಾತಿ ಇತ್ಯಾದಿ ವ್ಯಾಪಕ ಅಧಿಕಾರಗಳನ್ನು ಎಚ್.ಎ.ಸಿ.ಐ. ಹೊಂದಿರುತ್ತದೆ 12 ರೀತಿಯಲ್ಲಿ ವಿ.ವಿ. ಅಥವಾ ಶಿಕ್ಷಣ ಸಂಸ್ಥೆಯ ನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡಲು ಅಧಿಕಾರವಿರುವ ಎಚ್.ಎ.ಸಿ.ಐ., ವಿ.ವಿ.ಗಳನ್ನು ಸ್ವಾಯತ್ತ ಸ್ವಯಮಾಡಳಿತ ಹೊಂದಿದ ಸಂಸ್ಥೆಗಳನ್ನಾಗಿ ಮಾಡುವ ಉದ್ದೇಶ ಹೊಂದಿದೆ ಎಂಬುದಕ್ಕಿಂತ ದೊಡ್ಡ ವಿಪರ್ಯಾಸ ಬೇರೆ ಇರಲಿಕ್ಕಿಲ್ಲ. ಮಾತ್ರವಲ್ಲ, ಎಚ್.ಇ.ಸಿ.ಐ.ಗೆ ಯಾವುದೇ ಅನುದಾನ ಕೊಡುವ ಅಧಿಕಾರವಿರುವುದಿಲ. ಅದರ ಯಾವುದೇ ಫರ್ಮಾನುಗಳನ್ನು ಉಲ್ಲಂಘಿಸಿದರೆ ಸಂಸ್ಥೆಯನ್ನು ಮುಚ್ಚುವ ಅಥವಾ ತಪ್ಪಿತಸ್ಥರಿಗೆ 2 ವರ್ಷ ಜೈಲು ಶಿಕ್ಷೆ ಕೊಡುವ ಅಧಿಕಾರ ಅದಕ್ಕಿರುತ್ತದೆ, ಎಂದು ಅವರು ಮಸೂದೆಯ ಮುಖ್ಯ ಅಪಾಯಕಾರಿ ಅಂಶಗಳನ್ನು ಬಿಚ್ಚಿಟ್ಟರು. ಇದನ್ನು ಬಲವಾಗಿ ವಿರೋಧಿಸಬೇಕು. ವಿ.ವಿ.ಗಳು ಜ್ಞಾನವನ್ನು ಉತ್ಪಾದಿಸುವ ಸಂಸ್ಥೆಗಳು. ಇದು ಮೂಲಭೂತ ಹಕ್ಕಾದ ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗವೇ. ಅದರ ಮೇಲೆ ಇಂತಹ ಅತಾರ್ಕಿಕ ನಿರ್ಬಂಧಗಳನ್ನು ಹೇರುವುದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿರುವುದರಿಂದ ಈ ಮಸೂದೆ ಸಂವಿಧಾನ–ಬಾಹಿರ ಎಂದು ಪ್ರತಿಪಾದಿಸಿದರು. ಅದನ್ನು ಮಸೂದೆಯಾಗಿಸಿದರೆ ಈ ಆಧಾರದ ಮೇಲೆ ಅದನ್ನು ಅಸಿಂಧುಗೊಳಿಸಲು ಕೋರ್ಟು ಮೆಟ್ಟಿಲು ಹತ್ತಬೇಕು ಎಂದರು.

ಬೆಂಗಳೂರು ವಿ.ವಿ.ಯ ಭೌತಶಾಸ್ತ್ರದ ಪ್ರಾಧ್ಯಾಪಕರಾದ ಪ್ರೊ. ಶರ್ಬರಿ ಭಟ್ಟಾಚಾರ್ಯ ಅವರು ಮಾತನಾಡುತ್ತಾ, ಈಗಾಗಲೇ ರಾಜ್ಯ ವಿ.ವಿ.ಗಳು ಅದರಲ್ಲೂ ಮೂಲಭೂತ ವಿಜ್ಞಾನದ ವಿಭಾಗಗಳು ಹಣದ ಮತ್ತು ವಿದ್ಯಾರ್ಥಿಗಳ ಕೊರತೆಯಿಂದ ಸೊರಗುತ್ತಿವೆ. ಖಾಸಗೀಕರಣ ವ್ಯಾಪಾರೀಕರಣ ಈಗಾಗಲೇ ವಿಜ್ಞಾನದ ವಿಭಾಗಗಳಿಗೆ ಮಾರಕವಾಗಿದೆ. ಯುಜಿಸಿ ಅದರ ಹಲವು ಮಿತಿಗಳ ನಡುವೆಯೂ ವಿಜ್ಞಾನದ ವಿಭಾಗಗಳನ್ನು ಜೀವಂತವಾಗಿಟ್ಟಿತ್ತು. ರಾಜ್ಯ ವಿ.ವಿ.ಗಳು ಹಿಂದುಳಿದ/ಪರಿಶಿಷ್ಟ, ಗ್ರಾಮೀಣ ಮತ್ತು ಮಹಿಳೆಯರಿಗೆ ಉಚ್ಚ ಶಿಕ್ಷಣವನ್ನು ಒದಗಿಸುತ್ತಿದೆ. ಇಲ್ಲಿನ ವಿದ್ಯಾರ್ಥಿಗಳು ಹೆಚ್ಚಾಗಿ ಉಚ್ಚ ಶಿಕ್ಷಣಕ್ಕೆ ತೆರೆದುಕೊಂಡ ಮೊದಲ ಪೀಳಿಗೆಯವರು. ಪ್ರಸ್ತಾವಿತ ಎಚ್.ಇ.ಸಿ.ಐ. ಅದಕ್ಕೆ ಬಲವಾದ ಹೊಡೆತ ಕೊಡಲಿದೆ. ಪ್ರಧಾನವಾಗಿ ಅನುದಾನ ಕೊಡುವ ಅಧಿಕಾರ ಇಲ್ಲದಿದ್ದರೂ ಮುಚ್ಚಲು ಸೇರಿದಂತೆ ಇತರ ಎಲ್ಲಾ ಅಧಿಕಾರಗಳು ಅದಕ್ಕಿರುವುದು, ರಾಜ್ಯ ವಿ.ವಿ. ಮತ್ತು ವಿಜ್ಞಾನ ವಿಭಾಗಗಳಿಗೆ ಮಾರಕವಾಗಲಿವೆ. ಆದ್ದರಿಂದ ಅದನ್ನು ಕೈ ಬಿಟ್ಟು ಯುಜಿಸಿಯನ್ನು ಇನ್ನಷ್ಟು ಸುಧಾರಿಸಿ ಬಲಗೊಳ್ಳುವುದು ಸೂಕ್ತವೆಂದು ಪೊ. ಭಟ್ಟಾಚಾರ್ಯ ಅವರು ಹೇಳಿದರು.

ಎಚ್.ಇ.ಸಿ.ಐ. ಈಗಾಗಲೇ ಇದ್ದ ವಿದೇಶೀ ಖಾಸಗಿ ವಿ.ವಿ.ಗಳಿಗೆ ರತ್ನಗಂಬಳಿ ಹಾಸುವ, ಪಠ್ಯಕ್ರಮದ ಕೇಸರೀಕರಣ ಮಾಡುವ, ಹಿಂದುಳಿದ/ಪರಿಶಿಷ್ಟರಿಗೆ ಮೀಸಲಾತಿ ನಿರ್ಲಕ್ಷ ಮಾಡುವ ಪ್ರಯತ್ನಗಳ ಮುಂದುವರಿಕೆ. ಮೊದಲ ಎನ್.ಡಿ.ಎ. ಸರಕಾರ ಅಧಿಕಾರದಲ್ಲಿದ್ದಾಗ 2003ರಲ್ಲಿ ಯುಜಿಸಿ ಖಾಸಗೀಕರಣಕ್ಕೆ ಶಿಫಾರಸು ಮಾಡಿದ್ದ ಅಂಬಾನಿ–ಬಿರ್ಲಾ ವರದಿಯನ್ನು ಜಾರಿ ಮಾಡಲು ಹೊರಟಿದ್ದು ತೀವ್ರ ವಿರೋಧದಿಂದಾಗಿ ಕೈಬಿಟ್ಟಿತ್ತು. ಅದೇ ಪ್ರಯತ್ನದ ಮುಂದುವರಿಕೆ ಇದು ಎಂದವರು ರಾಜ್ಯ ಎಸ್.ಎಫ್.ಐ. ಅಧ್ಯಕ್ಷ ಗುರುರಾಜ ದೇಸಾಯಿ. ಈ ಪ್ರಯತ್ನದ ವಿರುದ್ಧ ವಿದ್ಯಾರ್ಥಿಗಳನ್ನು ಅಣಿ ನೆರೆಸಿ ಹೋರಾಟ ಮಾಡಬೇಕು. ಅದಕ್ಕೆ ಪ್ರಜಾಸತ್ತಾತ್ಮಕ ಶಕ್ತಿಗಳ ಬೆಂಬಲ ತೆಗೆದುಕೊಳ್ಳಬೇಕು ಸಾಮಾಜಿಕ ಮಾಧ್ಯಮಗಳಲ್ಲಿ ಸೇರಿದಂತೆ ತೀವ್ರ ಅಭಿಯಾನ ಕೈಗೊಳ್ಳಬೇಕು, ಎಂದು ಅವರು ಕರೆ ಕೊಟ್ಟರು.

ಗೋಷ್ಟಿ–1 ರ ಅಧ್ಯಕ್ಷತೆ ವಹಿಸಿದ್ದ ಖಗೋಳ ಭೌತಶಾಸ್ತ್ರಜ್ಞ ಡಾ. ಸಬ್ಯಸಾಚಿ ಚಟರ್ಜಿ ಮಾತನಾಡುತ್ತಾ ಶಿಕ್ಷಣವನ್ನು ಒಂದು ಉದ್ಯಮ, ಅದರಲ್ಲೂ ಉಚ್ಚ ಶಿಕ್ಷಣವನ್ನು ಲಾಭದಾಯಕ ಉದ್ಯಮ ಎಂದು ಅಧ್ಯಯನಗಳು ಹೇಳುವುದು, ಎಚ್.ಇ.ಸಿ.ಐ. ನಲ್ಲಿ ಇಬ್ಬರು ದೊಡ್ಡ ಉದ್ಯಮಪತಿಗಳು ಇರಬೇಕು ಎಂಬುದು ವಿಚಿತ್ರ ಎಂದರು.

ಅಪ್ರಾಯೋಗಿಕ ಅತಿ ಕೇಂದ್ರೀಕರಣದ ಪ್ರಸ್ತಾವ

ಗೋಷ್ಟಿ – 2 ರಲ್ಲಿ ಮುಂಬಯಿಯ ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಸೋಶಿಯಲ್ ಸಾಯನ್ಸಸ್ ನ ಪ್ರೊ. ರಾಮಕುಮಾರ್ ಮಾತನಾಡುತ್ತಾ ಉಚ್ಚಶಿಕ್ಷಣದ ಮೇಲೆ ನವ–ಉದಾರವಾದಿ ಪ್ರಹಾರವನ್ನು 1970–80ರಲ್ಲಿ ಅಮೆರಿಕದಲ್ಲಿ ರೋನಾಲ್ಡ್ ರೇಗನ್ ಮತ್ತು ಬ್ರಿಟನಿನ ಥ್ಯಾಚರ್ ಆರಂಭಿಸಿದ್ದರು. ಅದೇ ಮಾದರಿಯಲ್ಲಿ ಮೋದಿ ಸರ್ಕಾರ ಹೋಗುತ್ತಿದೆ. ಈ ದಾಳಿಗಳು ಆರಂಭವಾಗುವ ಮೂಲಕ ಈ ಎರಡೂ ದೇಶಗಳಲ್ಲಿ ಉಚ್ಚ ಶಿಕ್ಷಣ ವ್ಯಾಪಕವಾಗಿ ಶ್ರೀಮಂತವಾಗಿ ಬೆಳೆದ 'ಸುವರ್ಣ ಯುಗ'ವಿತ್ತು. ಆದರೆ ಭಾರತದಲ್ಲಿ ಉಚ್ಚ ಶಿಕ್ಷಣ ಯಾವಾಗಲೂ ಬಡವಾಗಿತ್ತು. ಖಾಸಗೀಕರಣ ಮತ್ತು ವ್ಯಾಪಾರೀಕರಣ ಬಡವರನ್ನು ಹೊರಗಿಡುತ್ತದೆ ಎಂಬುದಕ್ಕೆ ಪ್ರತಿಯಾಗಿ ಶಿಕ್ಷಣ ಸಾಲ ಪರಿಹಾರವೆನ್ನಲಾಗುತ್ತದೆ. ಈ 'ಪರಿಹಾರ'ವನ್ನು ವ್ಯಾಪಕವಾಗಿ ಜಾರಿ ಮಾಡಿದ ಅಮೆರಿಕದಲ್ಲಿ ಸಾಲ ಮಾಡಿ ಉಚ್ಚ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಅದನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಅಥವಾ ಕಾರ್ಪೊರೆಟ್ ಗಳ ಆಜೀವ ಜೀತದಾಳುಗಳಾಗಿದ್ದಾರೆ. ಭಾರತದಲ್ಲಿ ಇದರ ಪರಿಣಾಮ ಇನ್ನಷ್ಟು ಭೀಕರವಾಗಿರುತ್ತದೆ ಎಂದು ಅವರು ಎಚ್ಚರಿಸಿದರು. ಮೂರೂ ವಿಜ್ಞಾನ ಅಕಾಡೆಮಿಗಳು ಯುಜಿಸಿಯನ್ನು ಇನ್ನಷ್ಟು ಗಟ್ಟಿಗೊಳಿಸಿ ಸ್ವಾಯತ್ತತೆ ಕೊಟ್ಟು ಉಳಿಸಿಕೊಳ್ಳಬೇಕು ಮತ್ತು ಎಚ್.ಇ.ಸಿ.ಐ. ಪ್ರಸ್ತಾವ ಕೈಬಿಡಬೇಕು ಎಂದು ಒತ್ತಾಯಿಸಿ ಸರಕಾರಕ್ಕೆ ಜಂಟಿಯಾಗಿ ಪತ್ರ ಬರೆದಿದ್ದಾರೆ. ಮೂರೂ ವಿಜ್ಞಾನ ಅಕಾಡೆಮಿಗಳು ಇತಿಹಾಸದಲ್ಲಿ ಮೊದಲ ಬಾರಿಗೆ ಸರಕಾರದ ಯಾವುದೇ ನೀತಿಯನ್ನು ವಿರೋಧಿಸಿ ಪತ್ರ ಬರೆದಿದ್ದಾರೆ ಎಂಬುದರತ್ತ ಪ್ರೊ. ರಾಮಕುಮಾರ್ ಗಮನ ಸೆಳೆದರು. ತಾವು 'ಮುಂಬಯಿ ಕಲೆಕ್ಟಿವ್'ನ ಸಕ್ರಿಯ ಸದಸ್ಯರಾಗಿದ್ದು, ಅದರ ಪರವಾಗಿ ಸೌಹಾರ್ದ ಅಭಿನಂದನೆಗಳನ್ನು ತಿಳಿಸಲಿಚ್ಛಿಸುವುದಾಗಿ ಹೇಳಿದರು.


ಪ್ರೊ. ರಾಮಕುಮಾರ್

ಪ್ರೊ. ಮುಜಫರ್ ಅಸಾದಿ, ರಾಯಚೂರು ವಿ.ವಿ. ವಿಶೇಷ ಅಧಿಕಾರಿ ಮಾತನಾಡಿ, ಈ ಪ್ರಸ್ತಾವ ಪ್ರಭುತ್ವದ, ಸಾಂಸ್ಕೃತಿಕ ರಾಷ್ಟ್ರೀಯತೆ ಮತ್ತು ಮಾರುಕಟ್ಟೆಯ ಬಿಕ್ಕಟ್ಟಿನ ಸಂದರ್ಭದಲ್ಲಿ ಬಂದಿದೆಯೆಂದರು. ಸರಕಾರ ಇದ್ಯಾವುದರ ಬಗೆಗೂ ವಿಮರ್ಶಾತ್ಮಕ ಟೀಕೆ ಸಹಿಸಲು ತಯಾರಿಲ್ಲ. ಆದ್ದರಿಂದ ಇಂತಹವನ್ನು ತಡೆಯಲು ಈ ಪ್ರಸ್ತಾವ ಬಂದಿದೆ. ಇದು ಕೇಂದ್ರ–ರಾಜ್ಯ ಸಂಬಂಧಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದರು.

ಎಚ್.ಇ.ಸಿ.ಐ. ಪ್ರಸ್ತಾವ ಎಲ್ಲಾ ವಿ.ವಿ. ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಮಾನ ಗುಣಮಟ್ಟ ಮತ್ತು ಮಾನದಂಡ ಜಾರಿ ಮಾಡುವ ಉದ್ದೇಶ ಹೊಂದಿದೆ. ಆದರೆ ಸಮಾಜದಲ್ಲೂ ಶಿಕ್ಷಣ ಕ್ಷೇತ್ರದಲ್ಲೂ ಭೀಕರ ಶ್ರೇಣೀಕರಣ ಮತ್ತು ಅಸಮಾನತೆ ಇರುವಾಗ ಅದು ಹೇಗೆ ಸಾಧ್ಯ ಎಂದು ನೆಲಮಂಗಲ ಸರಕಾರಿ ಕಾಲೇಜಿನ ಡಾ. ಬಿ.ಯು.ಸುಮಾ ಪ್ರಶ್ನಿಸಿದರು. ಶಿಕ್ಷಣ ಸಂಸ್ಥೆಗಳ ಮೌಲ್ಯಾಂಕನ ಅತ್ಯಂತ ಅವೈಜ್ಞಾನಿಕ ವ್ಯವಸ್ಥೆಯಾಗಿದೆ. ಎಚ್.ಇ.ಸಿ.ಐ. ಪ್ರಸ್ತಾವ ಜಾರಿಯಾದರೆ ಸರಕಾರಿ ವಿದ್ಯಾ ಸಂಸ್ಥೆಗಳು ಉಳಿಯುವುದಿಲ್ಲ. ತಳಸಮುದಾಯಗಳ ಗ್ರಾಮೀಣ ಪ್ರದೇಶದ ಸಮುದಾಯಗಳ ವಿದ್ಯಾರ್ಥಿಗಳ ಶಿಕ್ಷಣಕ್ಕೆ

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**